
ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ನಟ ನಟಿಯರ ರಾಜಕೀಯ

ಏಪ್ರಿಲ್ 24, 2013 ಪುಟ 20 ರೂ. 14/-




ಚೌಳಿ ಮರ






ಪಾಪಿ ಸರ್ಕಾರದಲ್ಲಿ
ಸ್ವಾಮಿಗಳಿಗೂ ಉಳಿಗಾಲವಿಲ್ಲ



ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ

ವರುಣಾ: ಸಿದ್ದು ವಿರುದ್ಧ ಹಣದ ಹೊಳೆ



ಚುನಾವಣೆ ಸಮೀಕ್ಷೆ

ಹುಬ್ಬಳ್ಳಿ ಮೀಸಲು: ಕೈ-ಕಮಲ ಕುಸ್ತಿ




ಶಿಗ್ಗಾಂವಿ: ಬಸು ಮೇಲುಗೈ

ಮಂಡ್ಯ: ಅಂಬಿಗೆ ೇಣಿ ನೆರವು



ಜಮಖಂಡಿ: ನ್ಯಾಮಗೌಡ ವಿರುದ್ಧ ಬಂಡಾಯ





ಧಾರವಾಡ ಗ್ರಾಮೀಣ: ಸೀಮಾ ಮಸೂತಿ ಮನೆಗೆ




ಮಾಯಕೊಂಡ: ಬಸವರಾಜ ನಾಯ್ಕನಿಗೆ ಮುಳುಗು ನೀರು

ಕರಾವಳಿ: ಕಾಂಗ್ರೆಸ್ ಮಿಂಚು, ಬಿಜೆಪಿ ಸಂಚು

ಅಂಚಿನಿಂದ

ಬಾ.ಹಾ. ಉಪೇಂದ್ರ



ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಶೇ.95ರಷ್ಟು ಜನಕ್ಕೆ ಇಷ್ಟೇ ಸಂಬಳ ಸಿಗುತ್ತದೆ. ಕನಿಷ್ಠ ವೇತನವನ್ನೂ ನೀಡದ ಉದ್ದಿಮೆದಾರರೂ ಇದ್ದಾರೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುವ ಕಾರ್ಮಿಕರಿಗೂ ಕನಿಷ್ಠ ಕಾರ್ಮಿಕ ಕಾನೂನುಗಳನ್ನು ಅನ್ವಯಿಸದ ಎಷ್ಟೋ ಉದಾಹರಣೆಗಳಿವೆ. ಆದರೆ ಕಾರ್ಮಿಕ ಕಾನೂನಿನನ್ವಯ (ಇದನ್ನು ಜಾರಿ ಮಾಡಿಸಲೇಬೇಕೆಂದು ಹೋರಟರೆ ಕೆಲಸ ಕಳೆದುಕೊಳ್ಳಲು ಸಿದ್ಧರಾಗಿರಬೇಕು), ಪಡೆದುಕೊಳ್ಳಲು ಸಾಧ್ಯವಿರುವುದು ಕನಿಷ್ಠ ವೇತನವನ್ನು ಮಾತ್ರ. ಇದಕ್ಕಿಂತ ಹೆಚ್ಚನ್ನು ನೀಡಿ ಎಂದು ಕೇಳಿದರೆ ಬೆಂಗಳೂರಿನ ದೊಡ್ಡ ಬಹುರಾಷ್ಟ್ರೀಯ ಕಂಪೆನಿಗಳೂ ಸಹ 'ಸರ್ಕಾರ ನಿಗದಿ ಮಾಡಿರುವುದು ಮಟ್ಟದಲ್ಲಿ ಬಂಡವಾಳ ಹೂಡಿಕೆದಾರರಿಗೆ ಒದ್ದುತ್ತಿರುವ ಆಮಿಷಗಳಲ್ಲಿ ಒಂದು ಲೇಬರ್ ಫ್ಲೆಕ್ಸಿಬಿಲಿಟಿಯೂ ಆಗಿದೆ. ಅಂದರೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಅವಕಾಶ, ಯಾವಾಗ ಬೇಕೆಂದರೆ ಕೆಲಸದಿಂದ ತೆಗೆಯಬಹುದು ಮತ್ತು ಕನಿಷ್ಠ ವೇತನವನ್ನು ಅತ್ಯಂತ ಕನಿಷ್ಠವಾಗಿರುವಂತೆ ನೋಡಿಕೊಳ್ಳುತ್ತೇವೆ ಎಂದರ್ಥ.

ಹೆಚ್ಚಿನ ಕಾರ್ಮಿಕರು ಗುತ್ತಿಗೆ ಆಧಾರದಲ್ಲೇ ನೇಮಕಗೊಳ್ಳುತ್ತಿದ್ದಾರೆ ಎನ್ನುವುದರ ಅರ್ಥ, ಕಾರ್ಮಿಕರು ಕೆಲಸದ ಭದ್ರತೆ, ಸಂಘಟಿತವಾಗುವ ಹಕ್ಕು ಮತ್ತು ಸಾಮೂಹಿಕ ಚೌಕಾಸಿಯ ಹಕ್ಕನ್ನು ಕಳೆದುಕೊಳ್ಳುತ್ತಿದ್ದಾರೆ ಎಂದೇ ಆಗಿದೆ. ಹೀಗಾಗಿ ಇನ್ನೊಂದು ರೀತಿಯಲ್ಲಿ ಕನಿಷ್ಠ ಸಂಪತ್ತನ್ನು ಲೂಟಿ ಹೊಡೆದಿರುವ ಯಾವ ಬಂಡವಾಳ... ಅದನ್ನು ಮಾನ್ಯ ಮಾಡುವುದಿಲ್ಲ. ಆ ಮಾನ್ಯತೆಯ... ಚಳವಳಿಯ ಮೂಲಕ ಪಡೆದುಕೊಳ್ಳಲು ಕಾರ್ಮಿಕ ವರ್ಗ... ಪ್ರಯತ್ನಪಟ್ಟು ಯಶಸ್ವಿಯಾಗಿತ್ತು. ಯೂನಿಯನ್... ಕಟ್ಟಿಕೊಂಡು ಸಾಮೂಹಿಕ ಚೌಕಾಸಿಗೆ ಮುಂದಾಗುವುದು... ಈ ದೇಶದಲ್ಲಿ ಹಕ್ಕೇ. ಆದರೆ ಗುತ್ತಿಗೆ ಪದ್ಧತಿಯು... ಹಕ್ಕನ್ನು ದುರ್ಬಲವಾಗಿಸಿದೆ. ಕೆಲಸದ ಭದ್ರತೆಯಿಲ್ಲದ... ಈ ಹಕ್ಕನ್ನು ಚಲಾಯಿಸುವುದು ಸಾಧ್ಯವಿಲ್ಲ. ಹಾಗಾಗಿ... ಹಕ್ಕಿನ ಪ್ರಶ್ನೆ ಬರುವುದಿಲ್ಲ.

ಈಗ ಕಾನೂನುಪ್ರಕಾರ ಖಾತರಿಯಾಗಿರುವ ಹ... ದಿನಕ್ಕೆ 170ರಿಂದ 226 ರೂಪಾಯಿ ಮಾತ್ರ. ಯಾ... ಪಕ್ಷದ ಪ್ರಣಾಳಿಕೆಯಲ್ಲಿ ಇದರ ಕುರಿತು ಪ್ರಸ್ತಾಪವಿರು...

ಕನಿಷ್ಠ ವೇತನದ ಕುರಿತು ಮಾತನಾಡದ ಗರಿಷ್ಠ ಪ್ರಣಾಳಿಕೆಗಳು


ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಇನ್ನು ಮೂರ್ನಾಲ್ಕು ದಿನದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಪ್ರಣಾಳಿಕೆಗಳನ್ನು ಬಿಡುಗಡೆ ಮಾಡಲಿವೆ. ಅವುಗಳಲ್ಲಿ 2 ರೂ.ಗೆ ಕೆ.ಜಿ. ಅಕ್ಕಿ, ಮಿನಿ ಲ್ಯಾಪ್‌ಟಾಪ್-ಟ್ಯಾಬ್ಲೆಟ್, ಸಾಮೂಹಿಕ ಮದುವೆಯಾದವರಿಗೆ ತಾಳಿ-ಹಣ ಇತ್ಯಾದಿಗಳ ಘೋಷಣೆ ಇರುತ್ತದೆ. ಜೆಡಿಎಸ್ ಪಕ್ಷವು ಈಗಾಗಲೇ ಸಂಕ್ರಾಂತಿ ಆಚರಿಸಲು ಕೃಷಿ ಖಾತೆದಾರರಿಗೆ 5,000 ರೂ.ಗಳನ್ನು ನೀಡುವುದಾಗಿ ಘೋಷಿಸಿದೆ. ಇವೆಲ್ಲವೂ ಜನರನ್ನು ಭಿಕ್ಷುಕರನ್ನಾಗಿಸುವ ಕಾರ್ಯಕ್ರಮಗಳೇ ಹೊರತು ಇನ್ನೇನಲ್ಲ, ಏಕೆಂದರೆ ಕರ್ನಾಟಕ ಸರ್ಕಾರವು ಈ ವರ್ಷದ ಕನಿಷ್ಠ ವೇತನ (ತುಟ್ಟಿಭತ್ಯೆ ಸೇರಿ) ಎಷ್ಟಿರಬೇಕೆಂದು ಇಷ್ಟೇ. ಒಂದು ವೇಳೆ ಇನ್ನೂ ಹೆಚ್ಚು ಬೇಕೆನ್ನುವುದಾದಲ್ಲಿ ಕನಿಷ್ಠ ವೇತನವನ್ನು ಹೆಚ್ಚು ಮಾಡಲು ಸರ್ಕಾರವನ್ನು ಕೇಳಿ' ಎನ್ನುತ್ತಾರೆ. ಕಾರ್ಮಿಕ ಇಲಾಖೆಯಲ್ಲಿ ತಗಾದೆಯನ್ನೆತ್ತಿ ಸಂಧಾನ ಸಭೆಯಲ್ಲಿ ಕೂತು ವೇತನದ ಹೆಚ್ಚಳಕ್ಕಾಗಿ ಆಗ್ರಹಿಸಿದರೆ ಕಾರ್ಮಿಕ ಅಧಿಕಾರಿಗಳ ಸಿದ್ಧ ಉತ್ತರ ಎದುರಾಗುತ್ತದೆ. 'ಕಾನೂನಿನ ಪ್ರಕಾರ ಕನಿಷ್ಠ ವೇತನಕ್ಕಿಂತ ಹೆಚ್ಚು ಕೊಡಲೇಬೇಕೆಂದು ನಾವು ಒತ್ತಾಯ ಮಾಡುವಂತಿಲ್ಲ'

ಇಷ್ಟು ಹಣದಲ್ಲಿ ಬೆಂಗಳೂರು ಸೇರಿದಂತೆ ಈ ರಾಜ್ಯದಲ್ಲಿ 4 ಜನ ಸದಸ್ಯರಿರುವ ಒಂದು ಕುಟುಂಬವು ಮನೆ ಬಾಡಿಗೆ ಕಟ್ಟಿ, ಬಟ್ಟೆ ಹಾಕಿಕೊಂಡು, ಊಟ ಮಾಡಬೇಕು! ಇದರಲ್ಲೇ ಅವರ ಆರೋಗ್ಯ, ಶಿಕ್ಷಣ, ಮನರಂಜನೆ ಹಾಗೂ ಹಬ್ಬಹರಿದಿನಗಳೂ ನಡೆಯಬೇಕು!!

ವೇತನವೆನ್ನುವುದು ಗರಿಷ್ಠ ವೇತನವೂ ಆಗಿಬಿಡುತ್ತದೆ. ಬಂಡವಾಳ ಹೂಡಿಕೆ, ಜಾಗತೀಕರಣದ ಮೂಲಕ ಅಭಿವೃದ್ಧಿಯೋ ಅಭಿವೃದ್ಧಿ ಎನ್ನುವುದು ಎಲ್ಲಾ ರಾಜಕೀಯ ಪಕ್ಷಗಳ ಮೂಲಮಂತ್ರವಾಗಿದೆ. ಹಾಗಾಗಿ ಕನಿಷ್ಠ ವೇತನವು ಎಲ್ಲೂ 10,000 ರೂ.ಗಳನ್ನು ಮುಟ್ಟಿಲ್ಲ, ಅಂದರೆ ಕೇಂದ್ರ ಸರ್ಕಾರವು (ಇದು ಸಾಮಾನ್ಯವಾಗಿ ರಾಜ್ಯಗಳ ಕನಿಷ್ಠ ವೇತನಕ್ಕಿಂತ ಸ್ವಲ್ಪ ಹೆಚ್ಚಿರುತ್ತದೆ) ನಿಗದಿ ಮಾಡುವ ವೇತನವೂ ಸಹ, ಯಾವ ಬಾಬ್ತಿನಲ್ಲೂ 10,000ವನ್ನು ಮುಟ್ಟುವುದಿಲ್ಲ.

ಜನರನ್ನು ರಾಜಕೀಯ ಪಕ್ಷಗಳ ಯೋಜನೆಗಳ ಫಲಾನುಭವಿಗಳನ್ನಾಗಿ ಮಾಡುವುದರಲ್ಲಿ ಎಲ್ಲಾ ಸರ್ಕಾರಗಳಿಗೂ ಈಗಲೂ ಆಸಕ್ತಿ ಉಳಿದುಕೊಂಡಿದೆ. ಎನ್ನುವುದು ನಮ್ಮೆಲ್ಲರ ಕೇಂದ್ರ ಕಾಳಜಿಯ... ಸಂಗತಿಗಳಲ್ಲೊಂದಾಗಿರಬೇಕು. ಒಂದು ವೇಳೆ, ಆಕಸ್ಮಾತ್... ಯಾವುದಾದರೂ ಪಕ್ಷದ ಪ್ರಣಾಳಿಕೆಯಲ್ಲಿ ಇದ... ನುಸುಳಿಕೊಂಡು ಬಿಟ್ಟಿದ್ದರೆ ಅದನ್ನು ಜಾರಿ ಮಾಡುವುದು... ಆ ಪಕ್ಷಗಳ ಇದುವರೆಗಿನ ನೀತಿಗಳಲ್ಲಂತೂ... ಇರಲಿಲ್ಲವೆಂಬುದು ನಮಗೆಲ್ಲರಿಗೂ ವೇದ್ಯವಾಗಿರು... ಅಂಶವೇ. ಹಾಗಾಗಿ ಚುನಾವಣೆಯ ನಂತರ ಆ ಪಕ್ಷ... ಅಧಿಕಾರಕ್ಕೆ ಬಂದರೆ ಜಾರಿ ಮಾಡಬೇಕು, ಬರದಿದ್ದ... ಜಾರಿಗಾಗಿ ಹೋರಾಡಬೇಕು. ಈ ಪ್ರಶ್ನೆಗಳನ್ನು ನಾವ... ಹಾಕದೇ ಇರುವಂತೆ, ಮಾಧ್ಯಮಗಳಲ್ಲಿ ವಿವಿಧ ಪಕ್ಷಗಳ... ಘೋಷಿಸುವ 'ಜನಪ್ರಿಯ ಯೋಜನೆ'ಗಳ ಬಗ್ಗೆಯ... ಮಾತಾಗುತ್ತಿರುತ್ತದೆ. ಪ್ರಜ್ಞಾವಂತರು ಸಾಲುಗಳ ನಡು...





THE MINIMUM WAGE JOB

ಈಗಾಗಲೇ ಹೊರಡಿಸಿರುವ ಪ್ರಕಟಣೆಯು 'ಹಸಿವಿನ ವೇತನ'ವನ್ನು ನಿಗದಿ ಮಾಡಿದೆ. ಅದರ ಪಟ್ಟಿಯಲ್ಲಿ 77 ರೀತಿಯ ಉದ್ಯೋಗಗಳನ್ನು ಕಾರ್ಮಿಕ ಇಲಾಖೆಯು ಪಟ್ಟಿ ಮಾಡಿದ್ದು 'ಪಟ್ಟಿಯಲ್ಲಿಲ್ಲದ ಉಳಿದ ಎಲ್ಲಾ ರೀತಿಯ ಉದ್ಯೋಗಗಳಿಗೂ' ಕನಿಷ್ಠ ವೇತನವನ್ನು ನಿಗದಿ ಮಾಡಲಾಗಿದೆ.

ಕಾರ್ಮಿಕ ಇಲಾಖೆಯ ಪ್ರಕಾರವೇ ಕೃಷಿ ಕಾರ್ಮಿಕರೂ ಸೇರಿದಂತೆ 3 ಕೋಟಿಗೂ ಹೆಚ್ಚು ಶ್ರಮಿಕ ಸಮೂಹಕ್ಕೆ ಈ ಕನಿಷ್ಠ ವೇತನವು ಅನ್ವಯವಾಗುತ್ತದೆ. ತುಟ್ಟಿಭತ್ಯೆ ಸೇರಿ ಈ 3 ಕೋಟಿ ಜನರಿಗೆ ನೀಡಬೇಕಾದ ವೇತನವು ಕನಿಷ್ಠ 170 ರೂ. ಮತ್ತು ಗರಿಷ್ಠ 226 ರೂ.ಗಳಾಗಿವೆ. ಅಂದರೆ ತಿಂಗಳಿಗೆ 5,100 ರೂ.ಗಳಿಂದ 6,780 ರೂ.ಗಳು. ಇದೇ ವೇತನವು ಬೆಂಗಳೂರು ನಗರದಲ್ಲಿ ವಾಸಿಸುತ್ತಿರುವ ಕಾರ್ಮಿಕರಿಗೂ ಅನ್ವಯಿಸುತ್ತದೆ. ಈ ಏಪ್ರಿಲ್ 1ರಿಂದ ಈಗಾಗಲೇ ಇದು ಜಾರಿಗೆ ಬಂದಿದೆ.

ಗುತ್ತಿಗೆ ಆಧಾರದ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರೀ ಸ್ವಾಮ್ಯದ ಎಲ್ಲಾ ಉದ್ದಿಮೆಗಳಲ್ಲಿ ಮತ್ತು

ಇದನ್ನು ಹಸಿವಿನ ವೇತನ ಎಂದಲ್ಲದೇ ಇನ್ನೇನೂ ಕರೆಯುವುದು? ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (Indian Council of Medical Research - ICMR) ನಿಗಧಿಪಡಿಸಿರುವಂತೆ 2,700 ಕಿ.ಕ್ಯಾಲರಿಯಷ್ಟು ಶಕ್ತಿ ನೀಡುವ, ವಿವಿಧ ಪೌಷ್ಟಿಕಾಂಶಗಳನ್ನು ಹೊಂದಿರುವ ಆಹಾರವನ್ನು ಪ್ರತಿ ವಯಸ್ಕ ವ್ಯಕ್ತಿ ತಿನ್ನಬೇಕು. ಅದಕ್ಕೆ ಈಗಿನ ಬೆಲೆಗಳಲ್ಲಿ ಒಬ್ಬ ವ್ಯಕ್ತಿಗೆ 71.50 ರೂ ಆಗುತ್ತದೆ. ಅಂದರೆ ಒಂದು ಕುಟುಂಬಕ್ಕೆ 286 ರೂ.ಗಳು. ಅಂದರೆ ಸರ್ಕಾರವು ಕನಿಷ್ಠ ಊಟಕ್ಕೆ ಸಾಕಾಗುವಷ್ಟು ವೇತನವನ್ನೂ ನಿಗದಿಪಡಿಸಿಲ್ಲ.

2 ರೂ.ಗೆ ಕೆ.ಜಿ ಅಕ್ಕಿಯಿಂದ ಹಿಡಿದು, ಉಚಿತ ಲ್ಯಾಪ್‌ಟ್ಯಾಪ್/ಟ್ಯಾಬ್ಲೆಟ್‌ವರೆಗೆ ಏನೆಲ್ಲಾ ನೀಡುತ್ತೇವೆಂದು ಹೇಳಲಿರುವ ಒಂದು ಪಕ್ಷವೂ ಈಗ ನಿಗದಿಯಾಗಿರುವ ಕನಿಷ್ಠ ವೇತನವನ್ನು ವಿರೋಧ ಮಾಡಿಲ್ಲ. ಅಂದರೆ ಹಸಿವಿನ ವೇತನ ನೀಡುವುದಕ್ಕೆ ಸರ್ವಸಮ್ಮತಿ, ಭಿಕ್ಷೆಯ ರೂಪದಲ್ಲಿ ಹಿಡಿ ಅಕ್ಕಿ - ಇದು ಎಲ್ಲಾ ಪಕ್ಷಗಳ ನೀತಿಯಾಗಿದೆ. ಎಲ್ಲಾ ರಾಜಕೀಯ ಪಕ್ಷಗಳೂ ಕೇಂದ್ರ ಹಾಗೂ ರಾಜ್ಯ

ಏಕೆಂದರೆ 5 ವರ್ಷಗಳಿಗೊಮ್ಮೆ ಜನರ ಮುಂದೆ ಹೋಗಬೇಕಾದ ಅನಿವಾರ್ಯತೆಯನ್ನು ಸಂಸದೀಯ ಪ್ರಜಾತಂತ್ರವು ಖಾತರಿಗೊಳಿಸಿದೆ. ಅದು ಖಾತರಿಗೊಳಿಸಿರುವುದು ಅಷ್ಟನ್ನು ಮಾತ್ರವೇ ಆಗಿದೆ. ಹೀಗಾಗಿ ವಿವಿಧ ಯೋಜನೆಗಳಡಿ ಜನರಿಗೆ ಕೆಲವು ಸೌಲಭ್ಯಗಳನ್ನು ನೆಪಮಾತ್ರಕ್ಕೆ ನೀಡುವ ಅಗತ್ಯ ರಾಜಕೀಯ ಪಕ್ಷಗಳಿಗಿದೆ. ಅದರ ಮೂಲಕ ಸರ್ಕಾರವು 'ನೀಡುವ' ದಾತನ ಸ್ಥಾನದಲ್ಲೂ, ಜನರು 'ಪಡೆದುಕೊಳ್ಳುವ' ಫಲಾನುಭವಿಗಳ ಸ್ಥಾನದಲ್ಲೂ ಸ್ಥಿರವಾಗುತ್ತಾರೆ. ಬೇಡುವವರಿಗೆ ಆಯ್ಕೆಯ ಹಕ್ಕಿರುವುದಿಲ್ಲ, ಚುನಾವಣೆಯ ಸಂದರ್ಭದಲ್ಲಿ ಓಟಿನ ಹಕ್ಕು ಪಡೆದುಕೊಂಡಿರುವವರೂ ಅದನ್ನು 500ರಿಂದ 5000 ರೂ.ಗಳವರೆಗೆ ಮಾರಿಕೊಳ್ಳುವ ಅವಕಾಶವನ್ನು ಜಾಗತೀಕರಣ ಯುಗದ ನಂತರದ ಪ್ರಜಾತಂತ್ರವು ನೀಡಿದೆ.

ಆದರೆ ವೇತನವು ಹಕ್ಕಿನ ಪ್ರಶ್ನೆಯ ಭಾಗವಾಗಿ ಬರುತ್ತದೆ. ತಾನು ಮಾಡುವ ಕೆಲಸದ ಮೌಲ್ಯವಾಗಿ ತನಗಿಷ್ಟು ಸಂಬಳ ನೀಡಬೇಕೆನ್ನುವ ಶ್ರಮಿಕವರ್ಗದ ಹಕ್ಕು ಅದಾಗಿರುತ್ತದೆ. ಆದರೆ ಇದೇ ಕಾರ್ಮಿಕರ ಶ್ರಮಶಕ್ತಿಯಿಂದ ಉತ್ಪತ್ತಿಯಾದ

ಇರುವ ಸತ್ಯವನ್ನು ಹುಡುಕಿ ಹೇಳುವ ಕೆಲಸವನ್ನು ಮಾಡಬೇಕಾಗುತ್ತದೆ.

ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸದ, ಕನಿಷ್ಠ ವೇತನ... 20,000 ರೂ.ಗಳನ್ನು ಘೋಷಿಸದ, ಎಲ್ಲಾ ಬಗೆಯ... ಕಾರ್ಮಿಕರಿಗೂ ಕೆಲಸದ ಭದ್ರತೆ, ಸಂಬಳದ ಭದ್ರತೆ ಮತ್ತು... ಸಾಮಾಜಿಕ ಭದ್ರತೆಗಳನ್ನು ಖಾತರಿಗೊಳಿಸದ ಯಾವ... ಸರ್ಕಾರವೂ ಜನಪರ ಸರ್ಕಾರವಲ್ಲ; ಯಾವ ಪಕ್ಷವೂ ಜನಪರವಲ್ಲ, ರೈತ - ಕಾರ್ಮಿಕರನ್ನು ಮೋಸಗೊಳಿಸಲು ಚುನಾವಣೆಯೆನ್ನುವುದು ಇನ್ನೊಂದು ಹುನ್ನಾರವಷ್ಟೇ ಆಗಿದೆ. ಅದು ನಿಜವಲ್ಲದಿದ್ದರೆ, ಸದರಿ ನೋಟಿಫಿಕೇಷನ್‌ಅನ್ನು... ರಾಜಕೀಯ ಪಕ್ಷಗಳು ವಿರೋಧಿಸಬೇಕು ಮತ್ತು ತಮ್ಮ... ಸರ್ಕಾರ ಅಧಿಕಾರಕ್ಕೆ ಬಂದರೆ ಬದುಕಲು ಸಾಧ್ಯವಿರುವಷ್ಟು... ವೇತನ (ಕನಿಷ್ಠ 20,000 ರೂ.ಗಳು)ವನ್ನು ಕನಿಷ್ಠ ವೇತನವಾಗಿ... ಘೋಷಿಸುತ್ತೇವೆಂದು ಹೇಳಬೇಕು. ಈ ಘೋಷಣೆಯೊಂದಿಗೆ... ನಾಡಿನ ಪ್ರಗತಿಪರ ಸಂಘಟನೆಗಳು ಮುಂದಿನ ಒಂದು... ತಿಂಗಳು ಒಂದಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸಾಧ್ಯವೇ?

...ಂತೂ ತೊಲಗಲಿದೆ ಬಿಜೆಪಿ ಸರ್ಕಾರ



• ಗೌರಿ ಲಂಕೇಶ್
editorlankesh@gmail.com

...ು ವರ್ಷಗಳ ಹಿಂದೆ ಇದೇ ಅಂಕಣದಲ್ಲಿ ...ಕದ ಆಧುನಿಕ ಇತಿಹಾಸದಲ್ಲಿ ಇವತ್ತು ಮೇ ...008 ಒಂದು ಕಪ್ಪು ದಿನ. ಯಾವುದು ಆಗ ...ದು ನಾವೆಲ್ಲ ಆಶಿಸಿದ್ದೆವೋ ಅದು ...ೋಗಿದೆ. ಬಿಜೆಪಿ ಎಂಬ ಫ್ಯಾಸಿಸ್ಟ್ ಪಕ್ಷ ಸರಳ ...ತದಷ್ಟು ಹತ್ತಿರದ ಸ್ಥಾನಗಳನ್ನು ಪಡೆದು ... ದಿನಗಳಲ್ಲಿ ಅಧಿಕಾರದ ಚುಕ್ಕಾಣಿಯನ್ನು ...ಲಿದೆ. ಆನಂತರ ನಮ್ಮ ರಾಜ್ಯದಲ್ಲಿ ಎಂತಹ ...ತಗಳು ಸಂಭವಿಸಲಿವೆ ಎಂದು ಈಗಲೇ ...ಬಹುದು" ಎಂದು ಬರೆದಿದ್ದೆ. ಆ ...ಗಳು ಎಷ್ಟು ನಿಜವಾಗಿದ್ದವು ಎಂಬುದಕ್ಕೆ ಸಾಕ್ಷಿ ... ರಾಜ್ಯದ ಜನತೆ ಬಿಜೆಪಿಯನ್ನು ...ಣೆಯಲ್ಲಿ ಸೋಲಿಸಲು ತುದಿಗಾಲ ಮೇಲೆ ...ವುದು!

...ಗ ಎಲ್ಲರ ಅಂದಾಜಿನಂತೆ ಬಿಜೆಪಿ ಬರುವ ...ಣೆಯಲ್ಲಿ ನೆಲ ಕಚ್ಚುವುದು ಗ್ಯಾರಂಟಿ ಆಗಿದೆ. ...ಕಳೆದ ಐದು ವರ್ಷಗಳ ಅಧಿಕಾರಾವಧಿಯಲ್ಲಿ ... ಮತ್ತು ಅದರ ಚೆಡ್ಡಿ ಸಂಘಟನೆಗಳು ನಮ್ಮ ... ವಿವಿಧ ಅಂಗಾಂಗಗಳಲ್ಲಿ ಬಿತ್ತಿರುವ ಕೋಮು ...ಜಾತಿ ವಿಷವನ್ನು ತೊಡೆದು ಹಾಕಲು ಇನ್ನೂ ...ಷ್ಟು ಕಾಲ ಮತ್ತು ಶ್ರಮ ಬೇಕಾಗಬಹುದು. ...ಅಲ್ಲ, ಮುಂದೆಂದೂ ನಮ್ಮ ರಾಜ್ಯದ ಜಾಣ ...ದರು ಅಪ್ಪಿತಪ್ಪಿಯೂ ಮತ್ತೊಮ್ಮೆ ಬಿಜೆಪಿಯನ್ನು ...ರಕ್ಕೆ ತರದಂತೆ ಅವರನ್ನು ಎಚ್ಚರಿಸಬೇಕಿದೆ. ಆ ...ಲ್ಲಿ ಈ ವಾರದ ಅಂಕಣವನ್ನು ಬರೆಯುತ್ತಿದ್ದೇನೆ. ...ಒಂದು ರೀತಿಯಲ್ಲಿ ಬಿಜೆಪಿಯ ದುರಾಡಳಿತದ ... ಎಂದುಕೊಳ್ಳಬಹುದು.

...ಸ್ತವವಾಗಿ ಆರ್ಥಿಕ ಮತ್ತು ರಾಜಕೀಯ ...ಲ್ಲಿ ಬಿಜೆಪಿ ಮತ್ತು ಇತರೆ ರಾಜಕೀಯ ಪಕ್ಷಗಳ ... ಅಷ್ಟೇನು ವ್ಯತ್ಯಾಸವಿಲ್ಲ. ಆದರೆ ಬಿಜೆಪಿ ಇತರೆ ...ಗಿಂತ ಅಪಾಯಕಾರಿ ಎಂಬುದರ ಬಗ್ಗೆ ಎರಡು ...ಲ್ಲ. ಅದನ್ನು ಬಿಜೆಪಿ ಸ್ವತಃ ರಾಜ್ಯದ ಜನರ ...ೆ ಸಾಬೀತುಪಡಿಸಿದೆ. ಹೋದ ಚುನಾವಣೆಯ ...ರ್ಭದಲ್ಲಿ ಬಿಜೆಪಿಯ ನಾಯಕರು ತಾವು ವಿಭಿನ್ನ, ...ಂತರ, ಸನ್ನಡತೆಯವರ, ಸಚ್ಚಾರಿತ್ರ್ಯವಂತರ, ...ಕ್ತರ, ಸನಾತನ ಮೌಲ್ಯಗಳನ್ನು ...ಡಿಯುವವರ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದದ್ದು ...ವೆಯೇ? ಆದರೆ ಮೊನ್ನೆ ಪ್ರಾರಂಭವಾದ ...ು ಸಂಕಲ್ಪ ಯಾತ್ರೆ'ಯಲ್ಲಿ ಯಾವ ಬಿಜೆಪಿ ...ಕನೂ ಇಂತಹ ಮಾತುಗಳನ್ನಾಡದಿರುವುದು ...ಾರ್ಹ. ಯಾಕೆಂದರೆ ಅಂತಹ ಯಾವ ...ಗಳನ್ನೂ ಚೆಡ್ಡಿಗಳು ಇಂದು ತಮ್ಮ ಮೇಲೆ ...ಪಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ!

...ಳೆದ ಐದು ವರ್ಷಗಳ ಅವಧಿಯಲ್ಲಿ ಈ ಬಿಜೆಪಿ ...ಗಳು ನಡೆಸಿದಂತಹ ಬ್ರಹ್ಮಾಂಡ ಭ್ರಷ್ಟಾಚಾರ, ... ಗಣಿಗಾರಿಕೆ, ಭೂ ಕಬಳಿಕೆ, ಸ್ವಜನ ಪಕ್ಷಪಾತ, ...ಗಳ ಇತ್ಯಾದಿ, ಇತ್ಯಾದಿಗಳು ಅಸಹ್ಯ ...ಸುತ್ತವೆ. ಆದರೂ ವಿಧಿ ಇಲ್ಲ, ಇವರ ...ಕಾಂಡಗಳನ್ನು ಜನರಿಗೆ ನೆನಪಿಸಲೇಬೇಕಿದೆ. ದಿನ ...ಂದರೆ ಭ್ರಷ್ಟಾಚಾರ, ಅನಾಚಾರ, ಅವುಗಳನ್ನು ... ಹಾಕಲು ಹೋಮ-ಹವನ, ದೇವಸ್ಥಾನಗಳಲ್ಲಿ ...ನೆ! ಈ ಘನಂದಾರಿ ಕೆಲಸಗಳಿಗೋಸ್ಕರ ...ಬ್ಬರು ಉಪಮುಖ್ಯಮಂತ್ರಿಗಳು ಮತ್ತು ಮೂರು ... ಮುಖ್ಯಮಂತ್ರಿಗಳ ಬದಲಾವಣೆ. ಇದು ...ಗಳ ಏಕೈಕ ಸಾಧನೆ ಎಂದರೆ ತಪ್ಪಾಗಲಾರದು.


...ಅಧಿಕಾರ ಹಿಡಿಯಲು ಇತರೆ ಪಕ್ಷಗಳ ಶಾಸಕರ ...ದಿ, ಆ ಖರೀದಿಗಾಗಿ ರಾಜ್ಯದ ಪ್ರಾಕೃತಿಕ ...ತ್ತಿನ ಲೂಟಿ, ಲೂಟಿಯಲ್ಲಿ ಪಾಲು ಸಿಗದಿದ್ದಕ್ಕೆ ...ಾಯ, ಬಂಡಾಯದಲ್ಲಿ ಪಾಲುಗೊಂಡವರಿಗೆ ... ಸ್ಥಾನ!

...ಅಧಿಕಾರ ಸಿಕ್ಕಿರುವುದೇ ಹಣ ದೋಚಲು ಎಂಬ ...ರಣೆ, ಅದನ್ನು ಸಾಧಿಸಲು ಮುಖ್ಯಮಂತ್ರಿಯ ...ಂಬ ಸ್ಥಾಪಿಸಿದ್ದ ಶಿಕ್ಷಣ ಸಂಸ್ಥೆಗೆ ಚೆಕ್ ಮೂಲಕ ..., ಲಂಚ ಕೊಟ್ಟು ಅದಿರು ಕಂಪನಿ ರಾಜ್ಯ ...ಸಕ್ಕೆ ಕೊಡಬೇಕಿದ್ದ ತೆರಿಗೆ ರೂಪದ ಕೋಟಿ ..., ಕೊನೆಗೆ ಸಿಕ್ಕಿಬಿದ್ದಿದ್ದಕ್ಕೆ ವಿರೋಧ ಪಕ್ಷದ ...ಯೋ ಆರೋಪ, ವಿಧಿ ಇಲ್ಲದೆ ಪರಪ್ಪನ ...ಾರದಲ್ಲಿ ಕಂಬಿ ಎಣಿಸುವಿಕೆ...

...ಿಯಣ್ಣನ ಚಾಳಿ ಮನೆ ಮಂದಿಗೆಲ್ಲ ಎಂಬಂತೆ ... ಭಾರತದಲ್ಲಿ ಪ್ರಥಮ ಬಿಜೆಪಿ ...ಮಂತ್ರಿಯಾದ ಯಡಿಯೂರಪ್ಪನ ಹಿಂದೆ ಆತನ ಸಚಿವ ಸಂಪುಟದ ಕೆಲವು ಸದಸ್ಯರೂ ಜೈಲಿಗೆ. ರೈತರನ್ನು ದೋಚಿದ್ದಕ್ಕೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತಾತನ ಪುತ್ರ, ಡಿನೋಟಿಫಿಕೇಶನ್ ಪ್ರಕರಣಕ್ಕೆ ಕೃಷ್ಣಯ್ಯ ಶೆಟ್ಟಿ, ಲಂಚ ಸ್ವೀಕರಿಸುವಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಕ್ಕೆ ಶಾಸಕ ಸಂಪಂಗಿ, ಸ್ನೇಹಿತನ ಮಡದಿಯ ಮೇಲೆ ಅತ್ಯಾಚಾರ ಎಸಗಿದ್ದಕ್ಕೆ ಹಾಲಪ್ಪ, ಅದಿರು ಗಣಿಯನ್ನು ಲೂಟಿಮಾಡಿದ್ದಕ್ಕೆ ಜನಾರ್ಧನ ರೆಡ್ಡಿ, ಸೋಮಶೇಖರ ರೆಡ್ಡಿ, ಮತ್ತು ಸಹಚರರ ಬಂಧನ... ಇಂತಹ ಜನನಾಯಕರನ್ನು ಪಡೆದ ಕನ್ನಡಾಂಬೆ ಧನ್ಯ.

ಇವರ ಕಪಟತನಗಳನ್ನು ಬಯಲಿಗೆಳದದ್ದಕ್ಕೆ ಲೋಕಾಯುಕ್ತ ಸ್ಥಾನವನ್ನೇ ಖಾಲಿ ಇಟ್ಟರು. ಮಾನವ ಹಕ್ಕುಗಳ ಆಯೋಗಕ್ಕೆ ದಿಕ್ಕು ದಿಶೆ ಇಲ್ಲದಂತೆ ಮಾಡಿದರು.

ಖಜಾನೆಯಲ್ಲಿ ದುಡ್ಡಿಲ್ಲ ಎಂದು ಹೇಳಿದ ಚೆಡ್ಡಿಗಳು, ಬಡವರಿಗೆ ಕೆಜಿಗೆ 2 ರೂಪಾಯಿಗೆ ಅಕ್ಕಿ ಕೊಡಲಿಲ್ಲ, ಸೂರಿಲ್ಲದವರಿಗೆ ಸೂರು ಕೊಡಲಿಲ್ಲ, ಸರ್ಕಾರಿ ಶಾಲೆಗಳಲ್ಲಿ ಪೂರ್ಣಕಾಲಿಕ ಶಿಕ್ಷಕರನ್ನು ನೇಮಿಸಲಿಲ್ಲ, ಶಿಕ್ಷಕರಿಗೆ ಸರಿಯಾದ ಸಮಯದಲ್ಲಿ ಸಂಬಳ ಕೊಡಲಿಲ್ಲ. ಆದರೆ ರಾಜ್ಯ ಬೊಕ್ಕಸದಿಂದ ಮಠಮಂದಿರಗಳಿಗೆ ದುಡ್ಡಿನ ಹುಚ್ಚುಮಳೆ ಸುರಿಸಿದರು. ಒಂದು ಅಂದಾಜಿನಂತೆ ಅಧಿಕಾರಕ್ಕೆ ಬಂದ ದಿನದಿಂದ ಇತ್ತೀಚಿನವರೆಗೆ ಈ ಕಳ್ಳರು ವಿವಿಧ ಹಿಂದೂ ಮಠ ಹಾಗೂ ದೇವಸ್ಥಾನಗಳಿಗೆ ಸುರಿದಿರುವುದು ಸುಮಾರು 855 ಕೋಟಿ ರೂಪಾಯಿಗಳು. ಕಳ್ಳರಿಗೆ ಪಾಪಪ್ರಜ್ಞೆ ಹೆಚ್ಚು ಎಂಬುದನ್ನು ಇದು ಸಾಬೀತು



ಪಡಿಸುತ್ತದಲ್ಲವೇ?!

ಚೆಡ್ಡಿಗಳ ಇನ್ನೊಂದು ಸಿದ್ಧಾಂತ ಸ್ವಕಾರ್ಯವೇ ಸರ್ಕಾರಿ ಕಾರ್ಯ ಎಂಬುದು. ಅದಕ್ಕೆಂದೇ ಬಡವರು ಬೆವರು ಸುರಿಸಿ ರಾಜ್ಯದ ಬೊಕ್ಕಸಕ್ಕೆ ಕಟ್ಟಿದ್ದ ತೆರಿಗೆ ಹಣವನ್ನು ಸಂಘ ಪರಿವಾರದ ರಾಷ್ಟ್ರೋತ್ಥಾನ ಪರಿಷತ್, ಆರೆಸ್ಸೆಸ್, ಸಾವಯವ ಕೃಷಿ ಮಿಷನ್ ಮುಂತಾದ ಸಂಸ್ಥೆಗಳಿಗೆ ಹಂಚಿದರು. ಇದರಿಂದ ರಾಜ್ಯದ ಜನರಿಗೆ ಯಾವ ಉಪಯೋಗ ಆಗದಿದ್ದರೂ ಚೆಡ್ಡಿಗಳು ಬರುವ ಒಂದೆರೆಡು ದಶಕಗಳ ಕಾಲ ಹೊಟ್ಟೆ ತುಂಬಾ ಕೋಸಂಬರಿ ಮತ್ತು ಕಬಾಬ್ ಸೇವಿಸುತ್ತಾ ಆರಾಮಾಗಿರಬಹುದು.

ಚೆಡ್ಡಿಗಳಿಗೆ ಬರೀ ಹಣ ಇದ್ದರೆ ಸಾಲದು. ಭೂಮಾತೆಯ ಭಕ್ತರಾದ ಅವರಿಗೆ ಭೂಮಿ ಬಗ್ಗೆ ಸಹಜವಾಗಿಯೇ ಅಪಾರ ಕಾಳಜಿ. ಆದ್ದರಿಂದಲೇ ಯಡಿಯೂರಪ್ಪ ರಾಷ್ಟ್ರೋತ್ಥಾನ ಪರಿಷತ್ತಿಗೆ ದೊಡ್ಡಬಳ್ಳಾಪುರದಲ್ಲಿ 76 ಎಕರೆ ಸರ್ಕಾರಿ ಗೋಮಾಳ ಭೂಮಿಯನ್ನು ಕಾನೂನುಬಾಹಿರವಾಗಿ ಮಂಜೂರು ಮಾಡಿದರು. ಜೊತೆಗೆ ರಾಷ್ಟ್ರೋತ್ಥಾನ ಪರಿಷತ್ತು ಪ್ರಕಟಿಸಿದ ಪುಸ್ತಕಗಳನ್ನು ಶಾಲೆ ಕಾಲೇಜುಗಳ ಲೈಬ್ರರಿಗಳಿಗೆ ಪೂರೈಸುವಂತೆ ಆದೇಶಿಸಿದರು. ಇದಕ್ಕೊಂದು ಸುಮಾರು 19 ಕೋಟಿ ರೂಪಾಯಿಯಷ್ಟು ದುಡ್ಡನ್ನು ವ್ಯಯಿಸಲಾಯಿತು.

ಚೆಡ್ಡಿಗಳ ಇನ್ನೊಂದು ಐಡಿಯಾ ಸಾವಯವ ಕೃಷಿ ಮಿಷನ್. ಇದರೊಳಗೆ ಸಂಘಪರಿವಾರದ ನಿಷ್ಠಾವಂತರನ್ನು ತೂರಿಸಿದರು. ಸಾವಯವ ಕೃಷಿಗೆಂದು ರಾಜ್ಯದ ಬಜೆಟ್ಟಿನಲ್ಲಿ 100 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರು. ಆ ನೂರು ಕೋಟಿ ರೂಪಾಯಿಗಳು ಸಂಘಪರಿವಾರಿಗಳ ದೊಡ್ಡ ಚೆಡ್ಡಿಗಳ ದೊಡ್ಡ ಜೇಬುಗಳನ್ನು ಸೇರಿತು. ರಾಜ್ಯದಲ್ಲಿ ಸಾವಯವ ಕೃಷಿ ಯಾವ ಹಂತದಲ್ಲಿದೆ ಎಂದು ಬಲ್ಲವರಿಲ್ಲ, ಆದರೆ ಸಂಘಿಗಳು ಮಾತ್ರ ಇದನ್ನು ಸ್ವಸಹಾಯ ಮಿಷನ್ ಮಾಡಿಕೊಂಡಿದ್ದರಲ್ಲಿ ಯಾವ ಅನುಮಾನವೂ ಇಲ್ಲ. ಅಂದಹಾಗೆ, ಬಿಜೆಪಿ ಸರ್ಕಾರ ರಾಜ್ಯ ಬೊಕ್ಕಸದಿಂದ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿ ಸಾವಿರಾರು ಸ್ವಘೋಷಿತ ರೈತರನ್ನು ವಿದೇಶ ಪ್ರವಾಸಕ್ಕೆ ಕರೆದುಕೊಂಡು ಹೋಗಿತ್ತು. ಅಂತಹ ರೈತರು ಚೀನಾದಲ್ಲಿ ಅಡಿಕೆಯನ್ನು ಹೇಗೆ ಬೆಳೆಯುತ್ತಾರೆಂಬುದನ್ನು ಕುರಿತು ಅದೆಷ್ಟು ಕಲಿತುಕೊಂಡು ಬಂದರೋ ಆ ಯಡಿಯೂರು ದೇವನೇ ಬಲ್ಲ.

ಜಾನುವಾರು ಸಾಗಾಟಗಾರರ ಮೇಲೆ ಹಲ್ಲೆ, 'ಲವ್ ಜಿಹಾದ್' ಎಂಬ ಕಪೋಲ ಕಲ್ಪಿತ ಗುಮ್ಮದ ಸೃಷ್ಟಿ, ನೈತಿಕ ಪೊಲೀಸ್‌ಗಿರಿ, ಚರ್ಚ್‌ಗಳ ಮೇಲೆ ದಾಳಿಗಳು, ಮತಾಂತರದ ಹೆಸರಲ್ಲಿ ಬರ್ಬರ ಹಲ್ಲೆ-ಹಿಂಸೆ, ಹಿಂದುತ್ವವಾದಿ ಸಶಸ್ತ್ರ ಪಡೆಗಳ ರಚನೆ, ಭಯೋತ್ಪಾದನೆ ನಿಗ್ರಹದ ಹೆಸರಿನಲ್ಲಿ ಅನೇಕ ಅಮಾಯಕ ಮುಸ್ಲಿಮರ ಬಂಧನ, ಇವರ ಬೊಗಳೆತನವನ್ನು ಬಯಲು ಮಾಡಿದ ಪತ್ರಕರ್ತರಿಗೆ ಬಂಧನ, ಕಾನೂನು ಕಿರುಕುಳ, ಇದು ಚೆಡ್ಡಿಗಳ 'ಪ್ರಜಾಪ್ರಭುತ್ವ' ಸಿದ್ಧಾಂತ.

ಇನ್ನು ಶಿಕ್ಷಣದ ಬಗ್ಗೆ ಇವರಿಗೆಷ್ಟು ಕಾಳಜಿ ಎಂದರೆ, ಒಂದೆಡೆ ಅಮಾಯಕ ಮಕ್ಕಳ ಮನಸ್ಸಿನಲ್ಲಿ ಧರ್ಮಾಂಧತೆ ಬಿತ್ತುವ ಭಗವದ್ಗೀತೆ ಪಠಣ ಮತ್ತು ಪಠ್ಯಪುಸ್ತಕಗಳ ಕೇಸರೀಕರಣ, ಇನ್ನೊಂದೆಡೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಖಾಸಗಿಯವರಿಗೆ ಶಿಕ್ಷಣ ವ್ಯಾಪಾರಕ್ಕೆ ನೆರವ!

ಅಧಿಕಾರ ಇರುವುದೇ ಹಣ ದೋಚುವುದಕ್ಕೆ ಎಂದು ಬಲವಾಗಿ ನಂಬಿದ್ದರಿಂದ ಅವರೆಂದೂ ಈ ರಾಜ್ಯದ ಜನರ ಅಗತ್ಯಗಳಿಗೆ, ಕಷ್ಟ ನಷ್ಟಗಳಿಗೆ ಸ್ಪಂದಿಸಲೇ ಇಲ್ಲ. ಬೀಜ ಗೊಬ್ಬರ ಕೇಳಿದ ರೈತರಿಗೆ ಗುಂಡೇಟು, ನೆರೆಯಲ್ಲಿ ಜನ ಮನೆಗಳನ್ನು ಕಳೆದುಕೊಂಡರೆ ಇವರು ಕಂಡುಕೊಂಡ ಪರಿಹಾರ ಪೂಜೆ, ಪುನಸ್ಕಾರ!

ಬಿಜೆಪಿಗಳ ನೈತಿಕತೆ ಯಾವ ಮಟ್ಟದ್ದೆಂದರೆ ಅವರ ಸಚಿವ ಸಂಪುಟದಲ್ಲೇ ಪರಸ್ತ್ರೀಯ ಮೇಲೆ ಲೈಂಗಿಕ ದಾಳಿ ಮಾಡಿದ, ಮದುವೆ ಆಗಿದ್ದರೂ ಬೇರೆ ಸ್ತ್ರೀಯೊಂದಿಗೆ ಸಂಬಂಧ ಹೊಂದಿದ್ದ, ವಿಧಾನ ಸಭೆಯಲ್ಲೇ ಬ್ಲೂಫಿಲಂ ನೋಡಿದ ಮಂತ್ರಿಗಳಿದ್ದರೂ, ಅದ್ಯಾವುದೋ ಮುಸಲ್ಮಾನ ಹುಡುಗ ಹಿಂದೂ ಹುಡುಗಿಯನ್ನು ಕೇವಲ ಮಾತನಾಡಿಸಿದ್ದಕ್ಕೆ ಅವರನ್ನು ಹಿಂಸಿಸಿ, ಬಡಿದು, ಪೊಲೀಸ್ ಠಾಣೆಯ ದರ್ಶನವನ್ನು ಕರುಣಿಸುತ್ತಿದ್ದ ಪುಂಡರಿಗೆ ಕಾನೂನಿನ ರಕ್ಷಣೆ ಕೊಡುತ್ತಿದ್ದಾರೆ.

ಚೆಡ್ಡಿಗಳ ಇಂತಹ ಅಟ್ಟಹಾಸಕ್ಕೆ ಒರ್ವ ಅಮಾಯಕ ಹುಡುಗಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವೂ ರಾಜ್ಯದಲ್ಲಿ ನಡೆಯಿತು. ಇದಾದದ್ದು 2009ರಲ್ಲಿ. ಅಶ್ವಿನಿ ಕುಲಾಲ್ ಎಂಬ ಯುವತಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ತಾಲೂಕಿನ ಏಳಿಂಜೆಯ ನಿವಾಸಿ. ಆಕೆ ದಿನನಿತ್ಯ ಬಸ್ಸಿನಲ್ಲಿ ಕಾಲೇಜಿಗೆ ಪ್ರಯಾಣಿಸುತ್ತಿದ್ದಳು. ಆಕೆಗೆ ಬಸ್ಸಿನ ಮುಸ್ಲಿಂ ಕಂಡಕ್ಟರ್ ಒಬ್ಬನೊಂದಿಗೆ ಸ್ನೇಹವಾಗಿತ್ತು.

ಇದನ್ನು ಗಮನಿಸಿದ ಸಂಘ ಪರಿವಾರದ ನೈತಿಕ ಪೊಲೀಸರು ಸ್ಥಳೀಯ ಪೊಲೀಸರ ಮೇಲೆ ಒತ್ತಡ ಹಾಕಿದರು. ಅಪ್ಪ, ಮಗಳನ್ನು ಠಾಣೆಗೆ ಕರೆಸಿದ ಪೊಲೀಸರು, ಮಗಳು ಅಂತಹ 'ಅಪರಾಧ' ಮಾಡದಂತೆ ನೋಡಿಕೊಳ್ಳಬೇಕೆಂದು ಅಪ್ಪನಿಗೆ 'ಉಪದೇಶ' ಕೊಟ್ಟು ಮನೆಗೆ ಕಳುಹಿಸಿದರು. ಅವಮಾನ ತಾಳಲಾರದೆ ಅಶ್ವಿನಿ ಮರುದಿನ ಆತ್ಮಹತ್ಯೆ ಮಾಡಿಕೊಂಡಳು.

ಇನ್ನು ಜಾನುವಾರು ಸಾಗಾಟ ಎಂಬ ಆರೋಪದಡಿ ಚೆಡ್ಡಿಗಳ ಹಿಂಸೆಗೆ ಬಲಿಯಾದ ಮುಸಲ್ಮಾನರು, ದಲಿತರು, ರೈತರು, ಹಿಂದುಳಿದವರಿಗೆ ಲೆಕ್ಕವಿಲ್ಲ. ಹಾಜಬ್ಬ, ಹಸನಬ್ಬ, ನಜೀರ್, ಪಾಟಾಳಿ ಕೃಷ್ಣಯ್ಯ, ದಯಾನಂದ ಶೆಟ್ಟಿ, ಕರಾಣಿ ಮತೀನ್, ಮುಸ್ತಾಫಾ, ಆಸಿಫ್...... ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅಷ್ಟೇ ಅಲ್ಲದೆ ಇವರು ಜಾನುವಾರು ರಕ್ಷಣೆಗೆಂದು ತರಲು ಯತ್ನಿಸಿದ ಕಾನೂನು ಜಾರಿ ಆಗಿಲ್ಲದಿದ್ದರೂ ಅದರಿಂದ ರಾಜ್ಯದ ಸಾವಿರಾರು ರೈತರು ಕಷ್ಟನಷ್ಟಗಳನ್ನು ಅನುಭವಿಸುವಂತಾಯಿತು.

ಕೋಮು ಗಲಭೆಗಳನ್ನು ನಡೆಸಿದ್ದಲ್ಲದೆ ಅಮಾಯಕ ಮುಸಲ್ಮಾನರ ಮೇಲೆ ಅವುಗಳ ಆರೋಪ ಹೊರಿಸಿ ಬಂಧಿಸಿದ್ದು, ಹುಬ್ಬಳ್ಳಿ ಕೋರ್ಟಿನಲ್ಲಿ ಪ್ರಮೋದ್ ಮುತಾಲಿಕ್ ಎಂಬ ಚೆಡ್ಡಿ ವೀರನ ಶ್ರೀ ರಾಮ ಸೇನೆಯ ಸದಸ್ಯರು ಬಾಂಬ್ ಸ್ಫೋಟಿಸಿದ್ದರೂ ಮುಸಲ್ಮಾನರನ್ನು ಆರೋಪಿಗಳನ್ನಾಗಿಸಿ ಅವರನ್ನೆಲ್ಲ ಇಂದಿಗೂ ಜೈಲಿನಲ್ಲಿ ಕೊಳೆಯುವಂತೆ ಮಾಡಿರುವುದು, ದಾಳಿಗೊಳಗಾದ ಕ್ರಿಶ್ಚಿಯನ್ ಪಾದ್ರಿಗಳ ಮೇಲೆಯೇ ಹತ್ತಾರು ದೂರುಗಳನ್ನು ಜಡಿದು ಅವರು ಕೋರ್ಟಿಗೆ ಅಲೆಯುವಂತೆ ಮಾಡಿರುವುದು, ಮುಸಲ್ಮಾನರು ಈಶಾನ್ಯ ರಾಜ್ಯಗಳ ಜನರ ಮೇಲೆ ದಾಳಿ ಮಾಡಲಿದ್ದಾರೆಂಬ ಸುದ್ದಿ ಹಬ್ಬಿಸಿ ಸಾವಿರಾರು ಸಂಖ್ಯೆಯಲ್ಲಿ ಆ ರಾಜ್ಯಗಳ ಜನ ಗುಳೆ ಹೋಗುವಂತೆ ಮಾಡಿದ್ದು... ಒಂದಾ ಎರಡಾ ಇವರು ಮಾಡಿದ ಅನಾಹುತಗಳು...

ಈ ಹಿಂದೆ ಬಿಜೆಪಿಯ ನಾಯಕಿ ಸುಷ್ಮಾ ಸ್ವರಾಜ್ ಅವರ 'ಮಾನಸ ಪುತ್ರ'ನಾಗಿದ್ದ ಗಣಿ ಚೋರ ಜನಾರ್ದನ ರೆಡ್ಡಿ ಇವತ್ತಿಗೂ ಜೈಲಿನಲ್ಲಿದ್ದಾನೆ. ಈಗ ಜಾಮೀನಿನ ಮೇಲೆ ಹೊರಬಂದಿರುವ ಯಡ್ಡಿ, ಕಟ್ಟಾ ಶೆಟ್ಟಿ ಮತ್ತು ಇತರರು ಆತನನ್ನ ಸೇರಿದರೆ ಅಚ್ಚರಿ ಇಲ್ಲ. ಜೊತೆಗೆ ಲೋಕಾಯುಕ್ತರ ಮುಂದೆ ಭೂಕಬಳಿಕೆಯ ದೂರುಗಳನ್ನು ಎದುರಿಸುತ್ತಿರುವ ಆರ್. ಅಶೋಕ್ ಮತ್ತು ತಮ್ಮ ಮನೆಯಲ್ಲಿ ಹಣ ಎಣಿಸುವ ಯಂತ್ರವನ್ನೇ ಇಟ್ಟುಕೊಂಡಿದ್ದ ಈಶ್ವರಪ್ಪ ಕೂಡ ಸದ್ಯದಲ್ಲೇ ಕೃಷ್ಣನ ಜನ್ಮಸ್ಥಾನಕ್ಕೆ ಹೋಗುವ ಸಾಧ್ಯತೆಗಳಿವೆ.

ಅಂತೂ, ಈ ದರಿದ್ರರು ಅಧಿಕಾರದಿಂದ ತೊಲಗುತ್ತಿದ್ದಾರೆ. ಇದು ಕರ್ನಾಟಕಕ್ಕೆ ಸಿಕ್ಕಿರುವ ಬಿಡುಗಡೆ ಎಂದರೆ ತಪ್ಪಲ್ಲ. ○


ಕರಾವಳಿ

ಕಾಂಗ್ರೆಸ್ ಮಿಂಚು ಬಿಜೆಪಿ ಸಂಚು!

ಕರಾವಳಿಯ ಚುನಾವಣಾ ಜಿದ್ದಾಜಿದ್ದಿಗೀಗ ರಣೋನ್ಮಾದ ಬಂದಿದೆ. ಅಷ್ಟೂ ಪಕ್ಷದ ಜಗಜಟ್ಟಿಗಳ್ಯಾರೆಂದು ಗೊತ್ತಾಗಿದೆ. ಸಮರ ಕಲಿಗಳನ್ನು ಎದುರಾಳಿ ಪಾರ್ಟಿಯ ವೈರಿಗಿಂತ ಸ್ವಪಕ್ಷದ ಹಿತಶತ್ರುಗಳ ಹೊಟ್ಟೆಕಿಚ್ಚಿನ ಕಿತಾಪತಿಯೇ ಕಂಗಾಲಾಗಿಸಿದೆ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಲ್ಲ 13 ಕ್ಷೇತ್ರಗಳಲ್ಲಿ ಮುಖಾಮುಖಿ ಹೋರಾಟ ಏನಿದ್ದರೂ ಸಾಂಪ್ರದಾಯಿಕ ಎದುರಾಳಿಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆಯಷ್ಟೆ. ಕೆಲವು ಕ್ಷೇತ್ರದಲ್ಲಿ ಕೆಜೆಪಿ, ಜೆಡಿಎಸ್, ಬಿಎಸ್‌ಪಿ, ಎಸ್‌ಡಿಪಿಐ ಮತ್ತು ಸಿಪಿಐಎಂ ಗೆಲ್ಲಬೇಕಾದವರ ಸೋಲಿಸುವ, ಸೋಲಬೇಕಾದವರ ಗೆಲ್ಲಿಸುವ 'ಅಡ್ನಾಟ' ಆಡುವ ಸಂಭವವಿದೆ.


ಕರಾವಳಿಯ ಚುನಾವಣಾ ಆಖಾಡ ಎಂದರೇನೇ ಹಾಗೆ; ಸಂಘಪರಿವಾರದ ಸೈತಾನರ ಸಂಚು, ಮೋಸ, ವಂಚನೆಯ ಕುತಂತ್ರಗಾರಿಕೆ. ಮಾಡಬಾರದ್ದೆಲ್ಲ ಮಾಡಿ ಸಮುದ್ರ ತಡಿಯ ಎರಡೂ ಜಿಲ್ಲೆಯಲ್ಲಿ ಸೊರಗಿರುವ ಬಿಜೆಪಿ-ಆರೆಸ್ಸೆಸ್ ಗ್ಯಾಂಗ್ ಮತ್ತದೇ ಹಳೆಯ ಮಸಲತ್ತಿಗೆ ಸಾಣೆ ಹಾಕುತ್ತಿದೆ. ಆದರೆ ಈ ಅನೈತಿಕ ಸಂಸ್ಕೃತಿಯ ಪಾತಕಗಳಿಂದ ಕಷ್ಟ-ನಷ್ಟ-ನೋವು ಅನುಭವಿಸಿರುವ ಮತದಾರ ಬದಲಾವಣೆಗೆ ಹಾತೊರೆಯುತ್ತಿದ್ದಾನೆ. ಕಾಂಗ್ರೆಸ್ ಅನಿವಾರ್ಯ ಆಯ್ಕೆಯಾಗಿದೆ. ಮತ್ತೆ ಬಿಜೆಪಿ ಗೆದ್ದರೆ ಕರಾವಳಿಯಲ್ಲಿ ಬಿಜೆಪಿ-ಆರೆಸ್ಸೆಸ್ ಸೂತ್ರಧಾರ ಕಲ್ಲಡ್ಕ ಪ್ರಭಾಕರ್ ಭಟ್ ಬ್ರಹ್ಮರಾಕ್ಷಸನಂತಾಗುತ್ತಾನೆಂಬ ಭಯವೇ ಕಾಂಗ್ರೆಸ್‌ಗೆ ವರವಾಗುವ ಸಕಲ ಸಾಧ್ಯತೆ ಗೋಚರಿಸುತ್ತಿದೆ. ಉಪವಾಸ-ವನವಾಸದಿಂದ ಬಸವಳಿದಿರುವ ಕಾಂಗ್ರೆಸಿಗರು ಒಂದಾಗಿ ಮಿಂಚುತ್ತಿದ್ದರೆ, ಚಡ್ಡಿಗಳು ತರಹೇವಾರಿ ಸಂಚಿಗೆ ಸ್ಕೆಚ್ ಹಾಕುತ್ತಿದ್ದಾರೆ!

ಅಭ್ಯರ್ಥಿಗಳ ಆಯ್ಕೆ ಘೋಷಣೆಯಾಗುತ್ತಲೇ ಕರಾವಳಿಯಲ್ಲೊಂದು ರೌಂಡು ಹಾಕಿದಾಗ 'ಪತ್ರಿಕೆ'ಗೆ ಕಂಡ ಸ್ಥಿತಿ-ಗತಿ ಇಲ್ಲಿದೆ.



ಕೃಷ್ಣಪಾಲೇಮಾರ್

ಮಂಗಳೂರು (ಉ)


ಬಿಜೆಪಿಯ ಬ್ಲ್ಯೂಬಾಯ್ ಕೃಷ್ಣ ಪಾಲೇಮಾರನೇ ಆ ಪಕ್ಷದ ಎಲೆಕ್ಷನ್ ಹಾರ್ಸ್. ಕಾಂಗ್ರೆಸ್‌ನಲ್ಲಿ ಟಿಕೆಟ್‌ಗಾಗಿ ದಿವಂಗತ ಭೂಗತ ಡಾನ್ ಅಮರ್ ಆಳ್ವ ಪತ್ನಿ ಕೃಪಾ ಆಳ್ವ, ಮಾಜಿ ಶಾಸಕ ವಿಜಯಕುಮಾರ್ ಶೆಟ್ಟಿ ಮತ್ತು ಕಳೆದ ಬಾರಿ ಸೋತಿದ್ದ ಮೊಯ್ದಿನ್ ಬಾವಾ ನಡುವೆ ಮೇಲಾಟ ನಡೆದಿತ್ತು. ಕೃಪಾ ಆಳ್ವಗೆ ಕಾಂಗ್ರೆಸ್‌ನ ಟಾಪ್ ಲೀಡರ್‌ಗಳ 'ಸ್ನೇಹ'ವಿತ್ತೇ ವಿನಃ ಜನಸಾಮಾನ್ಯರ ಸಂಪರ್ಕವಿರಲಿಲ್ಲ. ಹೀಗಾಗಿ ಆಕೆ ಆದಷ್ಟೇ 'ತಮಾಷೆ' ಮಾಡಿದರೂ ಟಿಕೆಟ್ ದಕ್ಕಿಸಿಕೊಳ್ಳಲಾಗಲಿಲ್ಲ. ಮೊಯ್ದಿನ್ ಬಾವಾ ಲೋಪ್ರೊಫೈಲ್ ಫೆಲೋ. ಕ್ಷೇತ್ರದ ಜನರಿಗ್ಯಾಕೋ ಈತ ಸಹ್ಯವಾಗುತ್ತಿಲ್ಲ. ಹೀಗಾಗಿ ನಿರುಪದ್ರವಿ ವಿಜಯಕುಮಾರ್ ಶೆಟ್ಟಿಗೆ ಛಾನ್ಸ್ ಕೊಡಲು ಟಿಕೆಟ್‌ದಾತರು ನಿರ್ಧರಿಸಿದ್ದಾರೆ. ಕೆಜೆಪಿಯಿಂದ ಮೀನುಗಾರಿಕಾ ನಿಗಮದ ಮಾಜಿ ಅಧ್ಯಕ್ಷ ರಾಮಚಂದರ್ ಬೈಕಂಪಾಡಿ ನಿಂತಿದ್ದಾರೆ.


ವಿಜಯ್‌ಕುಮಾರ್ ಶೆಟ್ಟಿ

ಗಣನೀಯ ಸಂಖ್ಯೆಯಲ್ಲಿರುವ ಮೊಗವೀರ (ಮೀನುಗಾರ) ಸಮುದಾಯದ ದೊಡ್ಡ ಮೊತ್ತದ ಓಟು ರಾಮಚಂದರ್ ಕೀಳುವುದು ಬಿಜೆಪಿಗೆ ಹಾನಿಮಾಡಲಿದೆ. ಪಾಲೇಮಾರನ ಜನದ್ರೋಹ, ರಿಯಲ್ ಎಸ್ಟೇಟ್ ಕುಳಗಳ ಹಿತರಕ್ಷಣೆಗಾಗಿ ಸಾಮಾನ್ಯ ಜನರ ಗೋಳು ಹೊಯ್ದುಕೊಂಡಿದ್ದು, ಅವ್ಯವಹಾರ, ಅನೈತಿಕ ಚಟುವಟಿಕೆಗಳಿಂದ ಬಿಜೆಪಿಯ ಸೊಂಟವನ್ನೇ ಪಾಲೇಮಾರ್ ಕ್ಷೇತ್ರದಲ್ಲಿ ಮುರಿದು ಹಾಕಿದ್ದಾನೆ. ಕಾಂಗ್ರೆಸ್‌ನ ಕ್ಯಾಂಡಿಡೇಟ್ ವಿಜಯಕುಮಾರ್ ಶೆಟ್ಟಿ ಹಿಂದೆ ಬಂದರೆ ಒದೆಯದ, ಮುಂದೆ ನಿಂತರೆ ಹಾಯದ ಪ್ರಾಣಿ. ಹೀಗಾಗಿ ಆತನೆಂದರೆ ಕ್ಷೇತ್ರದಲ್ಲಿ ನಿರ್ಣಾಯಕರಾದ ಮುಸ್ಲಿಮರಿಗೆ ಅದೇನೋ ಒಂಥರಾ ನಂಬಿಕೆ-ಪ್ರೀತಿ.


ಯೋಗೀಶ್ ಭಟ್

ಸೋಲುವ ಭೀತಿಯಲ್ಲಿರುವ ಪಾಲೇಮಾರ್ ಕಳ್ಳ ಗಂಟು ಬಿಚ್ಚಿ ಹಣ ನೀರಿನಂತೆ ಹರಿಸುವ ಸಾಧ್ಯತೆಯಿದೆ. ಆ ಕಳಂಕಿತ ಏನೇ ಮಾಡಿದರೂ ಕ್ಲೀನ್ ಇಮೇಜಿನ ಕಾಂಗ್ರೆಸ್ ಹುರಿಯಾಳು ವಿಜಯಕುಮಾರ್ ಶೆಟ್ಟಿ ಎದುರು ಈ ಬಾರಿ ಗೆಲ್ಲುವುದು ಅನುಮಾನ. ಹಿಂದೆರಡು ಬಾರಿ ಗೆದ್ದು ಕ್ಷೇತ್ರ ಗಲೀಜು ಮಾಡಿರುವ ಪಾಲೇಮಾರ್‌ಗೆ ಸುರತ್ಕಲ್ ಮಂದಿ ವಿಶ್ರಾಂತಿ ಕೊಡಲು ನಿರ್ಧರಿಸಿದ್ದಾರೆ.


ಜೆ.ಆರ್.ಲೋಬೋ


ಯು.ಟಿ.ಖಾದರ್

ಮಂಗಳೂರು (ದ)


ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಮತ್ತು ಬಿಲ್ಲವರು ಹೆಚ್ಚಿರುವ ಈ ಕ್ಷೇತ್ರದಲ್ಲಿ ಯೋಗೀಶ್ ಭಟ್ ಎಂಬ ಕೊಂಕಣಿ ಕುಳವನ್ನು ಬಿಜೆಪಿ ಐದನೇ ಬಾರಿ ಕಣಕ್ಕಿಳಿಸಿದೆ. ನಿರಂತರ 20 ವರ್ಷಗಳಿಂದ ಶಾಸಕನಾಗಿರುವ ಭಟ್‌ನಿಂದ ಮೂರು ಬಿಲ್ಲಿ ಪ್ರಯೋಜನ ಮಂಗಳೂರಿಗೆ ಆಗಿಲ್ಲ. ತಾನು ಸಕಲ ಧರ್ಮಪ್ರಿಯನೆಂಬಂತೆ ಪೋಜು ಕೊಡುವ ಭಟ್ ಪಬ್ ದಾಳಿ, ಹೋಮ್‌ಸ್ಟೇ ದಾಳಿ, ಅನೈತಿಕ ಪೊಲೀಸ್‌ಗಿರಿ, ಕೋಮು ದಾಂಧಲೆ ಆದಾಗೆಲ್ಲ ಷಂಡನಂತೆ ಅಡಗಿ ಕುಳಿತಿದ್ದ. ಒಳಗೊಳಗೇ ಚಡ್ಡಿ ಧರ್ಮ ಪಾಲಿಸುವ ಭಟ್ ಬಗ್ಗೆ ಮತದಾರರಿಗೆ ಬೇಸರ ಬಂದಿದೆ.

ಈ ಸಲ ಕಾಂಗ್ರೆಸ್ ಪ್ರಬಲ ಅಭ್ಯರ್ಥಿಯನ್ನ ಹೂಡಿದೆ. ಜೆ.ಆರ್. ಲೋಬೋ ಎಂಬ ಜನಸಂಪರ್ಕದ ಸಜ್ಜನನಿಗೆ ಟಿಕೆಟ್ ಕೊಡಲಾಗಿದೆ. ಆತ ಎಸಿ ಮಟ್ಟದ ಅಧಿಕಾರಿಯಾಗಿ, ಮಹಾನಗರ ಪಾಲಿಕೆಯ ಆಯುಕ್ತನಾಗಿ, ಪಿಲಿಕುಲ ನಿಸರ್ಗಧಾಮದ ಕಾರ್ಯನಿರ್ವಾಹಕ ನಿರ್ದೇಶಕನಾಗಿ, ಜಿಲ್ಲಾಧಿಕಾರಿ ಕಚೇರಿಯ ಕೇಂದ್ರ ಸ್ಥಾನೀಯ ಸಹಾಯಕನಾಗಿ ಜನರಿಗೆ ಸ್ಪಂದಿಸಿ ಹೆಸರು ಮಾಡಿರುವಾತ. ಯಾರಿಗೂ ಕೇಡು ಬಯಸದ, ಜಾತೀಯತೆಗೆ ಅವಕಾಶ ಕೊಡದ ಜನಪರ ಕೆಲಸ ಮಾಡುವ ಲೋಬೋ ಪರ ಈಗಾಗಲೇ ಅಲೆ ಎದ್ದಿದೆ. ಬಿಜೆಪಿ V/s ಕಾಂಗ್ರೆಸ್ ನೇರ ಕಾಳಗದಲ್ಲಿ ಲೋಬೋಗೆ ಗೆಲ್ಲುವ ಅವಕಾಶ ಹೆಚ್ಚಿದೆ. ಬದಲಾವಣೆಗೆ ಜನ ಕಾತರಿಸುತ್ತಿದ್ದಾರೆ.

ಮಂಗಳೂರು


ಮಂಗಳೂರು ಎಂದು ಹೆಸರಿಡಲ್ಪಟ್ಟಿರುವ ಉಳ್ಳಾಲ ಕ್ಷೇತ್ರ ಮುಸ್ಲಿಮ್ ಬಾಹುಳ್ಯದ್ದು. ಎರಡು ಬಾರಿ ಈ ಉಳ್ಳಾಲದಿಂದ ಕಾಂಗ್ರೆಸ್‌ನ ಕ್ರಿಯಾಶೀಲ ತರುಣ, ಅಭಿವೃದ್ಧಿ ಚಿಂತಕ ಯು.ಟಿ. ಖಾದರ್ ಶಾಸಕರಾಗಿದ್ದಾರೆ. ಮೂರನೇ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧೆಗೆ ಇಳಿದಿರುವ ಖಾದರ್ ಅಪ್ಪ ಯು.ಟಿ. ಫರೀದ್ ಕೂಡ ಇಲ್ಲಿ ಶಾಸಕರಾಗಿದ್ದರು. ಹಿಂದೂ ಸಮುದಾಯದ ವಿಶ್ವಾಸ ಗಳಿಸಿರುವ ಖಾದರ್ ಎಂದೂ ದಿಕ್ಕು ತಪ್ಪಿ ರಾಜಕಾರಣ ಮಾಡಿದವರಲ್ಲ.

ಈತನ ಎದುರು ಬಿಜೆಪಿ ಚಂದ್ರಹಾಸ್ ಉಳ್ಳಾಲ್ ಎಂಬ ಬಿಲ್ಲವ ಭೂಪನನ್ನು ನಿಲ್ಲಿಸಿದೆ. ಈತ ಖಾದರ್ ಎದುರು ತುಂಬ ದುರ್ಬಲ. ಜೆಡಿಎಸ್ ಮುಸ್ಲಿಮ್ ಕ್ಯಾಂಡಿಡೇಟ್ ಹಾಕಲು ಯೋಚಿಸುತ್ತಿದೆ. ಖಾದರ್ ಗೆಲುವು ನಿಶ್ಚಿತ. ಒಂದಿಷ್ಟು ಜನಪರ ಕೆಲಸ ಮಾಡಿರುವ ಖಾದರ್‌ನ ಕೈಬಿಡುವ ಯೋಚನೆ ಉಳ್ಳಾಲದ ಮತದಾರರಿಗಿಲ್ಲ.


ರಮಾನಾಥ್ ರೈ

ಬಂಟ್ವಾಳ


ಬಂಟ್ವಾಳದಲ್ಲಿ 'ಬೀಬಿಯಣ್ಣ'ನೆಂದೇ ಹೆಸರುವಾಸಿಯಾಗಿರುವ ಕಾಂಗ್ರೆಸ್‌ನ ಮುಂಚೂಣಿ ನಾಯಕ ಬಿ. ರಮಾನಾಥ್ ರೈಗೆ ಆ ಪಕ್ಷದ ಅಭ್ಯರ್ಥಿತನ ಸಿಕ್ಕಿದೆ. ಐದು ಬಾರಿ ಈ ಕ್ಷೇತ್ರದಲ್ಲಿ ಗೆದ್ದಿರುವ ರೈ ಒಮ್ಮೆ ಮಾತ್ರ ಮಂಗಳೂರಿನ ಮೋದಿ ಎಂಬ ಅಡ್ಡ ಬಿರುದಿನ ಬೈಲುಮೇಗಿನ ಮನೆ ಗುತ್ತಿನ ನಾಗರಾಜಶೆಟ್ಟಿ ಎದುರು ಸೋತಿದ್ದರು. ಈ ಬಂಟ್ವಾಳದಲ್ಲಿ ಗುತ್ತಿನ ಗತ್ತಿನ ರಾಜಕಾರಣ. ಗುತ್ತು ಎಂದರೆ ಬಂಟರ ಒಂಥರಾ ಪಾಳೇಗಾರಿ ಮನೆತನ ಸಂಕೇತ. ರೈಗಳದು ಬೆಳ್ಳಿಪಾಡಿ ಗುತ್ತಾದರೆ, ನಾಗರಾಜ ಶೆಟ್ಟಿಯದು ಬೈಲುಮೇಗಿನ ಮನೆ ಗುತ್ತು.



ವಿಜಯ್‌ಕುಮಾರ್ ಸೊರ್ಕೆ

ಈ ಬಾರಿ ಬಿಜೆಪಿ ಬಂಟ್ವಾಳದ ಮತ್ತೊಂದು ಒಣ ಪ್ರತಿಷ್ಠೆಯ ಗುತ್ತಿನ ಶೂರನಿಗೆ ಟಿಕೆಟ್ ಕೊಟ್ಟಿದೆ. ಉಳಿಪಾಡಿ ಗುತ್ತಿನ ರಾಜೇಶ್ ನಾಯಕ್ ಎಂಬ ಚಡ್ಡಿ ದೊರೆಗಳ ದಾಸನನ್ನು ಅಖಾಡಕ್ಕೆ ಇಳಿಸಲಾಗಿದೆ. ಗೋಣಿ ನಾಗ ಬಿಜೆಪಿ ಬಿಟ್ಟ ಮೇಲೆ ಕಲ್ಲಡ್ಕ ಭಟ್ಟ ಕಂಗಾಲಾಗಿ ಹೋಗಿದ್ದ. ತನ್ನ ಹೆಡ್‌ಕ್ವಾರ್ಟರ್ಸ್ ಇರುವ ಬಂಟ್ವಾಳದಲ್ಲಿ ಗೆಲ್ಲುವುದು ಆತನಿಗೆ ಪ್ರತಿಷ್ಠೆಯ ಪ್ರಶ್ನೆ. ರಮಾನಾಥ್ ರೈ ಸೋಲಿಸುವ ಹಠಕ್ಕೆ ಬಿದ್ದಿರುವ ಚಡ್ಡಿ ಭಟ್ಟ ಕೋಟ್ಯಧೀಶನೂ, ತನ್ನ ಗುಲಾಮನೂ ಆದ ರಾಜೇಶ್ ನಾಯಕ್‌ನನ್ನು ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾನೆ. ಈ ನಾಯಕ್ ರಾಜಕೀಯಕ್ಕೆ ಹೊಸಬ. ಧರ್ಮಕಾರಣ ಗೊತ್ತಿರುವಾತ. ದೇವಸ್ಥಾನ ಉತ್ಸವ, ಹಿಂದೂ ಸಮಾಜೋತ್ಸವಗಳಲ್ಲಿ ಪಳಗಿರುವಾತ. ಆದರೆ ಜನರಿಗೆ ಅಪರಿಚಿತ. ಕ್ಷೇತ್ರದ ಜನರ ನಾಡಿಮಿಡಿತ ಅರಿತು ಸ್ಪಂದಿಸುವ ಕಾಂಗ್ರೆಸ್‌ನ ರೈ ಕ್ಷೇತ್ರದಲ್ಲಿ ಜನಾನುರಾಗಿ.


ಶಕುಂತಲಾ ಶೆಟ್ಟಿ

ಆದರೆ ಬಿಎಸ್‌ಪಿಯಿಂದ ದಲಿತರಲ್ಲಿ ಗುರುತಿಸಿಕೊಂಡಿರುವ ಲೋಲಾಕ್ಷ ಸ್ಪರ್ಧಿಸುತ್ತಿರುವುದು ರೈಗಳಿಗೆ ಸ್ವಲ್ಪ ತೊಂದರೆ ಕೊಡಲಿದೆ. ಹಾಗೆಯೇ ಮುಸ್ಲಿಮರಲ್ಲಿ ನೆಲೆ ಕಂಡುಕೊಳ್ಳಲು ಹೆಣಗುತ್ತಿರುವ ಎಸ್‌ಡಿಪಿಐ ಕೂಡ ಇಲ್ಲಿ ಕ್ಯಾಂಡಿಡೇಟ್ ಹಾಕುತ್ತಿದೆ. ಇಷ್ಟಾದರೂ ಬಣ್ಣಗೆಟ್ಟಿರುವ ಬಿಜೆಪಿ ಮತ್ತು ಅದರ ಬಾಸ್ ಕಲ್ಲಡ್ಕ ಭಟ್‌ಗೆ ಜನ ಮನ್ನಣೆಯೇನೂ ಸಿಗದು. ತೀವ್ರ ಕುತೂಹಲ ಕೆರಳಿಸಿರುವ ಬಂಟ್ವಾಳದ ಜಿದ್ದಾಜಿದ್ದಿಯಲ್ಲಿ ರೈ ಮುಂದಿದ್ದಾರೆ. ಬಿಜೆಪಿಗಳು ತಿಣುಕಾಡುತ್ತಿದ್ದಾರೆ. ಧನದಾಹಿ ಕಲ್ಲಡ್ಕ ಭಟ್ಟನ ಬಣ್ಣ ಬಯಲಾಗಿರುವುದು ಕಾಂಗ್ರೆಸ್‌ಗೆ ಪ್ಲಸ್.


ಎಸ್.ಅಂಗಾರ


ವಸಂತ್ ಬಂಗೇರ

ಪುತ್ತೂರು

ಈ ವರದಿ ಸಿದ್ಧವಾಗುತ್ತಿರುವ ಹೊತ್ತಿಗೆ ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ತಮ್ಮ ರಣಕಲಿಗಳ್ಯಾರೆಂದು ಹೇಳಿಲ್ಲ. ಆದರೆ ಬಿಜೆಪಿ, ಮಾಜಿ ಸಿಎಂ ಸದಾನಂದ ಗೌಡರಿಗೆ ಸಂಬಂಧದಲ್ಲಿ ಭಾವನಾಗುವ ಸಂಜೀವ ಮಠಂದೂರು ಕ್ಯಾಂಡಿಡೇಟೆಂದು ಫೈನಲ್ ಮಾಡಿ… ಕೊಂಡಿದೆ. ಈ ಕ್ಷೇತ್ರದಲ್ಲಿ ಪ್ರಥಮ ಬಹುಸಂಖ್ಯಾತರಾದ ಅರೆಭಾಷೆ ಗೌಡ ಸಮುದಾಯದ ಮಠಂದೂರು ದೀವಿ… ಚಿಕ್ಕಪ್ಪನ ಮಗಳ ಗಂಡ. ಡಿವಿಯ ಪ್ರಭಾವದಿಂದ ಆತನಿಗೆ ಟಿಕೆಟ್ ಸಿಕ್ಕಿದೆ. ಹಾಲಿ ಬಿಜೆಪಿ ಶಾಸಕಿ ಮಲ್ಲಿಕಾ ಪ್ರಸಾದ್‌ಗೆ ಕಿಕ್ ಮಾಡುವ ಪ್ಲಾನ್ ದೀವಿ-ಕಲ್ಲಡ್ಕ ತುಂಬ ಹಿಂದೆಯೇ ಹಾಕಿದ್ದರು.

ಕಾಂಗ್ರೆಸ್ ಮಾಜಿ (ಬಿಜೆಪಿ) ಶಾಸಕಿ ಶಕುಂತಲಾ ಶೆಟ್ಟಿಯನ್ನು ಕಣಕ್ಕಿಳಿಸುತ್ತದೆಂಬ ನಿರೀಕ್ಷೆ ಮೂಡಿತ್ತು. ಆದರೆ ಪುತ್ತೂರು ಕಾಂಗ್ರೆಸ್‌ನಲ್ಲಿರುವ ಹತ್ತಾರು ಗ್ಯಾಂಗ್‌ಗಳ ವಾರ್… ಸ್ಥಳೀಯ ಮಾಜಿ ಶಾಸಕ- ಮಾಜಿ ಉಡುಪಿ ಎಂ.ಪಿ. ವಿನಯ್‌ಕುಮಾರ್ ಸೊರಕೆ ಅನಿವಾರ್ಯ ಅಭ್ಯರ್ಥಿಯಾಗಿ ಅವತರಿಸಿದ್ದಾರೆ. ಶಕುರನ್ನು ಕಾಂಗ್ರೆಸ್ ತುಂಬ ಮುತುವರ್ಜಿಯಿಂದ ತಂ… ಸೊರಕೆ ಆಕೆಗೆ ಅದ್ಹೇಗೆ ಸಮಾಧಾನ ಮಾಡುತ್ತಾರೆ? 1994ರ ನಂತರ ಬಿಜೆಪಿ ಪಾಲಾಗುತ್ತ ಬಂದಿರುವ ಪುತ್ತೂರು ಸೊರಕೆಯಿಂದಾಗಿ ಈ ಬಾರಿ ಕಾಂಗ್ರೆಸ್ ವಶವಾಗುವ ಸಾಧ್ಯತೆ ನಿಚ್ಚಳವಾಗಿದೆ. ದೀವಿ ಸಿಎಂ ಆದಾಗ ಕ್ಷೇತ್ರಕ್ಕೇನು ಉಪಕಾರ ಮಾಡಿಲ್ಲ. ಕಲ್ಲಡ್ಕ ಭಟ್ಟನ ಉದ್ಧಾರವಷ್ಟೇ ಹಾಲಿ ಶಾಸಕಿ ಮಲ್ಲಿಕಾ ಪ್ರಸಾದ್ ನೋಡಿಕೊಂಡರು. ಆಕೆಯ ಗಂಡ ಕಮ್ಯುನಲ್ ಡಾಕ್ಟರ್ ಪ್ರಸಾದ್ ಭಂಡಾರಿ ಕೋಮು ಕಿತಾಪತಿ ಮಾಡಿದರಿಂದ 'ಪಾಪ' ಬಿಜೆಪಿಗೆ ಅಂಟಿಕೊಂಡಿದೆ. ಹೀಗಾಗಿ ಮುನಿಸಿಪಾಲಿಟಿ ಎಲೆಕ್ಷನ್‌ನಲ್ಲೂ ಬಿಜೆಪಿ ಇಲ್ಲಿ ಸೋತಿದೆ. ಆ ಫಲಿತಾಂಶವೇ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪ್ರತಿಫಲಿಸಲಿದೆ ಎಂಬುದು ರಾಜಕೀಯ ಲೆಕ್ಕಾಚಾರ.

ದೀವಿಯ ಸಹೋದರನ ಹೆಂಡತಿಯ ಅಣ್ಣ-ದಿನೇಶ್ ಜೆಡಿಎಸ್ ಕ್ಯಾಂಡಿಡೇಟ್. ಗೌಡ ಸಮುದಾಯದ ಮತ ವಿಭಜನೆ ಆತ ಮಾಡುವುದು ಕಾಂಗ್ರೆಸ್‌ಗೆ ಅನುಕೂಲ. ಹಾಗೆಯೇ ಕೆಜೆಪಿ ವೈಸ್ ಕ್ಯಾಪ್ಟನ್ ಶೋಭಾ ಕರಂದ್ಲಾಜೆಯೂ ತನ್ನ ತವರೂರಲ್ಲಿ ಕಾಂಗ್ರೆಸ್ ಪರವೇ ಕೆಲಸ ಮಾಡಲಿದ್ದಾರೆ.

ಸುಳ್ಯ

ಸುಳ್ಯ ಮೀಸಲು ಕ್ಷೇತ್ರ. ಆದರೆ ಸವರ್ಣೀಯರದೇ ಇಲ್ಲಿ ಹಾರಾಟ. ಬ್ರಾಹ್ಮಣಶಾಹಿ ಚಡ್ಡಿ ಚತುರರು ಬಿಜೆಪಿ ಶಾಸಕ- ಬಲಿತ ದಲಿತ ಎಸ್. ಅಂಗಾರನನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತ ಬಂದಿದ್ದಾರೆ. ಸಂಘ ಪರಿವಾರದ ಕೈಗೊಂಬೆಯಾದ ಅಂಗಾರ ಕಳೆದ ಎರಡು ದಶಕದಿಂದ ಶಾಸಕನಾಗಿದ್ದಾನೆ. ಚಡ್ಡಿ ದೊರೆಗಳು ತನ್ನ ಶಾಸಕತ್ವ ಬಳಸಿಕೊಂಡು ಸ್ವಾರ್ಥ ಮಾಡುವುದು ಕಂಡು ಈತನೂ ಚುರುಕಾದ. ಸಂಘ ಪರಿವಾರದವರ ಜತೆ-ಜತೆಗೆ ಸ್ವ-ಜೇಬೋದ್ಧಾರ… ಸಾಧಿಸಿಕೊಂಡ.

ಪೇಜಾವರ ಮಠಾಧೀಶರಂಥ ಪೊಲಿಟಿಕಲ್ ಸಂತರ 'ಧರ್ಮದಂಡ' ಪ್ರಭಾವದಿಂದ ಸುಳ್ಯದಲ್ಲಿ ಮತೀಯ ಭಾವನೆ ಬಲವಾಗಿ ಬೇರೂರಿದೆ. ಡಾ. ಬಿ.ರಘುನಂಥ ಅರ್ಹ-ಸಮರ್ಥ ಸ್ಪರ್ಧಿಸಿದರೂ ಕಾಂಗ್ರೆಸ್‌ಗೆ ಇಲ್ಲಿ ಗೆಲ್ಲಲಾಗಿಲ್ಲ. ಈ ರಘು ಕ್ಯಾನ್ಸರ್ ವೈದ್ಯನಾಗಿ ಕ್ಷೇತ್ರದಲ್ಲಿ ಚಿರಪರಿಚಿತ. ಸರ್ಕಾರಿ ನೌಕರಿಯಲ್ಲಿದ್ದಾಗ ಅತ… ಜನಪರ ವೈದ್ಯನೆಂದು ಹೆಸರು ಮಾಡಿದ್ದರು. ರಘುನಂಥ ಸುಶಿಕ್ಷಿತ, ಸುಸಂಸ್ಕೃತ, ಸ್ವಾಭಿಮಾನಿ, ಜನಪರ ಮನುಷ್ಯನ ಮುಂದೆ ಬಿಜೆಪಿಯ ಭಂಡ ಅಂಗಾರ ಯಾವ ಲೆಕ್ಕವೂ ಅಲ್ಲ. ಇದು ಈಗ ಕ್ಷೇತ್ರವಾಸಿಗಳಿಗೆ ಅರ್ಥವಾಗಿದೆ. ಹೀಗಾಗಿ ಅಂಗಾರನಿಗೆ ಮತದಾರರು

...ಾಸ್ ಕೊಟ್ಟು ವಿಧಾನಸೌಧದ ...ಹಘುಗೆ ಕೊಡಲು ತೀರ್ಮಾನಿಸಿ ... ಜೆಡಿಎಸ್ ಹುರಿಯಾಳು ...ಜ್ ಸಂಕೇಶ್ ಕಾಂಗ್ರೆಸ್‌ನ ಡಾ. ...ನ್ನು ಯೋಗ್ಯ ಅಭ್ಯರ್ಥಿಯಿಲ್ಲ ... ಎಡವಟ್ಟು ಅಂಗಾರನಿಗಿಂತ ...

...ೋರಾಟವಿರುವುದು ಕಾಂಗ್ರೆಸ್‌ನ ...ಮತ್ತು ಬಿಜೆಪಿಯ ಅಂಗಾರ ... ಗೆಲ್ಲುವ ಛಾನ್ಸ್ ರಘುಗೆ.

ಬೆಳ್ತಂಗಡಿ

...ರ್ಮ ವ್ಯಾಪಾರಿಗಳ ಕೈಚಳಕದ ...ದು; ಸೌಜನ್ಯ ಎಂಬ ಮುಗ್ಧ ...ಗಿಯ ಮಾನ-ಪ್ರಾಣ ತಿಂದು ... ಪಿಶಾಚಿಗಳ ಶ್ರೀಕ್ಷೇತ್ರವಿದು. ...ಧರ್ಮದ ನೆಲದಲ್ಲಿ ದೇವರು-...ವನ್ನು ಗುತ್ತಿಗೆ ಪಡೆದಿರುವ ...ಗೊಂದು ಗಟ್ಟಿ ಕ್ಯಾಂಡಿಡೇಟ್ ...ಥ ದಯನೀಯ ಸ್ಥಿತಿ ...ಿ. ಮಾಜಿ ಶಾಸಕ ಪ್ರಭಾಕರ್ ...ರಗೆ ಟಿಕೆಟ್ ಕೊಡಲು ...' ಡಾನ್‌ಗೆ ಮನಸ್ಸಿಲ್ಲ. ಮಾಜಿ ... ಗಂಗಾಧರ್ ಗೌಡ ಮತ್ತು ...ಸಿಂಹ ನಾಯಕ್ ನಡುವೆ ... ಹಿತವರು ಎಂದು ಸಂಘ ...ರರು ತೂಕ ಹಾಕುತ್ತಿದ್ದಾರೆ. ...ಜಾತಿಯ ಪ್ರತಾಪ್ ಸಿಂಹನೆಂಬ ...ಣೆಗಿಂತ, ಗೊಲ್ಲರ ಗೌಡ ...ಧರ ಗೌಡನೇ ಬೆಟರ್ ...ುತ್ತಿದ್ದಾರೆ.

...ಾಂಗ್ರೆಸ್ ಟಿಕೆಟ್ "ಜನಾರ್ದನ ...ಾರಿ ಕೃಪೆಯಿಂದ ಮತ್ತೆ ಹಾಲಿ ... ಕೆ. ವಸಂತ ಬಂಗೇರಾಗೇ ಸಿಕ್ಕಿದೆ. ...ಸಂತ ಬಂಗೇರಾ ಡೇರ್ ಡೇವಿಲ್. ...ರ್. ಮುಸ್ಲಿಮರ ಒಲುವು-ವಿಶ್ವಾಸ ...ರುವಾತ. ಕೆಲಸಗಾರ. ಬೇರೆ-ಬೇರೆ ...ಂದ ನಾಲ್ಕು ಬಾರಿ ಶಾಸಕನಾದ ...ಸ್ರಿಯ ಪಕ್ಷಾಂತರಿ" ಈ ಬಂಗೇರಾ. ...ತ ಧರ್ಮವ್ಯಾಪಾರಿಗಳ ಭಾನ್ಗಡಿ ... ಮುಲಾಜಿಲ್ಲದೆ ಖಂಡಿಸುವ ...ರಂತನಾದ ಬಂಗೇರಾ ಗೆಲ್ಲಬೇಕಾಗಿ ...ದು ಬೆಳ್ತಂಗಡಿಯ ಜರೂರತ್ತು! ... ಸಿಗದ ಬೇಸರದಲ್ಲಿರುವ ಹರೀಶ್ ...ಾರ್ ಪೂಜಾರಿ ಎಂಬ ಸ್ವಜಾತಿ ...) ಬಂಧು ಬಂಗೇರಾಗೆ ಒಂಚೂರು ...ದರೆ ಕೊಡುವ ಸಾಧ್ಯತೆ ಇದೆ. ಆದರೆ ...ನ ನಖರಾದಿಂದ ಎಕ್ಸ್‌ಪೈರಿ ...ಟಿಕ್ಸ್‌ನಿಂದ ಕಳೆಗುಂದಿರುವ ...ಧರ ಗೌಡರ ಮಣಿಸುವ ತಾಕತ್ತು ...ತ ಬಂಗೇರಾಗಿದೆ. ಜೆಡಿಎಸ್‌ನ ...ಶ್ರೀ ಹೆಗ್ಡೆ ಹೆಸರಿಗಷ್ಟೆ ಸ್ಪರ್ಧಿ.


ಮೂಡಬಿದಿರೆ

...ವೀರಪ್ಪ ಮೊಯ್ಲಿ ಸಿಎಂ ಆಗಿದ್ದಾಗ ... ತವರಿನ ನೀಲಿಗಣ್ಣು ಹುಡುಗ ...ಯಚಂದ್ರ ಜೈನ್ ಶ್ರೀಮತಿ ...ಯ್ಲಿಯ ಕಿಚನ್ ಕ್ಯಾಬಿನೆಟ್ ...ನಾಗಿದ್ದ, ಈ ಅರ್ಹತೆಯಿಂದಾಗಿ ...ನ್ನು ಮೊಯ್ಲಿ ಎಮ್ಮೆಲ್ಸಿ ಮಾಡಿದ್ದರು. ...9 ರಲ್ಲಿ ಅತೀ ಅಲ್ಪಸಂಖ್ಯಾತ ...) ಸಮುದಾಯದ ಮೂಡಬಿದಿರೆ ...ಗ್ರೆಸ್ ಟಿಕೆಟ್ ಅಭಯ ಹೊಡೆದು ...ಡಿದ್ದರು. ಸಾರಿಗೆ ಉದ್ಯಮಿಯಾದ ...ಯ ಬಿಲ್ಲವರು-ಕ್ರಿಶ್ಚಿಯನ್ನರು ...ರುವ ಮೂಡಬಿದಿರೆಯಿಂದ ಸತತ ...ರು ಬಾರಿ ಗೆದ್ದಿರುವುದು ಆತನ ...ತೀತ ಗುಣಕ್ಕೆ ಸಾಕ್ಷಿ.


...ಒಂಥರಾ ಅಧಿಕಪ್ರಸಂಗಿಯಾದರೂ ... ಪೀಡಕನಲ್ಲ, ಧಾಡಸಿ ಸ್ವಭಾವದ ...ಯ ಕೆಲಸಗಾರನೂ ಹೌದು. ...ದಲ್ಲಿ ಸದಾ ಕ್ರಿಯಾಶೀಲ. ಜೈನರಂಥ ...ಂಸಾವಾದಿಗಳಿಗೆ ನಿಷಿದ್ಧವಾದ ಹಿಂಸಾತ್ಮಕ ...ಣಸಕಂಬಳ ಅಭಯ ನಡೆಸುವುದು ಓಟ್‌ಬ್ಯಾಂಕ್ ...ಟ್. ಇದೀ ಕರಾವಳಿಯಲ್ಲಿ ಒಮ್ಮೆಯೂ ಬಿಜೆಪಿ ...ದ ಕ್ಷೇತ್ರವೆಂದರೆ ಅದು ಮೂಡಬಿದಿರೆ. ಹೀಗಾಗಿ ... ಆರೆಸ್ಸೆಸ್-ಬಿಜೆಪಿ ಬಾಸ್‌ಗಳಿಗೊಬ್ಬ ಸಾಮಾನ್ಯ ...ರಿಯಾಳು ಸಿಗುತ್ತಿಲ್ಲ, ಸತೀಶ್ ಭಟ್ಟ ಎಂಬ ಚೆಡ್ಡಿ



ಅಭಯ್ ಚಂದ್ರ ಜೈನ್




ಲಾಲಾಜಿ ಮೆಂಡನ್




ವಸಂತ್ ಸಾಲಿಯಾನ್



ಪ್ರಮೋದ್ ಮಧ್ವರಾಜ್



ಹಾಲಾಡಿ ಶ್ರೀನಿವಾಸ್ ಶೆಟ್ಟಿ



ಅಮರ್‌ನಾಥ್ ಶೆಟ್ಟಿ

ಬಗ್ಗೆ ಕಲ್ಲಡ್ಕ ಭಟ್ಟನಿಗೆ ಅದೇನೋ ಅವ್ಯಕ್ತ ಅಸಮಾಧಾನ. ಹೀಗಾಗಿ ಸಂಸದ ನಳೀನ್‌ಕುಮಾರ್ ಕಟೀಲ್‌ನನ್ನೇ ಏಕೆ ಕಣಕ್ಕಿಳಿಸಬಾರದೆಂಬುದು ಕಲ್ಲಡ್ಕರ ಚಿಂತನಮಂಥನ. ಕಟೀಲ್‌ಗೆ ಈ ಸೋಲು ಬೇಕಾಗಿಲ್ಲ, ಕ್ಷೇತ್ರದ ಮೂಲೆ-ಮೂಲೆಯಲ್ಲಿ ಬೇರು ಇಳಿಸಿರುವ ಅಭಯನನ್ನು ಸೋಲಿಸುವ ತಾಕತ್ತು ಕಟೀಲ್‌ಗೆ ಇಲ್ಲ.

ಜೆಡಿಎಸ್‌ನಿಂದ ವಯೋವೃದ್ಧ ಮಾಜಿ ಮಂತ್ರಿ ಅಮರನಾಥ್ ಶೆಟ್ಟಿ ಅಖಾಡಕ್ಕೆ ಇಳಿದಿದ್ದಾರೆ. ಹಿಂದೆ ಮೂರು ಬಾರಿ ದಳ ಪರಿವಾರದಿಂದ ಇಲ್ಲಿ ಶಾಸಕನಾಗಿದ್ದ ಅಮರನಾಥ್ ಶೆಟ್ಟಿಗೆ ಈ ಮೊದಲಿನ ಸಂಪರ್ಕ ಜನರ ನಡುವೆಯಿಲ್ಲ.

ಕಾಪು

ಕಾಂಗ್ರೆಸ್‌ನ ಗುಂಪುಗಾರಿಕೆಯಿಂದ ಸತತ ಎರಡು ಬಾರಿ ಶಾಸಕನಾಗಿರುವ ಅಡ್ಡಕಸುಬಿ ಲಾಲಾಜಿ ಮೆಂಡನ್‌ಗೆ ಬಿಜೆಪಿ ಮತ್ತೆ ಟಿಕೆಟ್ ಕೊಟ್ಟಿದೆ. ಮೀನುಗಾರಿಕೆಯಿಂದ ಜೀವನ ನಿರ್ವಹಿಸಲಾಗದೆ ಎದುಸಿರು ಬಿಡುತ್ತಿದ್ದ ಈ ಮೊಗವೀರ ಮೊದ್ಮಣಿ ಈಗ ಕೋಟಿಗೆ ತೂಗುತ್ತಾನೆ. ಕಾಪು ಕ್ಷೇತ್ರಕ್ಕೆ ಏನು ಬೇಕು? ಏನು ಬೇಡ ಎಂಬುದೇ ಅರ್ಥವಾಗದ ಮೆಂಡನ್‌ಗೆ ತನಗೇನು ಸುಖ-ಸೌಲಭ್ಯ ಬೇಕೆಂಬುದು ಮಾತ್ರ ಚೆನ್ನಾಗಿ ಗೊತ್ತಿದೆ. ಹೀಗಾಗಿ ಆತ ಅಕ್ರಮ ಸಿಲಿಕಾ ಸ್ಯಾಂಡ್ ದಂಧೆ, ಪರ್ಸೆಂಟೇಜ್ ವ್ಯವಹಾರ, ವರ್ಗಾವರ್ಗಿ ಬಿಸಿನೆಸ್ ವ್ಯವಸ್ಥಿತವಾಗಿ ಮಾಡಿ ಸ್ಥಿತಿವಂತನಾಗಿದ್ದಾನೆ. ಅಬ್ಬೇಪಾರಿಯಂತಿದ್ದ ಶಾಸಕ ಮೆಂಡನ್ ಅಧಿಕಪ್ರಸಂಗಿಯಾಗಿ ರೂಪಾಂತರಗೊಂಡಿದ್ದಾನೆ. ಆದರೆ ಆರೆಸ್ಸೆಸ್ "ಗುರು"ಗಳ ಪಾದಕ್ಕೆರಗುವ ಗುಲಾಮಗಿರಿ ನಿಷ್ಠೆ-ದಕ್ಷತೆಯನ್ನು ಮುಂದುವರಿಸಿಕೊಂಡಿದ್ದಾನೆ.

ನಂದಿಕೂರು ಥರ್ಮಲ್ ವಿದ್ಯುತ್ ಪ್ರಾಜೆಕ್ಟ್ ವಿರುದ್ಧ ಜನರು ತಿರುಗಿಬಿದ್ದಾಗ ಈ ಶಾಸಕ ಸೂಟ್‌ಕೇಸ್ ಲೇವಾದೇವಿ ಮಾಡಿಕೊಂಡು ಹಾಯಾಗಿದ್ದ. ಇಂಥ ಹಲವು "ಜನಕಲ್ಯಾಣ" ಧೋರಣೆ ಈ ಚುನಾವಣೆಯಲ್ಲಿ ಮೆಂಡನ್‌ಗೆ ಮಾಜಿಯಾಗಲು ನೆರವಿಗೆ ಬರಲಿದೆ. ಜನ ಈತನಿಗೆ ಪಾಠ ಕಲಿಸಲು ಕಾದು ಕುಳಿತಿದ್ದಾರೆ. ಕಾಂಗ್ರೆಸ್ ಟಿಕೆಟ್ ಮಾಜಿ ಮಂತ್ರಿ ವಸಂತ ಸಾಲಿಯಾನ್‌ಗೆ ಸಿಗುವುದು ಬಹುತೇಕ ಖಾತ್ರಿಯಾಗಿದೆ. ಸಾಲಿಯಾನ್ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಕ್ಯಾಂಡಿಡೇಟ್. ಆದರೆ ಬಳ್ಳಾರಿಯಲ್ಲಿ ಮೈನಿಂಗ್ ನಡೆಸುತ್ತಿದ್ದ ಸುರೇಶ್ ಶೆಟ್ಟಿಗೆ ಅಹ್ಮದ್ ಪಟೇಲ್ ಮತ್ತು ಬಿಲ್ಲವರ ಧನ ಜಯರಾಮ್ ಬನಾನಾನಂಥ ಹೋಟೆಲ್ ಅಧಿಪತಿಗಳ ಬೆಂಬಲ ಇದೆ. ಹೀಗಾಗಿ ಟಿಕೆಟ್ ಘೋಷಣೆ ಆಗಿಲ್ಲ. ಸಾಲಿಯಾನ್ ಬದಲಿಗೆ ಸೊರಕೆ ಇಲ್ಲಿ ಕ್ಯಾಂಡಿಡೇಟ್ ಆಗುವ ಸಾಧ್ಯತೆಯೂ ಇದೆ. ಆಗ ಪುತ್ತೂರಲ್ಲಿ ಶಕುಂತಲಾ ಶೆಟ್ಟಿಗೆ ಛಾನ್ಸ್! ಈ ಲೆಕ್ಕಾಚಾರ ಏನೇ ಇರಲಿ ಕಾಪುನಲ್ಲಿ ಬಿಜೆಪಿ ಈ ಸಲ ಸೋಲುವುದು ಗ್ಯಾರಂಟಿ.

ಉಡುಪಿ

ಕರಾವಳಿ ಆರೆಸ್ಸೆಸ್-ಬಿಜೆಪಿ ನಿಯಂತ್ರಕ ಕಲ್ಲಡ್ಕ ಭಟ್ ಪ್ರಣೀತ ಸೆಕ್ಸ್ ಸಿಡಿ ಪ್ರಕರಣದಲ್ಲಿ ಸಿಕ್ಕಿಬಿದ್ದ ಹಾಲಿ ಶಾಸಕ ರಘುಪತಿ ಭಟ್ ಟಿಕೆಟ್ ತಪ್ಪಿಸಿಕೊಂಡಿದ್ದಾನೆ. ಹೆಂಡತಿ ಹತ್ಯೆ, ಭ್ರಷ್ಟಾಚಾರ, ಕಚ್ಚೆ ಹರುಕತನ, ಟೆಗ್ಸ್ಗಾ ಹಡಗು ಒಡೆವ ಉದ್ಯಮದವರಿಂದ ಹಣ ಹೊಡೆದದ್ದು, ಡಿನೋಟಿಫಿಕೇಷನ್ ಭಾನ್ಗಡಿ, ನಕಲಿ ಚೆಡ್ಡಿಗಿರಿಯಿಂದ ಬಿಜೆಪಿ ಇಮೇಜ್ ಕೃಷ್ಣಾರ್ಪಣ ಮಾಡಿದ್ದ ಭಟ್ಟನನ್ನು ತೊಲಗಿಸಲು ಕೇಡರ್ ಸಂಘಪರಿವಾರ ಹಾಕಿದ ಸ್ಕೆಚ್ ಕರಾರುವಾಕ್ಕಾಗಿ ವರ್ಕ್‌ಔಟ್ ಆಗಿದೆ. ಉಡುಪಿ ಶಾರದಾ ಇಂಟರ್‌ನ್ಯಾಷನಲ್ ಹೋಟೆಲ್ ಧಣಿ ಸುಧಾಕರ ಶೆಟ್ಟಿಗೆ ಬಿಜೆಪಿ ಟಿಕೆಟ್ ಕೊಡಲಾಗಿದೆ. ಪಕ್ಕದ ಕುಂದಾಪುರದಲ್ಲಿ ಕಳಕೊಂಡ ಬಂಟರ ಮುಖಂಡ ಹಾಲಾಡಿ ಶ್ರೀನಿವಾಸ್ ಶೆಟ್ಟಿಯಿಂದ ಆಗಿರುವ ಡ್ಯಾಮೇಜ್ ಕಂಟ್ರೋಲ್‌ಗೆ ಸುಧಾಕರ ಶೆಟ್ಟಿಗೆ ಅವಕಾಶ ಕೊಡಲಾಗಿದೆ. ಇದು ಜಿಲ್ಲಾ ಬಿಜೆಪಿ ಅಧ್ಯಕ್ಷ ಉದಯಕುಮಾರ್ ಶೆಟ್ಟಿಯನ್ನು ಕೆರಳಿಸಿದೆ. ಈ ಬಂಟನೂ ಟಿಕೆಟ್ ಆಕಾಂಕ್ಷಿಯಾಗಿದ್ದ.

ಬಿಜೆಪಿ-ಆರೆಸ್ಸೆಸ್ ಪರಿವಾರ ಅದೆಂಥ "ಜಾಣ್ಮೆ" ತೋರಿಸಿದರೂ ಉಡುಪಿಯಲ್ಲಿ ಬಿಜೆಪಿ ಗೆಲ್ಲುವುದು ಸಾಧ್ಯವೇ ಇಲ್ಲ, ಹಿಂದುತ್ವದ

ಅನೈತಿಕ ಪೊಲೀಸ್‌ಗಿರಿ, ಅಧಿಕಾರಸ್ಥರ ಅಡ್ಡಕಸುಬು, ಇವರ ಬಾಸ್ ಕಲ್ಲಡ್ಕ ಪೇಜಾವರ ಧನಾಧಾರಿತ ಧರ್ಮಕಾರಣದಿಂದ ಜನರು ಕೆರಳಿ ಕೆಂಡವಾಗಿದ್ದಾರೆ. ಜೊತೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಪ್ರಮೋದ್ ಮಧ್ವರಾಜ್ ಸಮರ್ಥ ಶಾಸಕನಾಗುವ ಭರವಸೆ ಜನರಲ್ಲಿ ಮೂಡಿಸಿದ್ದಾರೆ. ಕಳೆದ ಹತ್ತು ವರ್ಷದಿಂದ ಆತ ಸಮಾಜದ ನೊಂದವರಿಗೆ ಸ್ಪಂದಿಸಿದ ರೀತಿ-ನೀತಿ ಜನ ಮನ ಗೆದ್ದಿದೆ. ಕೋಟ್ಯಾಧೀಶ ಮತ್ಸ್ಯೋದ್ಯಮಿಯಾದರೂ ಯಾವುದೇ ಹಮ್ಮು-ಬಿಮ್ಮು ಇಲ್ಲದೆ ಪ್ರಮೋದ್ ಜನಸಾಮಾನ್ಯರೊಂದಿಗೆ ಬೆರೆಯುತ್ತಾನೆ. ಬಿಜೆಪಿಯಿಂದ ಗಬ್ಬೆದ್ದಿರುವ ಉಡುಪಿಗೆ ಪ್ರಮೋದ್ ಮಧ್ವರಾಜ್ ಆಶಾಕಿರಣವಾಗಿದ್ದಾರೆ.

ಕುಂದಾಪುರ

ಬಿಜೆಪಿಗೆ ಬೈ ಹೇಳಿ, ಆರೆಸ್ಸೆಸ್ ಪ್ರಶ್ನಾತೀತ ಗುರು ಕಲ್ಲಡ್ಕ ಭಟ್ಟನಿಗೆ ಧಿಕ್ಕಾರ ಹೇಳಿ ಕುತೂಹಲದ ಕೇಂದ್ರವಾಗಿದ್ದ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಈಗ ಈ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ. ಹಾಲಾಡಿ ಹೋದ ನಂತರ ಬಿಜೆಪಿಗೆ ಇಲ್ಲಿ ನೆಲೆ-ಬೆಲೆಯೇ ಇಲ್ಲದಾಗಿದೆ. ಸರಿಯಾದ ಹುರಿಯಾಳೂ ಸಿಗುತ್ತಿಲ್ಲ. ಕಿಶೋರಕುಮಾರ್ ಎಂಬ ಅನಾಮಧೇಯನಿಗೆ ಟಿಕೆಟ್ ಬಿಜೆಪಿ ಕೊಟ್ಟಿದೆ. ಈತ ಅಲ್ಪಸಂಖ್ಯಾತ ಗಾಣಿಗ ಜಾತಿಯ ಹುಡುಗ.

ಕಾಂಗ್ರೆಸ್ ಮಲ್ಯಾಡಿ ಶಿವರಾಮ ಶೆಟ್ಟಿಗೆ ಅಭ್ಯರ್ಥಿ ಮಾಡಿದೆ. ಈತನೂ ದುರ್ಬಲನೆ. ಹೀಗಾಗಿ ಹಾಲಾಡಿ ಗೆಲ್ಲುವ ಅವಕಾಶ ಹೆಚ್ಚಾಗಿದೆ. ಮಂತ್ರಿ ಕೋಟ ಶ್ರೀನಿವಾಸ್ ಪೂಜಾರಿ-ಕಲ್ಲಡ್ಕ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಇಲ್ಲಿ ಬಿಜೆಪಿಗೆ ಠೇವಣಿ ಉಳಿಯಲಾರದು.

ಬೈಂದೂರು

ಕೆಜೆಪಿ-ಬಿಜೆಪಿ ನಡುವೆ ಹೊಯ್ದಾಡಿದ ಸ್ಥಳೀಯ ಶಾಸಕ ಲಕ್ಷ್ಮೀನಾರಾಯಣರಿಗೆ ಬಿಜೆಪಿ ಟಿಕೆಟ್ ಕೊಡದೆ ಕಲ್ಲಡ್ಕ ಹೈಕಮಾಂಡ್ ಸೇಡು ತೀರಿಸಿಕೊಂಡಿದೆ. ಅವಮಾನಿತನಾದರೂ ಎಡವಟ್ಟು ಮುದುಕ ಲಕ್ಷ್ಮೀನಾರಾಯಣ ಬಿಜೆಪಿಯಲ್ಲಿ ಇದ್ದಾರೆ. ಅಲ್ಲಾತನಿಗೆ ಕೇಳುವವರೇ ಇಲ್ಲ, ಹೀಗಾಗಿ ಆತ ರಾಜಕೀಯ ನಿವೃತ್ತಿ ಘೋಷಿಸಬೇಕಾಗಿ ಬಂದಿದೆ. ಮೊನ್ನೆ-ಮೊನ್ನೆ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಸೇರಿದ "ಮೂಢ" ಸುಕುಮಾರ ಶೆಟ್ಟಿಯನ್ನು ಆರೆಸ್ಸೆಸ್ ಯುದ್ಧಾಂಗಣಕ್ಕೆ ನೂಕಿದೆ. ಈ ವಲಸಿಗನಿಗೆ ಟಿಕೆಟ್ ಘೋಷಣೆ ಆಗುತ್ತಿದ್ದಂತೆಯೇ ಸ್ಥಳೀಯ ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಿದೆ. ಬಿಜೆಪಿಯ ಬಂಟೇತರರು ಸುಕುಮಾರ ಶೆಟ್ಟಿಯನ್ನು ಸೋಲಿಸಿ ಬಿಜೆಪಿ ಡಾನ್-ದಾಕೂಗಳಿಗೆ ಪಾಠ ಕಲಿಸಲು ನಿರ್ಧರಿಸಿದ್ದಾರೆ. ಟಿಕೆಟ್ ಆಕಾಂಕ್ಷಿಗಳಾಗಿದ್ದ ಬಾಬು ಶೆಟ್ಟಿ, ಸುಖಾನಂದ ಶೆಟ್ಟಿ, ಪ್ರಣಯಕುಮಾರ್ ವಗೈರೆಗಳು ಒಳಗೊಳಗೆ ಬಿಜೆಪಿ ಸೋಲಿಸಲು ಅಳಿಲುಸೇವೆ ಸಲ್ಲಿಸುತ್ತಿದ್ದಾರೆ. ಜೆಡಿಎಸ್‌ನಿಂದ ನಿಂತಿರುವ ಭೋಜ ಶೆಟ್ಟಿಯೂ ಬಿಜೆಪಿಯ ಬಂಟ್ ಓಟ್‌ಬ್ಯಾಂಕ್‌ಗೇ ಕೈಹಾಕುತ್ತಾನೆ.


ಒಣ ಸೊಕ್ಕಿನ ಸುಕುಮಾರ ಶೆಟ್ಟಿ ಬಗ್ಗೆ ಬೈಂದೂರು ಕ್ಷೇತ್ರದಲ್ಲಿ ಸದಭಿಪ್ರಾಯವಿಲ್ಲ. ಮೂಢನಂಬಿಕೆಯಿಂದ ಹೆಂಡತಿಯನ್ನೇ "ದೂರ" ಮಾಡಿದ ಈ ಭೂಪ ಜನರಿಗೆ ಅದ್ಹೇಗೆ ಸ್ಪಂದಿಸಿಯಾನು? ಹಾಗಂತ ಜನರಾಡಿಕೊಳ್ಳುತ್ತಿದ್ದಾರೆ. ಕೊಲ್ಲೂರು ಮೂಕಾಂಬಿಕಾ ದೇವಳದ ಆಡಳಿತ ಟ್ರಸ್ಟಿಯಾಗಿದ್ದಾಗ ಸುಕುಮಾರ ಶೆಟ್ಟಿ "ಖ್ಯಾತ"ನಾಗಿದ್ದ. ಇದೆಲ್ಲ ಎದುರಾಳಿ ಕಾಂಗ್ರೆಸ್ ಕ್ಯಾಂಡಿಡೇಟ್ ಗೋಪಾಲ ಪೂಜಾರಿಗೆ ಸಹಕಾರಿಯಾಗಿದೆ. ಹಿಂದೆ ಮೂರು ಬಾರಿ ಶಾಸಕನಾಗಿದ್ದ ಈತನಿಗೆ ಕ್ಷೇತ್ರದ ಉದ್ದಗಲ ಗೊತ್ತು, ಸಮಸ್ಯೆ-ಸಂಕಷ್ಟ ಗೊತ್ತು, ಬಡತನದಲ್ಲಿ ಬೆಳೆದ ಈ ಹಣವಂತ ಹೋಟೆಲಿಯರ್ ಸರಳ ಮನುಷ್ಯ. ಎಲ್ಲ ಧರ್ಮದ ಜನರೊಂದಿಗೆ ಸಲೀಸಾಗಿ ಬೆರೆಯುವ ಪೂಜಾರಿ ಹೆಸರು ಕೆಡಿಸಿಕೊಂಡವರಲ್ಲ. ಸುಕುಮಾರ ಶೆಟ್ಟಿ ಬಿಜೆಪಿಗೆ ಹೊರೆಯಾಗಿದ್ದಾನೆ; ಗೋಪಾಲ ಪೂಜಾರಿ ಹುಮ್ಮಸ್ಸಿನಲ್ಲಿದ್ದಾರೆ.

ಕಾರ್ಕಳ


ಕಾರ್ಕಳದಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಬಿಜೆಪಿಯ ಸುನಿಲ್‌ಕುಮಾರ್ ಮತ್ತು ಕಾಂಗ್ರೆಸ್‌ನ ಗೋಪಾಲ ಭಂಡಾರಿ ಮುಖಾಮುಖಿಯಾಗಿ ನಿಂತಿದ್ದಾರೆ. ಈ ಕ್ಷೇತ್ರದಲ್ಲಿ ಭಂಡಾರಿ ಎರಡು ಬಾರಿ ಶಾಸಕನಾಗಿದ್ದರೆ, ಸುನಿಲ್ ಒಮ್ಮೆ ಗೆದ್ದಿದ್ದ. ಬಿಲ್ಲವರ ಬಾಹುಳ್ಯದ ಕ್ಷೇತ್ರವಿದು. ಅರೆಬಿಲ್ಲವ ಸುನಿಲ್‌ಕುಮಾರ್ ಸಂಘಪರಿವಾರದ ಕೇಡರ್. ಸಜ್ಜನ-ಸರಳ ಭಂಡಾರಿ ಅತೀ ಸಣ್ಣ ಕ್ಷೌರಿಕ ಸಮುದಾಯದವರು. ವೀರಪ್ಪ ಮೊಯ್ಲಿ ಮಂತ್ರಿ-ಮುಖ್ಯಮಂತ್ರಿಯಾಗಿದ್ದಾಗ ಭಂಡಾರಿಯೇ ಕ್ಷೇತ್ರ ನೋಡಿಕೊಳ್ಳುತ್ತಿದ್ದವರು. ಆದರೆ ಎಂದೂ ಅಡ್ಡದಾರಿಗಿಳಿದು ಹೆಸರು ಕೆಡಿಸಿಕೊಂಡವರಲ್ಲ. ಭಂಡಾರಿ ಶಾಸಕನಾಗಿ ಮಾಡಿದ ಕೆಲಸ, ಜನರಿಗೆ ನೆರವಾದ ರೀತಿ ಆತನನ್ನು ಜನಾನುರಾಗಿ ಮಾಡಿದೆ.

ದತ್ತಪೀಠ ಪಾತಕದ ಬ್ರೈನ್‌ಬ್ರಾಡಕ್ಸ್ ಸುನಿಲ್ ಕುಮಾರ್ ಬಿಲ್ಲವರ ಮತದ ಮೇಲೆ ಕಣ್ಣು ಹಾಕಿ ಜಾತಿ ರಾಜಕೀಯ ಮಾಡುತ್ತಿದ್ದಾನೆ. ಈತ ಶಾಸಕನಾಗಿದ್ದಾಗ ಮಾಡಿದ ನಖರಾ, ಕೂಡಿಹಾಕಿದ ಕಪ್ಪು ಸಂಪತ್ತು ಮತಾಂಧತೆಗಳನ್ನು ಜನರಿನ್ನೂ ಮರೆತಿಲ್ಲ. ಹೀಗಾಗಿ ಈತ ಉಡುಪಿ-ಚಿಕ್ಕಮಗಳೂರು ಲೋಕಸಭಾ ಬೈ-ಇಲೆಕ್ಷನ್‌ನಲ್ಲೂ ದೊಡ್ಡ ಲೀಡ್ ಕಾರ್ಕಳದಲ್ಲಿ ಪಡೆಯದೇ ಮುಗ್ಗರಿಸಿದ್ದ. ಕಟ್ಟಾ ಬಿಜೆಪಿಗಳಾದ ಕಾರ್ಕಳ ಕೊಂಕಣಿ ಮತ್ತಿತರ ಚೆಡ್ಡಿಗಳಿಗೆ ಈತನ ಕಂಡರಾಗದು. ಕಾರ್ಕಳದಲ್ಲಿ ಕತ್ತುಕತ್ತಿನ ಹೋರಾಟ ನಡೆಯುವುದಂತೂ ಗ್ಯಾರಂಟಿ. ಸಜ್ಜನ ಗೋಪಾಲ ಭಂಡಾರಿ ಗೆದ್ದರೆ ಕ್ಷೇತ್ರಕ್ಕೆ ಅನುಕೂಲ; ಕೈತಾನ ಸುನಿಲ್ ಗೆದ್ದರೆ ಕಾರ್ಕಳಕ್ಕೆ ಗಂಡಾಂತರ.


● ನಹುಷ




ಬಿ.ಎಂ.ಸುಕುಮಾರ್ ಶೆಟ್ಟಿ



ಗೋಪಾಲ್ ಪೂಜಾರಿ




ಗೋಪಾಲ್ ಬದ್ರಿ



ಸುನೀಲ್‌ಕುಮಾರ್





ಸಂಜೀವ್ ಮಠಂದೂರ್




ಡಾ. ರಘು

ವರುಣಾ: ಸಿದ್ದು ವಿರುದ್ಧ ಹಣದ ಹೊಳೆ







ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರಾಗಬಹುದು ಎಂಬ ಕುತೂಹಲಕಾರಿ ಪ್ರಶ್ನೆಗೆ ಕಾಂಗ್ರೆಸ್‌ನ ಹೈಕಮಾಂಡ್ ಸ್ಪಷ್ಟ ಉತ್ತರ ಕಂಡುಕೊಂಡಿದೆ ಎಂಬ ಸುದ್ದಿ ಕೇಳಿಬಂದಿದೆ. ಅಗತ್ಯ ಸೀಟು ಗಳಿಸಿದಲ್ಲಿ ಮೊದಲ ಅರ್ಧ ಅವಧಿಗೆ ಸಿದ್ದರಾಮಯ್ಯ ಹಾಗೂ ಉಳಿದ ಅರ್ಧ ಅವಧಿಗೆ ಖರ್ಗೆ ಅಥವಾ ಪರಮೇಶ್ವರ್ ಸಿಎಂ ಆಗುವುದೆಂದು ಹೈಕಮಾಂಡ್ ಮುಂದಿಟ್ಟ ಸೂತ್ರ ಅಂತಿಮಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ.

ಮತ್ತೊಂದು ಕಡೆ ಭಾವೀ ಮುಖ್ಯಮಂತ್ರಿಯೆಂದೇ ಬಿಂಬಿತವಾಗಿರುವ ಸಿದ್ದರಾಮಯ್ಯನವರ ಸ್ವಕ್ಷೇತ್ರ ವರುಣಾದಲ್ಲಿ ನಾನಾ ರೀತಿಯ ರಾಜಕೀಯ ಪಲ್ಲಟಗಳು ಸಂಭವಿಸುತ್ತಿದ್ದು ವಾತಾವರಣ ದಿನೇದಿನೇ ರಂಗೇರುತ್ತಿದೆ.

ಐದು ಬಾರಿ ಆರಿಸಿ ಬಂದಿರುವ ಸಿದ್ದರಾಮಯ್ಯನವರ ವಿರುದ್ಧ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಎಸ್.ಡಿ. ಮಹೇಂದ್ರ, ಜೆಡಿಎಸ್‌ನ ಚೆಲುವರಾಜು ಮತ್ತು ಕೆಜೆಪಿಯ ಕಾ.ಪು.ಸಿದ್ದಲಿಂಗಸ್ವಾಮಿ ಎಲ್ಲರೂ ಮೊಟ್ಟಮೊದಲ ಬಾರಿ ಅಸೆಂಬ್ಲಿ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಭಾರೀ ಸುದ್ದಿ ಮಾಡುತ್ತಿರುವ ಸಿದ್ದಲಿಂಗಸ್ವಾಮಿಯಂತೂ ರಾಜಕೀಯ ಕ್ಷೇತ್ರದಲ್ಲಿ ಈಗಷ್ಟೇ ಕಾಲಿಡುತ್ತಿದ್ದಾರೆ. ಮೇಲ್ನೋಟಕ್ಕೆ ಸಿದ್ದು ಅನಾಯಾಸವಾಗಿ ಮತ್ತೆ ಅಸೆಂಬ್ಲಿಗೆ ಹೋಗುತ್ತಾರೆ ಎನಿಸಿದರೂ ಪರಿಸ್ಥಿತಿ ಅಷ್ಟು ಸುಲಭವಾಗಿಲ್ಲ. ತನ್ನ ಎದುರಾಳಿಗಳು ತೀರಾ ಹೊಸಬರಾಗಿರುವ ಕಾರಣ ಸಿದ್ದು ಕೂಡ ಅಷ್ಟೇನೂ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಆದರೆ ಕ್ಷೇತ್ರದಲ್ಲಿ ಒಮ್ಮೆ ಸುತ್ತಾಡಿದರೆ ಕಾಂಗ್ರೆಸ್ ತನ್ನ ಎದುರಾಳಿಗಳನ್ನು ಯಾವ ಕಾರಣಕ್ಕೂ ಕಡೆಗಣಿಸುವಂತಿಲ್ಲ.

ಈ ನಡುವೆ ತಮ್ಮ ಪುತ್ರ ರಾಕೇಶ್‌ನನ್ನು ವರುಣಾದಲ್ಲಿ ನಿಲ್ಲಿಸಿ ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಲು ಆಸಕ್ತಿ ತೋರಿದ್ದಾರೆಂಬ ವದಂತಿಗಳೂ ಹರಡಿದ್ದವು. ಎರಡೂ ಕ್ಷೇತ್ರಗಳಿಂದಲೂ ಟಿಕೆಟ್ ಬಯಸಿದ್ದರೆಂದೂ ಆದರೆ ಹೈಕಮಾಂಡ್ ಆ ಬೇಡಿಕೆಯನ್ನು ತಿರಸ್ಕರಿಸಿತೆಂದೂ ಮತ್ತಷ್ಟು ಸುದ್ದಿಗಳು ಹರಡಿವೆ. ಅತ್ತಕಡೆ ಸಿದ್ದು ಇವೆಲ್ಲವನ್ನೂ ತಳ್ಳಿಹಾಕಿ ಟಿಕೆಟ್ ಹಂಚಿಕೆ ರಾದ್ಧಾಂತದಲ್ಲಿ ಬಿಡುವಿಲ್ಲದೆ ತೊಡಗಿಸಿಕೊಂಡಿದ್ದರೆ, ಇತ್ತಕಡೆ ವರುಣಾ ಕ್ಷೇತ್ರದಲ್ಲಿ ಸಿದ್ದು ರಾಜಕೀಯ ಎದುರಾಳಿಗಳು ಸಿದ್ದರಾಮಯ್ಯರ ಸಿಎಂ ಪದವಿ ಓಟಕ್ಕೆ ಆರಂಭದಲ್ಲೇ ಅಡ್ಡಗಾಲು ಹಾಕಲು ರಾಜಕೀಯ ತಂತ್ರಗಳನ್ನು ಹೆಣೆಯುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಸುಮಾರು ಎರಡು ಲಕ್ಷ ಮತಗಳಿವೆ. ಅದರಲ್ಲಿ ಲಿಂಗಾಯತರು ಸುಮಾರು 45 ಸಾವಿರದಷ್ಟಿದ್ದರೆ, ದಲಿತರು ಒಟ್ಟಾರೆ 45 ಸಾವಿರ, ಈ ಮೇಲಿನ ಜಾತಿಗಳಿಗೆ ಸರಿಸಮವಾಗಿರುವ ಕುರುಬರು ಸುಮಾರು 44 ಸಾವಿರದಷ್ಟಿದ್ದಾರೆ. ನಂತರದ ಸ್ಥಾನದಲ್ಲಿ ನಾಯಕರು 20 ಸಾವಿರ, ಒಕ್ಕಲಿಗರು 10 ಸಾವಿರ, ಉಪ್ಪಾರರು 10 ಸಾವಿರ, ಮುಸ್ಲಿಮರು 5ರಿಂದ 6 ಸಾವಿರದಷ್ಟಿದ್ದರೆ, ಇತರೆ ಹಿಂದುಳಿದ ಜಾತಿಗಳ ಸಂಖ್ಯೆ ಒಟ್ಟಾರೆ 15 ಸಾವಿರದಷ್ಟಿದೆ.

ಕ್ಷೇತ್ರ ಪುನರ್‌ವಿಂಗಡಣೆಯ ನಂತರ ರಚಿತವಾದ ವರುಣಾ ಕ್ಷೇತ್ರಕ್ಕೆ ಮೈಸೂರು, ನಂಜನಗೂಡು ಮತ್ತು ಟಿ.ನರಸಿಪುರ ಮೂರೂ ತಾಲೂಕುಗಳ ಒಂದೊಂದು ಭಾಗವನ್ನು ಸೇರಿಸಲಾಗಿದೆ. ಕಳೆದ 2008ರ ಚುನಾವಣೆಯೇ ಈ ನೂತನ ಕ್ಷೇತ್ರದಲ್ಲಿ ನಡೆದ ಮೊದಲ ಚುನಾವಣೆಯಾಗಿತ್ತು. ಆ ವೇಳೆಯಲ್ಲಿ ವರುಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿದ್ದ ಜನರ ಸಂಖ್ಯೆ ಒಟ್ಟು 1,89,041. ಅವುಗಳ ಪೈಕಿ ಒಟ್ಟು ಚಲಾವಣೆಯಾದ ಮತಗಳು 1,44,000. ಅದರಲ್ಲಿ ಸಿದ್ದರಾಮಯ್ಯನವರಿಗೆ ಸಿಂಹಪಾಲು.. ಬರೋಬ್ಬರಿ 71,908. ಅಂದರೆ ಚಲಾವಣೆಯಾದ ಮತಗಳಲ್ಲಿ ಸರಿಸುಮಾರು ಶೇಕಡ 45ರಷ್ಟು. ಇನ್ನು ಎರಡನೆ ಸ್ಥಾನ ಪಡೆದ ಬಿಜೆಪಿಯ ನಿವೃತ್ತ ಪೊಲೀಸ್ ಅಧಿಕಾರಿ ರೇವಣ್ಣಸಿದ್ದಯ್ಯನವರು 53,060. ಬಿಎಸ್‌ಪಿಯ ಪಿ.ಗುರುಪಾದಸ್ವಾಮಿಯವರು ಜೆಡಿಎಸ್‌ನ ಎಚ್‌ವಿ ಕೃಷ್ಣಸ್ವಾಮಿಯನ್ನು ನಾಲ್ಕನೇ ಸ್ಥಾನಕ್ಕೆ ದೂಡಿ ಮೂರನೆ ಸ್ಥಾನ ಗಳಿಸಿಕೊಂಡಿದ್ದರು. ಇಲ್ಲಿ ಬಿಎಸ್‌ಪಿ- 5,424 ಅಂತಲೂ, ಇದರಲ್ಲಿ ಬಿಎಸ್‌ಪಿ - 5,424 ಹಾಗೂ ಜೆಡಿಎಸ್ 4,133 ಓಟುಗಳನ್ನು ತನ್ನದಾಗಿಸಿಕೊಂಡಿತ್ತು.

ಈ ಬಾರಿ ಸಿದ್ದುಗೆ ನೇರ ಪ್ರತಿಸ್ಪರ್ಧಿಯೆಂದರೆ ರಾಜಕೀಯದಲ್ಲಿ "ಇನ್ನೂ ಬಚ್ಚಾ" ಆಗಿರುವ ಸಿದ್ದಲಿಂಗಸ್ವಾಮಿ ಮಾತ್ರ. ಅದೂ ಸಹ ಈತನ ರಾಜಕೀಯ ಸಾಮರ್ಥ್ಯ ಅಥವಾ ಉನ್ನತ ವ್ಯಕ್ತಿತ್ವದ ಕಾರಣಕ್ಕಾಗಿ ಅಲ್ಲ; ಬದಲಿಗೆ ಕೇವಲ ಜಾತಿಯ ಕಾರಣಕ್ಕೆ, ಕ್ಷೇತ್ರದಲ್ಲಿ ಪ್ರಬಲವಾಗಿರುವ ಲಿಂಗಾಯತ ಜಾತಿಯ ಸಿದ್ದಲಿಂಗಸ್ವಾಮಿ ಯಡ್ಡಿಯ ಪರಮಾಪ್ತ.

ಯಡ್ಯೂರಪ್ಪ ಸಿಎಂ ಆಗಿದ್ದಾಗ ಆತನ ಬ್ರಹ್ಮಾಂಡ ಭ್ರಷ್ಟಾಚಾರಗಳನ್ನು ಖಂಡತುಂಡವಾಗಿ ಖಂಡಿಸುತ್ತಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಬಾಯಿ ಮುಚ್ಚಿಸಲು ಎಲ್ಲಾ ಪ್ರಯತ್ನಗಳು ವಿಫಲಗೊಂಡ ನಂತರ, ಸಿದ್ದು ಅವರ ಸ್ವಕ್ಷೇತ್ರದಲ್ಲೇ ಅವರನ್ನು ಹಣಿದು ಸೇಡು ತೀರಿಸಿಕೊಳ್ಳುವ ರಾಜಕೀಯಕ್ಕೆ ಯಡ್ಡಿ ಚಾಲನೆ ನೀಡಿ ಇಲ್ಲಿಗೆ ಎರಡು ವರ್ಷಗಳಾಯ್ತು. ಅದಕ್ಕಾಗಿ ತನ್ನ ಖಾಸಗಿ ಸಹಾಯಕ ಸಿದ್ದಲಿಂಗಸ್ವಾಮಿಗೆ ಖಾದಿ ತೊಡಿಸಿ, ವರುಣಾ ಕ್ಷೇತ್ರದಲ್ಲಿ "ಸಮಾಜಸೇವಾ ಕಾರ್ಯ"ಗಳಲ್ಲಿ ತೊಡಗಿಸಿದರು.

ಹೀಗಾಗಿ ಇಲ್ಲಿಗೆ ಸುಮಾರು ಎರಡು ವರ್ಷಗಳಿಂದ ಈ ಯಡ್ಡಿ ಶಿಷ್ಯ ಸ್ವಾಮಿ ಸಾವಿರದ ನೋಟುಗಳ ಅದೆಷ್ಟು ಕಂತೆಗಳನ್ನು ಎಳೆದು ಚೆಲ್ಲಿದ್ದಾನೆಂಬುದು ಯಡ್ಡಿಗೂ ಗೊತ್ತಿಲ್ಲ, ಈ ಸ್ವಾಮಿಗೂ ಗೊತ್ತಿಲ್ಲ. ತನ್ನ ಸೇವಾಗುಣವನ್ನು ಪ್ರದರ್ಶಿಸಲು ಈತ ಕುರುಡರು, ಕುಂಟರಿಗೆ ಹಣ ಹರಿಸಿದ್ದಾನೆ, ನೂರಾರು ಪಡ್ಡೆ ಹುಡುಗರನ್ನೆ ಸಾಕಿಕೊಂಡಿದ್ದಾನೆ, ಗುಡಿಗೋಪುರಗಳ ಜೀರ್ಣೋದ್ಧಾರ ಮಾಡಿಸಿದ್ದಾನೆ, ಬಡ ಹೆಣ್ಣುಮಕ್ಕಳ ಮದುವೆಗೆ, ಬಡರೋಗಿಗಳ ಚಿಕಿತ್ಸೆಗೆ ಧನಸಹಾಯ ಮಾಡಿದ್ದಾನೆ, ಸಭೆ ಸಮಾರಂಭಗಳನ್ನು, ಜಾತ್ರೆಗಳನ್ನು ಆಯೋಜಿಸುತ್ತಿದ್ದಾನೆ. ಹೀಗೆ ರಾತ್ರೋರಾತ್ರಿ ಸಮಾಜಸೇವಾ ಧುರಂಧರನಾಗಿ ಸ್ವಾಮಿ ಅವತಾರವೆತ್ತಿದ್ದರಿಂದಾಗಿ ಒಂದಂತೂ ಒಳ್ಳೆಯದಾಯ್ತು, ಏನೆಂದರೆ ಅಕ್ರಮವಾಗಿ ಗಳಿಸಿದ್ದ ಜನರ ಹಣದ ಒಂದು ಸಣ್ಣ ಭಾಗವಾದರೂ ಜನರ ನಡುವೆ ಹಂಚಿಕೆಯಾದಂತಾಯ್ತು.

ಇಂಥಾ ಎಡೆಬಿಡದ "ಸೇವಾಕಾರ್ಯ"ಗಳ ಬಗ್ಗೆ ಮಾಧ್ಯಮಗಳಲ್ಲಿ ಅತಿರಂಜಿತ ಸುದ್ದಿಗಳು ಪ್ರಚಾರವಾಗುವಂತೆ ಏರ್ಪಾಡು ಮಾಡಿಕೊಂಡ ಪರಿಣಾಮವಾಗಿ ಪ್ರತಿಷ್ಠಿತ ವರುಣಾ ಕ್ಷೇತ್ರದಲ್ಲಿ ಸಿದ್ದಲಿಂಗಸ್ವಾಮಿಯ ಉಮೇದುವಾರಿಕೆ ಭಾರೀ ಚರ್ಚೆಯ ವಿಷಯವಾಗಿಬಿಟ್ಟದೆ.

ಸಿದ್ದರಾಮಯ್ಯ ಹೇಳಿಕೇಳಿ ಮಠ-ಮಾನ್ಯಗಳಿಗೆ ಸೊಪ್ಪುಹಾಕುವವರಲ್ಲ; ಹೇಗೂ ಸುತ್ತೂರು ಮಠದ ಸ್ವಾಮಿಗಳು ತಮ್ಮ ಕುಲಬಾಂಧವ ಹಾಗೂ ಪಟ್ಟದಶಿಷ್ಯನಂತಿರುವ ಯಡ್ಡಿಯ ಪರವಾಗಿ ನಿಂತು, ಕಾಪು ಸಿದ್ದಲಿಂಗ ಸ್ವಾಮಿಯ ಪರವಾಗಿ ಲಿಂಗಾಯತ ಮತಗಳನ್ನು ಜಮಾವಣೆ ಮಾಡುತ್ತಾರೆ ಎಂಬ ಸುದ್ದಿ ಕೂಡ ಇತ್ತೀಚೆಗೆ ಹೊರಬಿದ್ದಿದೆ. ಹೀಗಾಗಿ ಹೆಚ್ಚಿನ ಲಿಂಗಾಯತ ಓಟುಗಳು ಕಾಪು ಪಾಲಾಗುವ ಸಾಧ್ಯತೆಯಿದೆ.

ಜೊತೆಗೆ ಇತರ ಪಕ್ಷಗಳ ಹಾಗೂ ಜಾತಿಗಳ ಮುಖಂಡರನ್ನು ನಾನಾ ಆಮಿಷಗಳ ಮೂಲಕ ತಮ್ಮ ತೆಕ್ಕೆಗೆ ಸೆಳೆಯುತ್ತಿದ್ದಾರೆ. ಈಗಾಗಲೇ ಕುರುಬ ಜಾತಿಯವರೇ ಆದ ರಾಮು ಎಂಬ ಸಿದ್ದರಾಮಯ್ಯನ ಶಿಷ್ಯನನ್ನು ಕೆಜೆಪಿ ತನ್ನ ಬುಟ್ಟಿಗೆ ಹಾಕಿಕೊಂಡಿದೆ. ಇಂಥಾ ವಿದ್ಯಮಾನಗಳಿಂದ ಉತ್ತೇಜಿತರಾಗಿರುವ ಸ್ವಾಮಿಯ ಬೆಂಬಲಿಗರು ಈಗಾಗಲೇ ತಾವು ಗೆದ್ದೇ ಬಿಟ್ಟದ್ದೇವೆ ಎಂಬ ಭರಾಟೆಯಲ್ಲಿ ಮಾತಾಡುತ್ತಿದ್ದಾರೆ. ಹಣವೊಂದೇ ಚುನಾವಣೆಯ ಸೋಲು ಗೆಲುವುಗಳನ್ನು ನಿರ್ಧಾರ ಮಾಡುವ ಹಾಗಿದ್ದಿದ್ದರೆ ಯಡ್ಡಿ ಕ್ಯಾಂಡಿಡೇಟ್ ಸ್ವಾಮಿ ಗೆಲುವನ್ನು ಕೊಂಡುಕೊಳ್ಳುತ್ತಿದ್ದುದು ಗ್ಯಾರಂಟಿ. ಆದರೆ ನಮ್ಮ ಸುದೈವ; ನಮ್ಮ ರಾಜಕೀಯ ಇನ್ನೂ ಆ ಹಂತ ತಲುಪಿಲ್ಲ.

ಮತ್ತೊಂದು ಕಡೆ ಯಡ್ಡಿಯ ಕ್ಯಾಂಡಿಡೇಟ್‌ಗೆ ಇದಿರಾಗಿ ಬಿಜೆಪಿ ಪಕ್ಷ ಕೂಡ ಲಿಂಗಾಯತ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದೆ. ಹಾಲಿ ದಸರಾ ವಸ್ತುಪ್ರದರ್ಶನಾ ಪ್ರಾಧಿಕಾರದ ಅಧ್ಯಕ್ಷನಾಗಿರುವ ಎಸ್.ಡಿ.ಮಹೇಂದ್ರ ಗೆಲ್ಲುವ ಅಭ್ಯರ್ಥಿಯಲ್ಲವಾದರೂ ಲಿಂಗಾಯತ ಮತಗಳನ್ನು ಒಡೆಯಬಲ್ಲ ಅಭ್ಯರ್ಥಿ ಎಂಬುದರಲ್ಲಿ ಎರಡು ಮಾತಿಲ್ಲ. ಈತ ಜಗದೀಶ್ ಶೆಟ್ಟರ್‌ಗೆ ಆಪ್ತನಾಗಿರುವ ಕಾರಣಕ್ಕೆ ಬಿಜೆಪಿ ಕೂಡ ಬಿರುಸಿನ ಪ್ರಚಾರ ನಡೆಸಲಿದೆ.

ಇನ್ನು ದೇವೇಗೌಡರ ಜೆಡಿಎಸ್ ಪಕ್ಷದ ವಿಚಾರ. ಮೊನ್ನೆ ಮೊನ್ನೆ ಸಿದ್ದು ಮೂಗಿಗೆ ತುಪ್ಪ ಸವರುವ ವಿಫಲ ಪ್ರಯತ್ನ ನಡೆಸಿದ ಜೆಡಿಎಸ್ ಪಕ್ಷ ಕೊನೆಗೆ ಸಿದ್ದು ಮತಬ್ಯಾಂಕ್ ಒಡೆಯುವ ತಂತ್ರಕ್ಕೆ ಶರಣಾಗಿದೆ. ನಾಯಕ ಜಾತಿಗೆ ಸೇರಿದ ಚೆಲುವರಾಜು ಎಂಬ ಪೊಲೀಸ್ ಅಧಿಕಾರಿಯಿಂದ ರಾಜೀನಾಮೆ ಕೊಡಿಸಿ ವರುಣಾದಲ್ಲಿ ಕಣಕ್ಕಿಳಿಸಿದ್ದಾರೆ. ಆ ಮೂಲಕ ಪಾರಂಪರಿಕವಾಗಿ ಸಿದ್ದರಾಮಯ್ಯನಿಗೆ ಮೀಸಲಾಗಿದ್ದ ಸುಮಾರು 20 ಸಾವಿರದಷ್ಟಿರುವ ನಾಯಕ ಜಾತಿಯ ಮತಗಳನ್ನು ಸೆಳೆದು ಸಿದ್ದುರನ್ನು ದುರ್ಬಲಗೊಳಿಸುವ ಹುನ್ನಾರ ನಡೆಸಿದ್ದಾರೆ.

ಇತಿಹಾಸವನ್ನು ಗಮನಿಸಿದರೆ ಸಂಖ್ಯಾಬಾಹುಳ್ಯವಿರುವ ಲಿಂಗಾಯತ ಮತ್ತು ಕುರುಬ ಜಾತಿಯ ಅಭ್ಯರ್ಥಿಗಳು ಪ್ರತಿಸ್ಪರ್ಧಿಗಳಾಗಿ ಸೆಣಸುತ್ತಾ ಬಂದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸಿದ್ದರಾಮಯ್ಯ ಸ್ಪರ್ಧಿಸಿದ 8 ಚುನಾವಣೆಗಳಲ್ಲಿ 6 ಚುನಾವಣೆಗಳಲ್ಲಿ ಗೆದ್ದಿದ್ದರೆ, 2 ಬಾರಿ ಸೋತಿದ್ದಾರೆ. ಈ ಎರಡೂ ಬಾರಿಯೂ ಸಿದ್ದರಾಮಯ್ಯನ ವಿರುದ್ಧ ಗೆದ್ದ ಅಭ್ಯರ್ಥಿಗಳು ಲಿಂಗಾಯತರಾಗಿದ್ದುದು ಕಾಕತಾಳೀಯವೇನಲ್ಲ. 1989ರಲ್ಲಿ ಎಂ.ಪಿ.ರಾಜಶೇಖರಮೂರ್ತಿಯ ವಿರುದ್ಧ ಹಾಗೂ 1999ರಲ್ಲಿ ಗುರುಸ್ವಾಮಿಯ ವಿರುದ್ಧ ಸಿದ್ದು ಸೋತಿದ್ದನ್ನು ಮತ್ತು ಅದಕ್ಕೆ ಕಾರಣವಾದ ಅಂಶಗಳನ್ನು ಕಡೆಗಣಿಸುವಂತೆಯೇ ಇಲ್ಲ.

ಆದರೆ ಮತ್ತೆ ಕಾಂಗ್ರೆಸ್‌ಗೆ ಮರಳಿರುವ ಲಿಂಗಾಯತ ಜಾತಿಗೆ ಸೇರಿದ ರೇವಣ್ಣಸಿದ್ದಯ್ಯನವರು ಸಿದ್ದು ಪರ ಪ್ರಚಾರದಲ್ಲಿ ತೊಡಗುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೆ ಮೊದಲಿನಿಂದಲೂ ಸಿದ್ದುಗೆ ಕಟ್ಟಾ ಬೆಂಬಲಿಗರಾಗಿರುವ ಹಲವಾರು ಲಿಂಗಾಯತ ಮುಖಂಡರಿದ್ದಾರೆ. ಜೊತೆಗೆ ಶಂಕರ ಬಿದರಿಯ ಸಂಬಂಧಿಕರೂ ಕೂಡ ಈ ಕ್ಷೇತ್ರದಲ್ಲಿ ರಾಜಕೀಯವಾಗಿ ಪ್ರಭಾವಿಗಳಾಗಿದ್ದು ಅದು ಕಾಂಗ್ರೆಸ್‌ಗೆ ಮತ್ತಷ್ಟು ಮತಗಳನ್ನು ಸೇರಿಸಲಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಒಂದು ಅವಧಿಗೆ ದಲಿತ ನಾಯಕ ಖರ್ಗೆ ಅಥವಾ ಪರಮೇಶ್ವರ್ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಸುದ್ದಿ ದಲಿತ ಕಾರ್ಯಕರ್ತರಲ್ಲಿ ಮತ್ತಷ್ಟು ಹುರುಪು ಮೂಡಿಸಿದೆ. ಆದ್ದರಿಂದ ದಲಿತರು ಸಾರಾಸಗಟು ಕಾಂಗ್ರೆಸ್‌ನ ಕೈಹಿಡಿಯುವ ಲಕ್ಷಣಗಳು ಗೋಚರಿಸುತ್ತಿವೆ.

ಕ್ಷೇತ್ರದ ಓಡಾಟದಲ್ಲಿ ಮೇಲುನೋಟಕ್ಕೇ ಎದ್ದುಕಾಣುವ ಅಂಶವೊಂದಿದೆ. ಅದೇನೆಂದರೆ ದಲಿತರು ಮತ್ತು ಹಿಂದುಳಿದ ಜಾತಿಗಳ ಜನರ ನಡುವೆ ಸಿದ್ದುಗೆ ಒಂದು ರೀತಿಯ ಬೇಷರತ್ ಬೆಂಬಲ ಇದ್ದಂತೆ ಕಂಡುಬರುತ್ತದೆ. ತೀವ್ರ ಸ್ಪರ್ಧೆಯ ಹೊರತಾಗಿಯೂ ಸಿದ್ದರಾಮಯ್ಯ ಗೆಲುವು ಖಚಿತ ಎನ್ನಲು ಅಡ್ಡಿಯಿಲ್ಲ. ಆದರೆ ಅದಕ್ಕಾಗಿ ಸಾಕಷ್ಟು ಬೆವರು ಹರಿಯಬೇಕಾದ ಅಗತ್ಯವಿದೆ.

ಹಾಗೆಯೇ ಅವರ ಹುಟ್ಟೂರು ಸಿದ್ದರಾಮನಹುಂಡಿಯ ಮುಗ್ಧ ಮತದಾರರು ಸಿದ್ದರಾಮಯ್ಯ ಸಿಎಂ ಆಗುವುದನ್ನು ಕಾಣಲು ಹಂಬಲಿಸುತ್ತಿದ್ದಾರೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ವಿರೋಧಿಗಳಿಗೆ ವಾದವೇ ಇಲ್ಲ


ರಾಜಕೀಯ ಪ್ರಚಾರದಲ್ಲಿ ಎರಡು ವಿಧಗಳಿವೆ. ತಮ್ಮ ಸಾಧನೆಗಳನ್ನು ಅತಿರಂಜಿತವಾಗಿ ಜನರ ಮುಂದೆ ಬಣ್ಣಿಸಿಕೊಳ್ಳುವುದು ಒಂದು ವಿಧವಾದರೆ, ತಮ್ಮ ವಿರೋಧಿಗಳ ವೈಫಲ್ಯವನ್ನು, ನಕಾರಾತ್ಮಕ ಅಂಶಗಳನ್ನು ಪ್ರಚಾರ ಮಾಡಿ ತಮ್ಮ ಪರ ಅನುಕಂಪ ಗಿಟ್ಟಿಸುವುದು ಮತ್ತೊಂದು ವಿಧ. ಆದರೆ ವರುಣಾ ಕ್ಷೇತ್ರದಲ್ಲಿ ಸಿದ್ದು ವಿರುದ್ಧ ಸ್ಪರ್ಧಿಸಿ ಭಾರೀ ಸಂಚಲನವನ್ನೇ ಉಂಟುಮಾಡಿರುವ ಕಾ.ಪು.ಸಿದ್ದಲಿಂಗಸ್ವಾಮಿಗೆ ಈ ಎರಡೂ ಅಂಶಗಳಲ್ಲೂ ಭಾರೀ ಕೊರತೆ ಎದ್ದು ಕಾಣುತ್ತಿದೆ.

ಮೊದಲನೆಯದಾಗಿ ಆತನ ಜೀವಮಾನದ ಸಾಧನೆಯಾದರೂ ಏನು? ಹೇಗೇಗೋ ಮಾಡಿ ಕೋಟಿಗಟ್ಟಲೆ ಹಡಬೆ ಹಣ ಗಳಿಸಿರುವುದು ಮೊದಲನೆಯ ಸಾಧನೆ. ಆ ಹಣದ ಥೈಲಿಯನ್ನು ಕ್ಷೇತ್ರದುದ್ದಕ್ಕೂ ನೀರಿನಂತೆ ಹರಿಸುತ್ತಿರುವುದು ಎರಡನೇ ಸಾಧನೆ. ಎಲ್ಲಕ್ಕಿಂತಲೂ ಪ್ರಮುಖ ಸಾಧನೆಯೆಂದರೆ ಕ್ಷೇತ್ರದಲ್ಲಿ ಒಂದಷ್ಟು ಹೆಚ್ಚಿನ ಸಂಖ್ಯೆಯಲ್ಲಿರುವ ಲಿಂಗಾಯತ ಜಾತಿಗೆ ಸೇರಿದ ದಂಪತಿಗಳ ಪುತ್ರರತ್ನವಾಗಿ ಈ ಭೂಮಿಗೆ ಬಂದಿರುವುದು. ಇನ್ನು ನಾಲ್ಕನೆಯ ಮತ್ತು ಅಂತಿಮ ಸಾಧನೆಯೆಂದರೆ ಈತ ಯಡಿಯೂರಪ್ಪನ ಆಪ್ತ ಸಹಾಯಕ ಎಂಬುದು. ಇವುಗಳಲ್ಲದೆ ಮತ್ತೇನಾದರೂ ಸಾಧನೆ ಮಾಡಿದ್ದಾರಾ ಅಂತ ಬ್ಯಾಟರಿ ಹಾಕಿ ಹುಡುಕಿದರೂ ಪರಿಣಾಮ ಮಾತ್ರ ಶೂನ್ಯ.


ಇನ್ನು ಸಿದ್ದಲಿಂಗಸ್ವಾಮಿಯ ಪಟಾಲಂಗೆ ತಮ್ಮ ಎದುರಾಳಿ ಸಿದ್ದರಾಮಯ್ಯರ ಮೇಲೆ ಆರೋಪಿಸಲು ಹೇಳಿಕೊಳ್ಳುವಂಥಾ ವಿಷಯಗಳೇ ಸಿಗುತ್ತಿಲ್ಲ. ಅವ್ಯವಹಾರ, ಹಗರಣಗಳ ಆರೋಪ ಹೊರಿಸೋಣ ಅಂದರೆ, ಸಿದ್ದು ಅಂಥವುಗಳಲ್ಲಿ ತೊಡಗಿಸಿಕೊಂಡಿಲ್ಲ. ಹೀಗಾಗಿ ಅಂತೆಕಂತೆಗಳನ್ನೇ ಆಧರಿಸಿ ಕಾಪು ಪಟಾಲಂ ಅಪಪ್ರಚಾರದ ಆಂದೋಲನ ಕೈಗೊಂಡಂತೆ ಕಂಡುಬರುತ್ತಿದೆ. ಸಿದ್ದರಾಮಯ್ಯ ಕುರುಬ ಜನಾಂಗದ ಪರ ಜಾತಿವಾದ ಮಾಡುತ್ತಾರೆ; ಕೇವಲ ಹುಂಡಿ (ಕುರುಬರು ಹೆಚ್ಚಾಗಿರುವ ಗ್ರಾಮಗಳ ಹೆಸರುಗಳು ಹುಂಡಿ ಎಂಬ ಪದಬಳಕೆಯೊಂದಿಗೆ ಗುರುತಿಸಲ್ಪಡುತ್ತಿರುವುದು ಈ ಭಾಗದ ವಿಶೇಷ) ಗಳನ್ನು ಮಾತ್ರ ಅಭಿವೃದ್ಧಿ ಪಡಿಸಿದ್ದಾರೆ ಮುಂತಾದ ಆರೋಪಗಳನ್ನು ಹರಿಯಬಿಟ್ಟದ್ದಾರೆ. ಆದರೆ ವಾಸ್ತವದಲ್ಲಿ ಸಿದ್ದರಾಮಯ್ಯ ಪ್ರೊ.ರಾಮದಾಸ್, ದೇವನೂರು ಮುಂತಾದವರ ಗರಡಿಯಲ್ಲಿ ಪಳಗಿದ ಪಟು. ಮೇಲಾಗಿ ಅಲ್ಪಸಂಖ್ಯಾತ-ಹಿಂದುಳಿದ-ದಲಿತ ಜನಾಂಗಗಳನ್ನು ಒಂದೇ ವೇದಿಕೆಗೆ ತರಲು ಶ್ರಮಿಸಿದವರು. ಹೀಗಾಗಿ ಈ ಅಂಶ ಹೆಚ್ಚಾಗಿ ಮಹತ್ವ ಪಡೆದುಕೊಳ್ಳುವುದಿಲ್ಲ.

ಕಾಂಗ್ರೆಸ್ ಪಕ್ಷದಲ್ಲಿ ಸೀನಿಯಾರಿಟಿ ಇರುವ ಖರ್ಗೆ, ಪರಮೇಶ್ವರ್‌ರಂಥ ದಲಿತ ನಾಯಕರು ಸಿಎಂ ಆಗಲು ಸಿದ್ದರಾಮಯ್ಯನೇ ಅಡ್ಡಗಾಲು ಹಾಕುತ್ತಿದ್ದಾರಂತೆ ಎಂಬ ಗಾಸಿಪ್ ಹರಡಿ ದಲಿತ ಮತದಾರರನ್ನು ದಿಕ್ಕು ತಪ್ಪಿಸುವ ಹತಾಶ ಪ್ರಯತ್ನವೂ ಅಲ್ಲಲ್ಲಿ ಕಂಡುಬರುತ್ತಿದೆ. ಈ ವಾದದಲ್ಲಿ ಹುರುಳಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಶತಶತಮಾನಗಳಿಂದ ತುಳಿತಕ್ಕೊಳಗಾಗಿ, ಸದಾಕಾಲ ಅವಕಾಶ ವಂಚಿತರಾಗಿರುವ ಮುಗ್ಧ ದಲಿತ ಮತದಾರರ ಮನಸ್ಸಿನಲ್ಲಿ ಈ ವಾದ ಗೊಂದಲವನ್ನು ಉಂಟುಮಾಡುವ ಸಾಧ್ಯತೆಯನ್ನಂತೂ ಅಲ್ಲಗಳೆಯುವಂತಿಲ್ಲ.

ಮತ್ತೊಂದು ಪ್ರಮುಖ ಆರೋಪ ಸಿದ್ದು ಅವರ ಒರಟು ಸ್ವಭಾವಕ್ಕೆ ಸಂಬಂಧಿಸಿದ್ದು. 'ಅಧಿಕಾರಿಗಳಿಗೆ ಗೌರವವನ್ನೇ ಕೊಡುವುದಿಲ್ಲ, ನೀನು ತಾನು ಅಂತಾ ಏಕವಚನದಲ್ಲಿ ಮಾತಾಡಿಸುತ್ತಾರೆ' ಎಂಬುದು ಮತ್ತೊಂದು ಆರೋಪ. ಪರಮಭ್ರಷ್ಟರಾಗಿ, ಬಡಬಗ್ಗರನ್ನು ಹುರಿದುಮುಕ್ಕುತ್ತಿರುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವುದು ಜನಪ್ರತಿನಿಧಿಯಾದವರು ಮಾಡಲೇಬೇಕಾದ ಕರ್ತವ್ಯ. ಆದರೆ ಶಾಸನಸಭೆಗೆ ಹೋದವರೆಲ್ಲಾ ಅಧಿಕಾರಿಗಳೊಂದಿಗೆ ಶಾಮೀಲಾಗಿ ಭರ್ತಿ ಭೋಜನಕ್ಕೆ ಇಳಿದಿರುವುದು ಇಂದಿನ ರಾಜಕಾರಣದಲ್ಲಿ ಸರ್ವೇಸಾಮಾನ್ಯ. ಪರಿಸ್ಥಿತಿ ಹೀಗಿರುವಾಗ ಅಪರೂಪಕ್ಕೊಮ್ಮೆ ಸಿದ್ದರಾಮಯ್ಯನಂಥವರು ಆಗಾಗ್ಗೆ ಅಧಿಕಾರಿಗಳಿಗೆ ಬಿಸಿಮುಟ್ಟಿಸಿದ ಸುದ್ದಿಗಳು ಪ್ರಕಟವಾದಾಗ, ಇವರ ಹಾವಳಿಯಿಂದ ರೋಸಿಹೋಗಿರುವ ಜನ ಸಹಜವಾಗಿಯೇ ಸಂತೋಷ ವ್ಯಕ್ತಪಡಿಸುತ್ತಾರೆ. ಆದರೆ ಸಿದ್ದು ರಾಜಕೀಯ ವಿರೋಧಿಗಳಿಗೆ ಪ್ರಚಾರಕ್ಕೆ ವಿಷಯಗಳ ಕೊರತೆ ಎಷ್ಟು ತೀವ್ರವಾಗಿದೆಯೆಂದರೆ ಇಂಥಾ ಸಕಾರಾತ್ಮಕ ಅಂಶವನ್ನೂ ಕೂಡ ಅಪಪ್ರಚಾರಕ್ಕೆ ಬಳಸಿಕೊಳ್ಳುವ ಧಾವಂತದಲ್ಲಿದ್ದಾರೆ.



ಅಂಬಿ 'ಕೈ'ಗೆ ಟಿಕೆಟ್



ಮಂಡ್ಯ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ...ವಲ್ಲಿ ಕೊನೆಗೂ ಮಂಡ್ಯದ ಗಂಡು ಅಂಬರೀಷ್ ...ದಾಗಿದ್ದಾರೆ. ಟಿಕೆಟ್ ಗಿಟ್ಟಿಸಿಕೊಳ್ಳಲು ಅಂಬಿಗೆ ...ಪೈಪೋಟಿ ನೀಡಿದ್ದ ಮಾಜಿ ಸಚಿವ, ಹಾಲಿ ... ಜಿಲ್ಲಾಧ್ಯಕ್ಷ ಎಂ.ಎಸ್.ಆತ್ಮಾನಂದರ ಹರಸಾಹಸಕ್ಕೆ ...ಮಾಂಡ್ ಸೊಪ್ಪು ಹಾಕದಿರುವುದು ಪರೋಕ್ಷವಾಗಿ ...ರಾಜಕೀಯ ಜೀವನಕ್ಕೆ ಅಂತ್ಯ ಹಾಡಿದಂತಾಗಿದೆ.

...ಡ್ಯ ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ...ತವರಾಗಿದ್ದ ಆತ್ಮಾನಂದ 2004ರ ಚುನಾವಣೆಯಲ್ಲಿ ...ಶಾಸಕ ಜೆಡಿಎಸ್‌ನ ಎಂ.ಶ್ರೀನಿವಾಸ್‌ರವರ ಎದುರು ...ಮುಖಭವಿಸಿದ್ದರು. 2008ರ ಚುನಾವಣೆಯಲ್ಲಿ ಅಂಬಿ ...ಷ್ಯ ಹೆಚ್.ಬಿ.ರಾಮುಗೆ ಬಿ ಫಾರಂ ನೀಡುವಂತೆ ...ಹೂಂಡಿದ್ದರಿಂದ ಆತ್ಮಾನಂದರಿಗೆ ಟಿಕೆಟ್ ಕೈ ತಪ್ಪಿತ್ತು. ...ಕಾರಣಕ್ಕೆ ಮುನಿಸಿಕೊಂಡ ಆತ್ಮಾನಂದ ತಟಸ್ಥರಾದದ್ದು ...ಎಸ್‌ನ ಎಂ.ಶ್ರೀನಿವಾಸ್ ಎರಡನೇ ಬಾರಿಗೆ ಗೆಲ್ಲಲು ...ಯಾಗಿತ್ತು.

...ತ್ತೀಚೆಗೆ ನಡೆದ ಮಂಡ್ಯ ನಗರಸಭೆಯ ...ಚುನಾವಣೆಯಲ್ಲಿ 15 ಸ್ಥಾನಗಳು ಕಾಂಗ್ರೆಸ್‌ಗೆ ದಕ್ಕಿದ್ದರಿಂದ ...ಗುತ್ತಾಯ ಟಿಕೆಟ್ ಪಡೆಯಲೇಬೇಕೆಂದು ಮುನ್ನುಗ್ಗಿದ ...ನಂದರಿಗೆ ದೊಡ್ಡ ತಲೆನೋವು ತಂದಿಟ್ಟವರು ಮತ್ತದೇ ...ರೀಷ್! ಕಳೆದ ಬಾರಿ ಶ್ರೀರಂಗಪಟ್ಟಣದಲ್ಲಿ ರವೀಂದ್ರ ಶ್ರೀಕಂಠಯ್ಯನಿಗೆ ಟಿಕೆಟ್ ತಪ್ಪಿಸಿ 'ಬಿ' ಫಾರಂ ಗಿಟ್ಟಿಸಿದ್ದ ...ರೀಷ್ ಜೆಡಿಎಸ್‌ನ ರಮೇಶ್‌ಬಾಬು ...ಸಿದ್ದೇಗೌಡನ ಎದುರು ಮುಖಭಂಗ ಅನುಭವಿಸಿದ್ದರು. ...ಸೋಲಿನಲ್ಲಿ ರವೀಂದ್ರರ ಕಾಣಿಕೆ ದೊಡ್ಡದಿತ್ತು.

... ಸಲವೂ ಶ್ರೀರಂಗಪಟ್ಟಣದಲ್ಲಿ ಅದೇ ಫಲಿತಾಂಶ ...ವರ್ತನೆ ಆಗಬಹುದೆಂದು ಅಂಜಿದ ಅಂಬಿ ಮಂಡ್ಯ ಕ್ಷೇತ್ರದತ್ತ ಕಣ್ಣಿಟ್ಟಿದ್ದರು. ಅಲ್ಲದೆ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ್ದು ಅಂಬರೀಷ್‌ರನ್ನು ಪ್ರೇರೇಪಿಸಿದೆ. ಆದರೆ ಆತ್ಮಾನಂದ ಅಷ್ಟು ಸುಲಭಕ್ಕೆ ಮಂಡ್ಯದ ಗಂಡಿಗೆ ಮಂಡ್ಯವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ನೂತನ ನಗರಸಭಾ ಸದಸ್ಯರು ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರನ್ನು ಮುಂದಿಟ್ಟುಕೊಂಡು ಅಂಬಿಯನ್ನು ವಿರೋಧಿಸಿದ್ದರಲ್ಲದೆ, ಎಸ್.ಎಂ.ಕೃಷ್ಣ, ಪರಮೇಶ್ವರ್ ಮೊದಲಾದ ನಾಯಕರ ಬಳಿ ಅವರನ್ನೆಲ್ಲ ಕಳುಹಿಸಿ ಬಂಡಾಯದ ಬಾವುಟ ಹಾರಿಸಿದ್ದರು.

ಆದರೂ ಅಂಬಿಗೆ ಟಿಕೆಟ್ ನಿಶ್ಚಿತ ಎನ್ನುವ ಮಾಹಿತಿ ಬರುತ್ತಿದ್ದಂತೆ ಆತ್ಮಾನಂದ ಕೊನೆಯ ಪ್ರಯತ್ನವಾಗಿ "ಅಂಬರೀಷ್‌ಗೆ ಟಿಕೆಟ್ ನೀಡಿದರೆ ನಗರಸಭೆಗೆ ಆರಿಸಿ ಬಂದಿರುವ 15 ಮಂದಿ ಸದಸ್ಯರು ರಾಜೀನಾಮೆ ನೀಡುತ್ತಾರೆ" ಎಂಬ ಬೆದರಿಕೆ ಪತ್ರವನ್ನು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ಗೆ ತಲುಪುವಂತೆ ನೋಡಿಕೊಂಡಿದ್ದರು.

ಆದರೆ ಈ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದಂತೆ ಅಂಬಿ ಶಿಷ್ಯ ನಗರಸಭೆ ಸದಸ್ಯ ಹೊಸಹಳ್ಳಿ ಬೋರೇಗೌಡನ ಮುಂದಾಳತ್ವದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹಲವು ಸದಸ್ಯರು 'ನಾವು ಹಾಗೆ ಹೇಳೇ ಇಲ್ಲ. ಆತ್ಮಾನಂದ ಅಥವಾ ಅಂಬರೀಶ್ ಇಬ್ಬರಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಕೆಲಸ ಮಾಡುತ್ತೇವೆ ಎಂಬ ಮನವಿ ಪತ್ರಕ್ಕೆ ಸಹಿ ಹಾಕಿದ್ದೇವೆಯೇ ಹೊರತು ಅಂಬರೀಷ್‌ಗೆ ಟಿಕೆಟ್ ನೀಡಿದರೆ ವಿರೋಧಿಸುತ್ತೇವೆ ಅಂತಲ್ಲ' ಎಂದಿದ್ದರು.

ಆತ್ಮಾನಂದರ ಈ ರಾಜೀನಾಮೆ ಪ್ರಹಸನದ ಮರ್ಮ ಅರಿತ ನಂತರ ಕಾಂಗ್ರೆಸ್ ಹೈಕಮಾಂಡ್ ಅವರ ಹೆಸರನ್ನು ಶಾಶ್ವತವಾಗಿ ಬದಿಗೆ ಸರಿಸಿ, ಅಂಬರೀಶ್‌ಗೆ ಕಾಂಗ್ರೆಸ್ ಟಿಕೆಟ್ ಘೋಷಿಸಿದೆ.

ಅಂಬಿ ಬಗ್ಗೆ ಹೆಚ್‌ಡಿಕೆ ಸಾಫ್ಟ್!?

ಮಂಡ್ಯ ಜಿಲ್ಲೆಯ ಬೇರೆಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್‌ನ ಚುನಾವಣಾ ಪ್ರಚಾರ ಬಿರುಸಾಗಿ ನಡೆದಿದ್ದರೆ, ಮಂಡ್ಯದ ಅಭ್ಯರ್ಥಿ ಯಾರೆಂಬುದನ್ನೇ ಜಾತ್ಯತೀತ ಜನತಾ ದಳ ಇನ್ನೂ ನಿರ್ಧರಿಸಿಲ್ಲ. ದಳದ ಈ ಧೋರಣೆಯ ಹಿಂದೆ ದೊಡ್ಡದೊಂದು ರಾಜಕೀಯ ಲೆಕ್ಕಾಚಾರವೇ ಇದೆ ಎನ್ನಲಾಗುತ್ತಿದೆ. ಮದ್ದೂರಿನಲ್ಲಿ ಡಿ.ಸಿ.ತಮ್ಮಣ್ಣ ಹಾಗೂ ಶ್ರೀರಂಗಪಟ್ಟಣದಲ್ಲಿ ರಮೇಶ್‌ಬಾಬು ಬಂಡಿಸಿದ್ದೇಗೌಡರ ಗೆಲುವಿಗೆ ಅಂಬಿ ಸಹಕರಿಸಿದರೆ ಮಂಡ್ಯದಲ್ಲಿ ಅಂಬಿ ಗೆಲುವಿಗೆ ಜೆಡಿಎಸ್ ಸಹಕಾರ ನೀಡುತ್ತದೆನ್ನುವ 'ಮ್ಯಾಚ್‌ಫಿಕ್ಸಿಂಗ್' ಅಂಬಿ ಹಾಗೂ ಕುಮಾರಸ್ವಾಮಿ ನಡುವೆ ಕುದುರಿದೆ ಎಂಬ ಗುಸುಗುಸು ಕೇಳಿಬರುತ್ತಿದೆ.

ದಳದ ಅಭ್ಯರ್ಥಿಗಳು ನೀಡಿದ ಹೊಡೆತಕ್ಕೆ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳೆರಡಲ್ಲೂ ಮಕಾಡೆ ಮಲಗಿದ ಅಂಬಿಯೇ ದಳಕ್ಕೆ ಶರಣಾದರೋ, ಇಲ್ಲಾ ಜೆಡಿಎಸ್ ನಾಯಕರೇ ಅಂಬಿಗೆ ಶರಣಾದರೋ ಗೊತ್ತಿಲ್ಲ. ಆದರೆ 'ಮ್ಯಾಚ್‌ಫಿಕ್ಸಿಂಗ್' ಅಂತೂ ನಡೆದಿದೆ. ಅಂಬಿ ಕಂಡರೆ ಕೆಂಡಕಾರುತ್ತಿದ್ದ ಹೆಚ್.ಡಿ.ಕುಮಾರಸ್ವಾಮಿ ಮೊನ್ನೆ "ಅಂಬರೀಷ್ ನನ್ನ ಸ್ನೇಹಿತ" ಎಂದು ಜೆಡಿಎಸ್ ಸಮಾವೇಶದಲ್ಲಿ ಹೇಳಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಅಂಬಿಗೆ ಖೇಣಿ ದುಡ್ಡು

ಸತತ ಸೋಲಿನಿಂದ ಕಂಗೆಟ್ಟಿರುವ ಅಂಬಿ ಈ ಬಾರಿ ಮಂಡ್ಯದಲ್ಲಿ ಹಣದ ಹೊಳೆಯನ್ನೇ ಹರಿಸಲು ಸಜ್ಜಾಗಿದ್ದಾರೆ. ಬೆಂಗಳೂರು-ಮೈಸೂರು ಹೆದ್ದಾರಿಯ ನೆಪದಲ್ಲಿ ಬಡ ರೈತರ ಜಮೀನು ನುಂಗಿದ ನೈಸ್ ಖದೀಮ ಅಶೋಕ್ ಖೇಣಿ ಅಂಬಿಗೆ ಬಂಡವಾಳ ಹೂಡಲು ತಯಾರಾಗಿದ್ದಾನೆ. ಅಂಬಿ ಗೆದ್ದು ಮಂತ್ರಿಯಾದರೆ ಬಿಎಂಐಸಿ ಯೋಜನೆಗೆ ಅನುಕೂಲ ಎನ್ನುವ ಲೆಕ್ಕಾಚಾರ ಖೇಣಿಯದ್ದು. ಈ ಹಣವನ್ನೇ ಹರಿಸಿ ಅಂಬಿ ಚುನಾವಣೆ ಗೆಲ್ಲಲು ಪ್ರಯತ್ನಿಸುತ್ತಿರುವುದು ಲೇಟೆಸ್ಟ್ ಸುದ್ದಿ.

****

ಶ್ರೀರಂಗಪಟ್ಟಣ: ಮ್ಯಾಚ್‌ಫಿಕ್ಸಿಂಗ್ ಮರ್ಮ

ಚುನಾವಣೆಗೂ ಮೊದಲೇ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ 'ಮ್ಯಾಚ್‌ಫಿಕ್ಸಿಂಗ್' ನಡೆಯಲಿದೆ ಎಂಬ ಸುದ್ದಿ ದಟ್ಟವಾಗಿ ಹಬ್ಬಿದೆ. ಈ ಬಾರಿ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಕಣಕ್ಕಿಳಿಯಲು ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯರ ಪುತ್ರ ರವೀಂದ್ರ ಶ್ರೀಕಂಠಯ್ಯ ಪ್ರಯತ್ನ ನಡೆಸಿದ್ದರು. ಅಂಬಿಗೆ ಮಂಡ್ಯ ಟಿಕೆಟ್ ನೀಡಿರುವುದರಿಂದ ತನಗೆ ಕಾಂಗ್ರೆಸ್ ಟಿಕೆಟ್ ಖಚಿತ ಎಂದುಕೊಂಡು ಈಗಾಗಲೇ ಕ್ಷೇತ್ರದಲ್ಲಿ ರವೀಂದ್ರ ಪ್ರಚಾರಕ್ಕೆ ಚಾಲನೆ ನೀಡಿದ್ದರು.

ಆದರೆ ರವೀಂದ್ರರಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಲು ದೊಡ್ಡದೊಂದು ಹುನ್ನಾರವೇ ನಡೆದಿದೆ. ಕಳೆದ ಬಾರಿ ತನ್ನ ಸೋಲಿಗೆ ಕಾರಣನಾದ ರವೀಂದ್ರನಿಗೆ ಯಾವ ಕಾರಣಕ್ಕೂ ಟಿಕೆಟ್ ಸಿಗಬಾರದೆಂದು ಯತ್ನಿಸಿರುವ ಅಂಬಿ ತನ್ನ ಶಿಷ್ಯ ಸಚ್ಚಿದಾನಂದನ ಮಾವ ಜಿ.ಪಂನ ಮಾಜಿ ಸದಸ್ಯ ಶೆಟ್ಟಹಳ್ಳಿ ಲಿಂಗರಾಜುಗೆ ಟಿಕೆಟ್ ಕೊಡಿಸಲು ನಿರ್ಧರಿಸಿದ್ದಾರೆ.

ಅಶೋಕ್ ಖೇಣಿ ಅಭಿಮಾನಿ ಸಂಘದ ಅಧ್ಯಕ್ಷ ಸಚ್ಚಿದಾನಂದ ಖೇಣಿಯ ದುಡ್ಡಿನಿಂದಲೇ ದುಂಡಗಾದವನು. ಅಂತಹವನಿಗೆ ಹೆಣ್ಣುಕೊಟ್ಟವನು ಈ ಶೆಟ್ಟಹಳ್ಳಿ ಲಿಂಗರಾಜು. ಈಗ ರವೀಂದ್ರರನ್ನು ಸೈಡಿಗೆ ತಳ್ಳಿ ಟಿಕೆಟ್ ಪಡೆಯಲು ಮುಂಚೂಣಿಯಲ್ಲಿದ್ದಾನೆ. ಶ್ರೀರಂಗಪಟ್ಟಣದಲ್ಲಿ ಈ ಬಾರಿ ರವೀಂದ್ರ ಗೆಲ್ಲುವ ಅವಕಾಶ ಹೆಚ್ಚಿದೆ. ಜಾತ್ಯತೀತ ದಳದ ರಮೇಶ್‌ಬಾಬು ಮುಂದೆ ಫೈಟು ನೀಡಲು ರವೀಂದ್ರ ಶ್ರೀಕಂಠಯ್ಯನೇ ಸಮರ್ಥ ಅಭ್ಯರ್ಥಿ.

ಕಳೆದ ಬಾರಿ ಅಂಬರೀಶ್‌ಗೆ ಟಿಕೆಟ್ ಎಂಬ ವಾಸನೆ ಹಿಡಿದ ಜೆಡಿಎಸ್‌ನ ಬಾಬು, ರವೀಂದ್ರನ ಬೆಂಬಲಿಗರನ್ನು ಮೊದಲೇ ಖರೀದಿಸಿದ್ದಲ್ಲದೆ ಸ್ತ್ರೀಶಕ್ತಿ, ಸ್ವಸಹಾಯ ಸಂಘದ ಸದಸ್ಯರನ್ನು ಬುಕ್ ಮಾಡಿ ಅವರಿಗೆ ತಲುಪಬೇಕಾದ್ದನ್ನು ತಲುಪಿಸಿ ಅಂಬಿ ಎದುರು ಗೆದ್ದಿದ್ದ. ಗೆದ್ದ ನಂತರ ಬಾಬು ಅಭಿವೃದ್ಧಿಗಿಂತ ಹೆಚ್ಚು ಒತ್ತು ಕೊಟ್ಟದ್ದು ಕಮೀಷನ್‌ಗೆ.

ರವೀಂದ್ರ ಶ್ರೀಕಂಠಯ್ಯ ಎದುರಾಳಿಯಾದರೆ ಗೆಲುವು ಕಷ್ಟ ಎಂಬುದನ್ನು ಅರಿತಿರುವ ರಮೇಶ್‌ಬಾಬು ಲಿಂಗರಾಜುನಂತಹ ಡಮ್ಮಿ ಕ್ಯಾಂಡಿಡೇಟ್‌ಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಲಿ ಎಂದು ಕಸರತ್ತು ನಡೆಸಿದ್ದಾನೆಂಬ ಮಾತು ಕ್ಷೇತ್ರದಲ್ಲಿ ಹರಿದಾಡುತ್ತಿದೆ. ಅಂಬಿಯ ಪ್ರಭಾವ, ಕೋಟಿಕೋಟಿಯ ಆಫರ್‌ಗಳು ಈ ಕೆಲಸಕ್ಕೆ ಬಳಕೆಯಾಗುತ್ತಿವೆ ಎಂಬ ಮತ್ತೊಂದು ಮಾತೂ ಇದೆ. ಒಂದು ವೇಳೆ ಹೈಕಮಾಂಡ್ ಲಿಂಗರಾಜುಗೆ ಟಿಕೆಟ್ ನೀಡಿದರೆ ಈ ಬಾರಿಯೂ ರಮೇಶ್‌ಬಾಬು ಗೆಲ್ಲುವ ಸಾಧ್ಯತೆಗಳೇ ಹೆಚ್ಚು. ಈ ಉಪಕಾರಕ್ಕೆ ಪ್ರತಿಯಾಗಿ ಮಂಡ್ಯದಲ್ಲಿ ಅಂಬಿ ಗೆಲುವಿಗೆ ಜೆಡಿಎಸ್ ಪರೋಕ್ಷವಾಗಿ ಸಾಥ್ ನೀಡಲು ಮಾತುಕತೆಗಳು ನಡೆದಿವೆ ಎನ್ನಲಾಗುತ್ತಿದೆ.

ಒಟ್ಟಾರೆ ಶ್ರೀರಂಗಪಟ್ಟಣದಲ್ಲಿ ಕಾಂಗ್ರೆಸ್‌ನಿಂದ ಮ್ಯಾಚ್‌ಫಿಕ್ಸಿಂಗ್ ಅಭ್ಯರ್ಥಿಯಾಗಿ ಲಿಂಗರಾಜು ಕಣಕ್ಕಿಳಿಯಲು ಯತ್ನಿಸಿದ್ದು, ಲಿಂಗರಾಜುಗೆ ಟಿಕೆಟ್ ಸಿಕ್ಕರೆ ಇಲ್ಲಿ ಚುನಾವಣೆಗೂ ಮೊದಲೇ ಜಾ.ದಳದ ಬಾಬು ಗೆದ್ದಿರುತ್ತಾರಷ್ಟೇ.

ಹು-ಧಾ ಪೂರ್ವ ಮೀಸಲು ಕ್ಷೇತ್ರ: ಅಬ್ಬಯ್ಯ ಇಲ್ಲಿ ಗೆಲ್ಲುವ ಕುದುರೆ

...008ರ ಕ್ಷೇತ್ರ ಮರುವಿಂಗಡಣೆಯಲ್ಲಿ ಹುಬ್ಬಳ್ಳಿ ...ಕ್ಷೇತ್ರ ಕಣ್ಮರೆಯಾಗಿ ಹುಬ್ಬಳ್ಳಿ-ಧಾರವಾಡ ಪೂರ್ವ ... ಹೊಸ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ಕ್ಷೇತ್ರವಿದು. ...ಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 16 ...ಗಳನ್ನು ಹೊಂದಿರುವ ಈ ಕ್ಷೇತ್ರ ಪರಿಶಿಷ್ಟ ಜಾತಿಗೆ ...ಲಾಗಿದೆ. ಈ ಕ್ಷೇತ್ರದ ಒಂದು ವಿಶೇಷ ಎಂದರೆ ...ವರೆಗೆ ಇಲ್ಲಿ ಯಾರೂ ಸತತವಾಗಿ ಎರಡು ಬಾರಿ ...ಸಿದ ನಿದರ್ಶನಗಳಿಲ್ಲ. ಗೆದ್ದವನು ಮಂತ್ರಿಯಾಗಲೀ, ...ನ್ಯ ಶಾಸಕನಾಗಿಯೇ ತನ್ನ ಅವಧಿ ಪೂರೈಸಲಿ, ...ಲ್ಲಿ ಒಮ್ಮೆ ಗೆದ್ದವರಿಗೆ ಮರು ಚುನಾವಣೆಯಲ್ಲಿ ...ಲಿನ ರುಚಿ ತೋರಿಸಿದ ನಂತರವೇ ಮುಂದಿನ ...ವಣೆಯಲ್ಲಿ ಅವರನ್ನು ಪರಿಗಣಿಸುವುದು ಈ ಕ್ಷೇತ್ರದ ...ದಾರರ ಜಾಯಮಾನ. ಎಂ.ಎಂ.ಹಿಂಡಸಗೇರಿ, ಜಬ್ಬರ್ ... ಹೊನ್ನಳ್ಳಿ ಮಂತ್ರಿಯಾಗಿ ಕಣಕ್ಕಿಳಿದಾಗಲೂ ...ದಾರರು ಅವರನ್ನು ಸೋಲಿಸಿ ಮನೆಗೆ ಕಳಿಸಿದ್ದು ... ಉದಾಹರಣೆ. ಅಷ್ಟರಮಟ್ಟಿಗೆ ಅವರನ್ನು ಜಾಗೃತ ...ದಾರರು ಎಂದು ಕರೆಯಬಹುದೇನೋ.

...ಹಾರಿತ್ರಿಕವಾಗಿ ನೋಡಿದರೆ ರಾಜ್ಯದ ಬಹುತೇಕ ...ಗಳಂತೆ ಈ ಕ್ಷೇತ್ರವೂ ಕೂಡ ಜಾತ್ಯತೀತ ಶಕ್ತಿಗಳಿಗೆ ... ಹಾಕಿದ ಕ್ಷೇತ್ರ. ಆದರೆ, ಯಾವಾಗ ಹುಬ್ಬಳ್ಳಿ ಈದ್ಗಾ ...ನದಲ್ಲಿ ಸಂಘಪರಿವಾರಿಗಳು ಕಿತಾಪತಿ ಶುರು ...ರೋ, ಯಾವಾಗ ಸಾಮರಸ್ಯದಿಂದ ಕೂಡಿಬಾಳುತ್ತಿದ್ದ ...ದೂ-ಮುಸ್ಲಿಂ ಸಮುದಾಯಗಳ ನಡುವೆ ...ಬಿಟ್ಟರೋ, ಅಲ್ಲಿಂದಾಚೆಗೆ ಬಹುಸಂಖ್ಯಾತ ಹಿಂದೂ ...ಗಳು ಬಿಜೆಪಿಯತ್ತ ವಾಲತೊಡಗಿದವು. ಈದ್ಗಾ ಬೆಂಕಿ ... ಉರಿದಷ್ಟೂ ಬಿಜೆಪಿಗೆ ಹೆಚ್ಚು ಮತಗಳು ...ಆರಂಭಿಸಿದವು.

...ದರೆ, ಪರಿಸ್ಥಿತಿಯೀಗ ಬದಲಾಗಿದೆ. ಜನರಲ್ಲಿ ಜಾಗೃತಿ ...ಗಿದೆ. ಭಿನ್ನ ಪಕ್ಷ ಎಂದು ಹೇಳುತ್ತಾ ಅಧಿಕಾರಕ್ಕೆ ...ವರು ಎಷ್ಟೊಂದು ಭ್ರಷ್ಟವಾಗಿ ಅಧಿಕಾರ ಮಾಡಿದರು ...ಬುದು ಜನರಿಗೆ ಗೊತ್ತಿದೆ. ವಾರಕ್ಕೊಮ್ಮೆಯಂತೆ ...ರ್ಥ ಯಾತ್ರೆ ನಡೆಸಿದ್ದು, ಬೀದಿನಾಯಿಗಳಂತೆ ಕಚ್ಚಾಡಿಕೊಂಡಿದ್ದು, ಕಂಡಕಂಡಲ್ಲಿ ತಿಂದು ತೇಗಿ ಮೈಕೈ ಹೊಲಸು ಮಾಡಿಕೊಂಡದ್ದು, ರಾಜ್ಯದ ಚರಿತ್ರೆಯಲ್ಲೇ ಕೇಳಿ ಕಂಡರಿಯದ ಭ್ರಷ್ಟ ಆಡಳಿತವನ್ನು ನೀಡಿದ್ದು ಎಲ್ಲವೂ ಜನಕ್ಕೆ ಗೊತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿಯೇ ಹೋಳಾಗಿದ್ದು ಕೇಸರಿ ಶಕ್ತಿಗಳನ್ನು ದುರ್ಬಲಗೊಳಿಸಿದೆ.

ಚಂದ್ರಶೇಖರ ಗೋಕಾಕ, ಮಾಜಿ ಮೇಯರ್ ವೆಂಕಟೇಶ್, ಮೇಸ್ತ್ರಿ, ಲಕ್ಷ್ಮಣ ಬೀಳಗಿ ಮುಂತಾದವರು ಈ ಕ್ಷೇತ್ರದ ಕೆಜೆಪಿ ಟಿಕೆಟ್ ಪಡೆಯುವ ಏಕೈಕ ಉದ್ದೇಶದಿಂದ ಕೋಮುವಾದದ ಚಡ್ಡಿ ಕಳಚಿಟ್ಟು ಜಾತ್ಯತೀತ ಸೋಗಿನ ಪ್ಯಾಂಟ್ ಹಾಕಿಕೊಂಡು ಬಂದಿದ್ದರು. ಆದರೆ ಯಡ್ಡಿ ಇವರ್ಯಾರಿಗೂ ಟಿಕೆಟ್ ಕೊಡದೆ ಜಬ್ಬರ್ ಖಾನ್ ಹೊನ್ನಳ್ಳಿಯ ಶಿಷ್ಯ ಶಂಕ್ರಣ್ಣ ಬಿಜವಾಡಗೆ ಟಿಕೆಟ್ ಕೊಟ್ಟಿದ್ದಾರೆ. ಟಿಕೆಟ್ ಆಸೆಯಿಂದ ಕೆಜೆಪಿ ಸೇರಿದ ಜನ ಅತ್ತ ಬಿಜೆಪಿಯಲ್ಲೂ ನೆಲೆಯಿಲ್ಲದೆ, ಇತ್ತ ಕೆಜೆಪಿಯಲ್ಲೂ ಟಿಕೆಟ್ ಇಲ್ಲದೆ ತ್ರಿಶಂಕುಸ್ಥಿತಿಯಲ್ಲಿದ್ದಾರೆ. ಇವರು ಕೆಜೆಪಿ ಅಭ್ಯರ್ಥಿ ಬಿಜವಾಡ ಅವರನ್ನು ಗೆಲ್ಲಿಸುವುದಕ್ಕೆ ಕಷ್ಟಪಡುತ್ತಾರೆ ಎನ್ನುವುದಕ್ಕೆ ಯಾವ ಕಾರಣವೂ ಇಲ್ಲ.


ಇನ್ನು ಬಿಜೆಪಿಯ ಕತೆಯೂ ಅಷ್ಟೊಂದು ಚೆನ್ನಾಗಿಲ್ಲ. ಹಿಂದಿನ ಚುನಾವಣೆಗಳಂತೆ ಈಗ ಈದ್ಗಾ, ಬಾಬಾಬುಡನ್ ಗಿರಿಯಂಥ ವಿಷಯಗಳನ್ನು ಮುಂದಿಟ್ಟುಕೊಂಡು ಜನರ ತಲೆ ಸವರಿ ಓಟು ಪಡೆಯಬಹುದೆಂಬ ಭ್ರಮೆಯೂ ಅವರಲ್ಲಿ ಇಲ್ಲವಾದ್ದರಿಂದ ಹಿಂದೂತ್ವ ಅಜೆಂಡಾವನ್ನು ಬದಿಗಿಟ್ಟು ಚುನಾವಣೆಗೆ ಹೊರಟಿದ್ದಾರೆ. ಎರಡನೆಯದಾಗಿ ಪಕ್ಷ ಇಬ್ಭಾಗವಾಗಿರುವುದರಿಂದ ಅದರ ಬಲ ಗಣನೀಯವಾಗಿ ಕುಗ್ಗಿದೆ. ಮೂರನೆಯದಾಗಿ ಅಳಿದುಳಿದ ಬಿಜೆಪಿ ನಾಯಕರಲ್ಲೂ ಒಳಜಗಳ ತೀವ್ರವಾಗಿದೆ. ಉದಾಹರಣೆಗೆ, ಈ ಕ್ಷೇತ್ರದ ಹಾಲಿ ಎಮ್ಮೆಲ್ಲೆ ವೀರಭದ್ರಪ್ಪ ಹಾಲಹರವಿಗೆ ಬಿಜೆಪಿಯ ಟಿಕೆಟ್ ತಪ್ಪಿಸಲು ಪ್ರಹ್ಲಾದ್ ಜೋಶಿ, ಜಗದೀಶ್ ಶೆಟ್ಟರ್ ಕುತಂತ್ರ ನಡೆಸಿದ್ದು ಈಗ ಗುಟ್ಟಾಗಿ ಉಳಿದಿಲ್ಲ. ಈ ಇಬ್ಬರೂ ನಾಯಕರು ಜೆಡಿಎಸ್‌ನಲ್ಲಿದ್ದ ಶಿವು ಹಿರೇಕೇರೂರ ಎಂಬ ತಮ್ಮ ಶಿಷ್ಯನನ್ನು ಬಿಜೆಪಿಗೆ ಕರೆತಂದು ಈ ಕ್ಷೇತ್ರದ ಟಿಕೆಟ್ ನೀಡುವುದಕ್ಕೆ ಒಳಗೊಳಗೆ ಕುತಂತ್ರ ನಡೆಸಿದ್ದರು. ಕೊನೆಗೆ ಹಾಲಹರವಿ ತನ್ನ ಸಂಬಂಧಿ ಹಾಗೂ ಮಂತ್ರಿ ಕಾರಜೋಳ ಮತ್ತು ರಮೇಶ್ ಜಿಗಜಿಣಗಿಗೆ ದೂರು ನೀಡಿ ಅಂತೂ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಒಳಗೊಳಗೆ ಈ ಪರಿಯಾಗಿ ಕಿತ್ತಾಡಿಕೊಳ್ಳುತ್ತಿರುವ ಈ ನಾಯಕರು-ಕಾರ್ಯಕರ್ತರು ಹಾಲಹರವಿ ಗೆಲುವಿಗೆ ಒಗ್ಗಟ್ಟಿನಿಂದ ಶ್ರಮಿಸುತ್ತಾರೆಯೆ? ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಈ ಜಿಲ್ಲೆಯವರಾದರೂ ತಮ್ಮ ಪಕ್ಷದ ಕೈಯಲ್ಲಿದ್ದ ಹುಬ್ಬಳ್ಳಿ-ಮಹಾನಗರ ಪಾಲಿಕೆಯನ್ನು ಮೊನ್ನೆಯ ಚುನಾವಣೆಯಲ್ಲಿ ಉಳಿಸಿಕೊಳ್ಳಲಾಗಲಿಲ್ಲ ಎಂಬುದು ಜನರು ಬಿಜೆಪಿಯನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತಿರುವ ಸೂಚನೆಯಾಗಿದೆ. ಈ ವಿಧಾನಸಭಾ ಚುನಾವಣೆಯ ಒಳಗಾಗಿ ಈ ಬಿಜೆಪಿ ವಿರೋಧಿ ಟ್ರೆಂಡ್ ದಿಢೀರನೆ ಬದಲಾಗಿಬಿಡುತ್ತದೆ, ಬಿಜೆಪಿಗೆ ಜನ ಓಟು ಹಾಕಿಬಿಡುತ್ತಾರೆ ಎಂದು ನಂಬುವುದಕ್ಕೆ ವಿಶೇಷ ಕಾರಣಗಳೇನೂ ಇಲ್ಲ.

ಜೆಡಿಎಸ್‌ಗೆ ಈ ಭಾಗದಲ್ಲಿ ನೆಲೆಯಿಲ್ಲ. ಅದು ಯಾವಾಗಲೂ ಆಟಕ್ಕಿರುತ್ತದೆ; ಲೆಕ್ಕಕ್ಕಿರುವುದಿಲ್ಲ. ಈ ಬಾರಿ ಪರಿಸ್ಥಿತಿ ದಿಢೀರನೆ ಬದಲಾಗುತ್ತದೆ ಎಂದು ಹೇಳುವುದಕ್ಕೆ ವಿಶೇಷ ಕಾರಣಗಳೂ ಕಾಣುತ್ತಿಲ್ಲ. ಬಸವರಾಜ ಹೊರಟ್ಟಿಯ ತೀವ್ರ ವಿರೋಧದ ನಡುವೆಯೂ ಕುಮಾರಸ್ವಾಮಿಯ ಶಿಷ್ಯ ಅಲ್ಕೋಡ ಹನುಮಂತಪ್ಪ ಜೆಡಿಎಸ್ ಟಿಕೆಟ್ ಗಿಟ್ಟಿಸಿದ್ದಾರೆ. ಕಳೆದ ಒಂದು ವರ್ಷದಿಂದಲೂ ಹುಬ್ಬಳ್ಳಿಯ ಐಬಿಯಲ್ಲೇ ತಳವೂರಿದ್ದರೂ ಸ್ಥಳೀಯ ಜೆಡಿಎಸ್ ಕಾರ್ಯಕರ್ತರ ಬೆಂಬಲ ಗಳಿಸಲು ಈ ಗಿರಾಕಿಗೆ ಸಾಧ್ಯವಾಗಿಲ್ಲ ಎಂದರೆ ಠೇವಣಿಯಾದರೂ ವಾಪಸು ಬರುತ್ತೆ ಅಂತ ಯಾವ ಗ್ಯಾರಂಟಿಯಿಂದ ಹೇಳೋದು?

ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಇದ್ದುದರಲ್ಲಿ ಕಾಂಗ್ರೆಸ್ಸೇ ಈ ಕ್ಷೇತ್ರದಲ್ಲಿ ತೂರಿ ಬರುವ ಸಾಧ್ಯತೆ ಕಾಣುತ್ತಿದೆ. ಮೊದಲನೆಯದಾಗಿ, ಇಡೀ ರಾಜ್ಯಾದ್ಯಂತ ಬೀಸುತ್ತಿರುವ ಕಾಂಗ್ರೆಸ್ ಪರ ಗಾಳಿ ಈ ಕ್ಷೇತ್ರವನ್ನೂ ಬಿಟ್ಟಿಲ್ಲ. ಬಿಜೆಪಿ-ಕೆಜೆಪಿ ಜಗಳ ರಾಜ್ಯದ ಎಲ್ಲ ಕ್ಷೇತ್ರಗಳಂತೆ ಇಲ್ಲಿಯೂ ಎರಡೂ ಪಕ್ಷಗಳನ್ನು ದುರ್ಬಲಗೊಳಿಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕಾಂಗ್ರೆಸ್ ವಿಶೇಷವಾಗಿ ಏನೂ ಮಾಡದಿದ್ದರೂ ವಿರೋಧಿಗಳ ನಡುವಿನ ಈ ಒಳಜಗಳವೇ ಅದಕ್ಕೆ ಅನುಕೂಲಕರ ಭೂಮಿಕೆಯನ್ನು ಸಿದ್ಧಪಡಿಸಿದೆ. ಮೇಲಾಗಿ, ಈ ಕ್ಷೇತ್ರದಿಂದ ಪ್ರಸಾದ್ ಅಬ್ಬಯ್ಯ ಅವರನ್ನು ಕಣಕ್ಕಿಳಿಸುತ್ತಿರುವುದು ಇನ್ನೊಂದು ಪ್ಲಸ್ ಪಾಯಿಂಟ್. ಕಾಂಗ್ರೆಸ್ ಟಿಕೆಟ್ ಪಡೆಯುವುದಕ್ಕೆ ಜಕ್ಕಪ್ಪನವರ್ ಕೂಡ ಹೆಣಗಾಡಿದ್ದರು. ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವ ಸಾಮಾನ್ಯ ಕಾರ್ಯಕರ್ತರನ್ನೇ ದೂರಮಾಡಿಕೊಂಡಿದ್ದ ಜಕ್ಕಪ್ಪನವರಿಗೆ ಒಂದು ವೇಳೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದರೆ ನಿಸ್ಸಂದೇಹವಾಗಿ ಅದು ಎಡವಿ ಬೀಳುತ್ತಿತ್ತು. ಸದ್ಯಕ್ಕೆ ಅದಾಗಿಲ್ಲ. ಎಲ್ಲೆಡೆ ಸಲ್ಲುವ, ಅತ್ಯಂತ ಕಡಿಮೆ ಶತ್ರುಗಳನ್ನು ಹೊಂದಿರುವ ಪ್ರಸಾದ ಅಬ್ಬಯ್ಯನವರಿಗೆ ಟಿಕೆಟ್ ಸಿಕ್ಕಿದ್ದು ಕಾರ್ಯಕರ್ತರಲ್ಲೂ ಸಂತಸ ಮೂಡಿಸಿದೆ. ಈ ಸಜ್ಜನ ರಾಜಕಾರಣಿಗೆ ಲಾಡ್, ಡಾ.ಜಿ.ಪರಮೇಶ್ವರ್, ಶ್ರೀನಿವಾಸ್ ಮಾನೆಯಂತಹ ನಾಯಕರ ಬೆಂಬಲವೂ ಇದೆ. ಮೇಲ್ನೋಟಕ್ಕೆ ಇದು ಗೆಲ್ಲುವ ಕುದುರೆಯಂತೆಯೇ ಕಾಣುತ್ತಿದೆ.

• ಹುಬ್ಬಳ್ಳಿಯಾಂವ

ಪರಮೇಶ್ವರ್: ಬಾಯಲ್ಲಿ ಬೆಣ್ಣೆ, ಬಗಲಲ್ಲಿ ದೊಣ್ಣೆ



ರಾಜ್ಯದಲ್ಲಿ ಮತ್ತೆ ಅಧಿಕಾರದ ಗದ್ದುಗೆಯನ್ನು ಹಿಡಿಯುವ ಹೊಸ್ತಿಲಿನಲ್ಲಿ ನಿಂತಿರುವ ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಹಂಚಿಕೆ ಕುರಿತಂತೆ ತೀವ್ರತರವಾದ ಭಿನ್ನಮತೀಯ ಚಟುವಟಿಕೆಗಳು ಸ್ಫೋಟಗೊಂಡಿವೆ. ಅದಕ್ಕೆ ಮೂಲಕಾರಣ ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್!

ಈಗ ಎಲ್ಲರಿಗೂ ಗೊತ್ತಿರುವಂತೆ ಪ್ರತಿದಿನ ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಕಚೇರಿಯ ಮುಂದೆ ಟಿಕೆಟ್ ವಂಚಿತರು ಭಾರಿ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಅಂತಹ ಒಂದು ಪ್ರತಿಭಟನೆಯಲ್ಲಿ ವೇಲು ಎಂಬ ಬಡಪಾಯಿ ಬಾಡಿಗೆ ಪ್ರತಿಭಟನಾಕಾರನಾಗಿ ಬಂದು ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದೂ ಆಗಿದೆ. ದೆಹಲಿಯಲ್ಲೂ ಕಾಂಗ್ರೆಸ್ ಕಚೇರಿ ಮತ್ತು ಕಾಂಗ್ರೆಸ್ ಪಕ್ಷ ಅಧಿನಾಯಕ ಸೋನಿಯಾ ಗಾಂಧಿ ಅವರ ಮನೆ ಮುಂದೆಯೂ ಹಲವಾರು ಪ್ರತಿಭಟನೆಗಳು ಆಗಿವೆ. ಸದ್ಯ ವಿದೇಶದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋನಿಯಾ ಗಾಂಧಿ ತವರಿಗೆ ಮರಳಿದ ನಂತರ ಈಗಾಗಿರುವ ಅನ್ಯಾಯ ಮತ್ತು ಅಸಮತೋಲನವನ್ನು ಸರಿದೂಗಿಸುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದಾರೆ ಭಿನ್ನಮತೀಯರು.


ಮೊನ್ನೆ ಮೊದಲ ಸುತ್ತಿನ ಕಾಂಗ್ರೆಸ್ ಟಿಕೆಟ್ ಘೋಷಣೆಯಾದ ನಂತರ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ಅವರ ಕೈ ಮೇಲಾಗಿರುವುದು ಎಲ್ಲರಿಗೂ ಸ್ಪಷ್ಟವಾಗಿದೆ. ಯಾಕೆಂದರೆ ಪರಮೇಶ್ವರ್ ಅತ್ಯಂತ ಜಾಣತನದಿಂದ ಕಾಂಗ್ರೆಸ್‌ನಲ್ಲಿರುವ ಮುಖ್ಯಮಂತ್ರಿ ದುರಾಲೋಚನೆಯಿಂದ ಚಳ್ಳೇಹಣ್ಣು ತಿನಿಸಿದ್ದಾರೆ. ಪಟ್ಟಿ ಬಿಡುಗಡೆಯಾಗುವ ತನಕ ಪರಮೇಶ್ವರ್ ಇಷ್ಟೊಂದು ಪವರ್‌ಫುಲ್ ಎಂದಾಗಲಿ, ಚಾಣಾಕ್ಷ ಎಂದಾಗಲಿ, ಕಾಂಗ್ರೆಸ್ ಹೈಕಮಾಂಡ್ ಜೊತೆ ಅವರಿಗೆ ಇಷ್ಟೊಂದು ಒಳ್ಳೆಯ ಸಂಬಂಧವಿದೆ ಎಂದಾಗಲಿ ಕಾಂಗ್ರೆಸ್‌ನಲ್ಲಿರುವ ಒಂದೇ ಒಂದು ನರಪಿಳ್ಳೆಗೂ ಗೊತ್ತಿರಲಿಲ್ಲ.


ಟಿಕೆಟ್ ಹಂಚಿಕೆಯಲ್ಲಿ ತನ್ನ ವಿರೋಧಿಗಳಿಗೆ ಮತ್ತು ಅವರ ಬೆಂಬಲಿಗರಿಗೆ ಸೈಲೆಂಟಾಗಿ ಚಳ್ಳೆಹಣ್ಣು ತಿನ್ನಿಸಿರುವ ಪರಮೇಶ್ವರ್ ಮೇಲುಗೈ ಸಾಧಿಸಿದ್ದಾರಲ್ಲದೆ ನಾಳೆ ಕಾಂಗ್ರೆಸ್ ಪಕ್ಷ ಅಧಿಕ ಸ್ಥಾನಗಳನ್ನು ಗೆದ್ದ ನಂತರ ತಾನೇ ಮುಖ್ಯಮಂತ್ರಿ ಆಗುವ ಹಾದಿಯನ್ನು ಸುಗಮಗೊಳಿಸಿಕೊಂಡಿದ್ದಾರೆ ಎಂಬ ಆರೋಪವೂ ಈಗ ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ.


ಕೆಪಿಸಿಸಿ ಅಧ್ಯಕ್ಷರಾಗಿ ಪರಮೇಶ್ವರ್ ಮಾಡಿರುವುದು ಏನನ್ನು ಅಂದರೆ ನಾಳೆ ಮುಖ್ಯಮಂತ್ರಿ ಸ್ಥಾನಕ್ಕೆ ಯಾರು ತನಗೆ ಪ್ರತಿಸ್ಪರ್ಧಿ ಆಗಬಹುದೋ ಅವರೆಲ್ಲರ ರೆಕ್ಕೆ ಪುಕ್ಕಗಳನ್ನೆಲ್ಲಾ ಈಗಲೇ ಕತ್ತರಿಸಿಹಾಕಿದ್ದಾರೆ. ಉದಾಹರಣೆಗೆ, ಭಾವಿ ಮುಖ್ಯ ಮಂತ್ರಿ ಆಕಾಂಕ್ಷಿ ಆಗಿರುವ ಮತ್ತು ಹಾಲಿ ಕೇಂದ್ರ ಸಚಿವರೂ ಆಗಿರುವ ಮಲ್ಲಿಕಾರ್ಜುನ್ ಖರ್ಗೆ ಅವರ ಪುತ್ರ ಪ್ರಿಯಾಂಕ ಅವರಿಗೆ ಮೊದಲ ಕಂತಿನಲ್ಲಿ ಟಿಕೆಟ್ ನೀಡದೆ ಎಲ್ಲರಿಗೂ ಅಚ್ಚರಿಪಡಿಸಿದ್ದಾರೆ. ಅದೇ ರೀತಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಮತ್ತೊಬ್ಬ ಪ್ರಭಾವಿ ರಾಜಕಾರಣಿ ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ಅವರ ಪುತ್ರ ಅಜಯ್ ಅವರಿಗೂ ಟಿಕೆಟ್ ನೀಡಿಲ್ಲ. ಈ ಇಬ್ಬರು ಪುತ್ರರಲ್ಲದೆ ಆ ಪ್ರದೇಶದಲ್ಲಿನ ಈ ಇಬ್ಬರು ಪ್ರಭಾವಿ ನಾಯಕರ ಇತರೆ ಶಿಷ್ಯಂದಿರೂ ಟಿಕೆಟ್ ವಂಚಿತರಾಗಿದ್ದಾರೆ.

ಹಾಗೆಯೇ ಲಿಂಗಾಯತ ಸಮುದಾಯದ ಅನೇಕ ಪ್ರಭಾವಿ ನಾಯಕರುಗಳಿಗೆ ಪರಮೇಶ್ವರ್ ತನ್ನ 'ತಂತ್ರ-ಕುತಂತ್ರ'ಗಳ ರುಚಿಯನ್ನು ತೋರಿಸಿದ್ದಾರೆ. ಉದಾಹರಣೆಗೆ ಕಾಂಗ್ರೆಸ್ ಪಕ್ಷದ ಖಜಾಂಚಿಯಾಗಿ ಅನೇಕ ದಶಕಗಳ ಕಾಲ ದುಡಿದಿರುವ, ನೆಹರು ಮನೆತನಕ್ಕೆ ತನ್ನ ನಿಷ್ಠೆಯನ್ನು ಸದಾ ಪ್ರದರ್ಶಿಸುತ್ತಾ ಬಂದಿರುವ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪನವರೇ ಈಗ ಟಿಕೆಟ್ ಪಡೆಯಲು ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಬೇಕಾದ ಪರಿಸ್ಥಿತಿಯನ್ನು ಪರಮೇಶ್ವರ್ ಸೃಷ್ಟಿಸಿದ್ದಾರೆ. ಅಷ್ಟೇ ಅಲ್ಲ, ಶಾಮನೂರು, ಅವರ ಪುತ್ರ ಮಲ್ಲಿಕಾರ್ಜುನ ಮತ್ತು ಅವರ ಬೆಂಬಲಿಗರಿಗೆ ಟಿಕೆಟ್ ಕೊಟ್ಟರೆ ಆ ಪ್ರದೇಶದಲ್ಲಿ ಲಿಂಗಾಯತರು ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ, ಆ ಸಮುದಾಯದ ಶಾಸಕರ ಸಂಖ್ಯೆ ಹೆಚ್ಚಾದರೆ ನಾಳೆ ತನ್ನ ರಾಜಕೀಯ ಆಕಾಂಕ್ಷೆಗೆ ಎಲ್ಲಿ ಧಕ್ಕೆ ಆಗುತ್ತದೋ ಎಂಬ ಲೆಕ್ಕಾಚಾರದಲ್ಲೇ ಪರಮೇಶ್ವರ್ ಹೀಗೆ ಮಾಡಿದ್ದಾರೆ ಎಂದು ಶಾಮನೂರರ ಅಭಿಮಾನಿಗಳು ಇವತ್ತು ಕಿಡಿಕಾರುತ್ತಿದ್ದಾರೆ.

ದಾವಣಗೆರೆ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ







ಪ್ರಭಾವಿಗಳಾಗಿರುವ ಶಾಮನೂರರ ಕುಟುಂಬಕ್ಕೆ ಮಾತ್ರ ಪರಮೇಶ್ವರ್ ಇಂತಹ ಅನ್ಯಾಯವನ್ನು ಮಾಡಿಲ್ಲ. ಅದರ ಜೊತೆಗೆ ಬಳ್ಳಾರಿಯಲ್ಲಿ ಲೆಕ್ಕಕ್ಕಿಲ್ಲದ ಅಲ್ಲಂ ವೀರಭದ್ರಪ್ಪ ಮತ್ತು ಬೆಂಗಳೂರಿನಲ್ಲಿ ಆಟಕ್ಕಿಲ್ಲದ ರಾಣಿ ಸತೀಶ್ ತರಹದ ಇತರೆ ಲಿಂಗಾಯತ ಆಕಾಂಕ್ಷಿಗಳಿಗೂ ಪರಮೇಶ್ವರ್ ಟಿಕೆಟ್ ತಪ್ಪಿಸಿದ್ದಾರೆ. ಈಗ ಇವರೆಲ್ಲರೂ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಮುಂದೆ ತಮಗಾಗಿರುವ ಅನ್ಯಾಯವನ್ನು ವಿವರಿಸಿ ಕಣ್ಣೀರಿಡುವಂತೆ ಮಾಡಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ, ಇವತ್ತು ಕರ್ನಾಟಕ ಕಾಂಗ್ರೆಸ್‌ನಲ್ಲಿ ಮಾಸ್ ಮತ್ತು ಕ್ಲಾಸ್ ಲೀಡರ್ ಆಗಿರುವ, ಕೈಬಾಯಿ ಸ್ವಚ್ಛವಾಗಿಟ್ಟುಕೊಂಡಿರುವ, ಎಲ್ಲಾ ಸಮೀಕ್ಷೆಗಳಲ್ಲೂ ಭಾವಿ ಮುಖ್ಯಮಂತ್ರಿ ಎಂದೇ ಹೊಮ್ಮಿರುವ ಸಿದ್ದರಾಮಯ್ಯನವರಿಗೂ ಪರಮೇಶ್ವರ್ ದ್ರೋಹ ಬಗೆದಿದ್ದಾರೆ. ಮೊದಲನೆಯದಾಗಿ ಸಿದ್ದರಾಮಯ್ಯನವರೊಂದಿಗೆ ಕಳೆದ ಹಲವಾರು ವರ್ಷಗಳಿಂದ ಇರುವ ಸಿ.ಎಂ.ಇಬ್ರಾಹಿಂ ಅವರಿಗೆ ಪರಮೇಶ್ವರ್ ಟಿಕೆಟ್ ನಿರಾಕರಿಸಿದ್ದಾರೆ. ಅಲ್ಪಸಂಖ್ಯಾತರ ನಾಯಕ, ಮಾತಿನ ಮಲ್ಲ ಎಂದೆನಿಸಿಕೊಂಡಿರುವ ಇಬ್ರಾಹಿಂ ಅವರು ಟಿಕೆಟ್ ವಂಚಿತರಾಗಿರುವುದು ಕಾಂಗ್ರೆಸ್ ನಾಯಕರಲ್ಲೇ ಆಶ್ಚರ್ಯ ಮೂಡಿಸಿದೆ.


ಅಷ್ಟೇ ಅಲ್ಲ, ಕಲಘಟಗಿಯ ಶಾಸಕ ಸಂತೋಷ್ ಲಾಡ್ ಅವರ ವಿರುದ್ಧ ರಾಜ್ಯ ಸಭೆಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನದ ಆರೋಪವನ್ನು ಸುಖಾಸುಮ್ಮನೆ ಹೊರಿಸಿ ಮೊದಲನೆ ಪಟ್ಟಿಯಲ್ಲಿ ಅವರ ಹೆಸರಿಲ್ಲದಂತೆ ನೋಡಿಕೊಂಡಿದ್ದಾರೆ. ಕಳೆದ ಐದು ವರ್ಷಗಳಿಂದ ತನುಮನಧನವನ್ನು ಕಾಂಗ್ರೆಸ್ ಪಕ್ಷಕ್ಕಾಗಿ ವ್ಯಯಿಸಿರುವ ಸಂತೋಷ್ ಲಾಡ್ ಅದ್ಯಾವ ಪುರುಷಾರ್ಥಕ್ಕೆ ಪಕ್ಷದ ಘತ್ತಾದ ವಿರುದ್ಧ ಮತ ಚಲಾಯಿಸುತ್ತಾರೆ ಎಂಬ ಪ್ರಶ್ನೆಗೆ ಪರಮೇಶ್ವರರಲ್ಲೇ ಉತ್ತರ ಇರಲಾರದು. ಆದರೂ ಅವರು ಸಂತೋಷ್ ಲಾಡ್ ಹೆಸರು ಮೊದಲನೆ ಸುತ್ತಿನ ಪಟ್ಟಿಯಲ್ಲಿ ಇರದಂತೆ ನೋಡಿಕೊಂಡಿದ್ದಾರೆ. ಅದಕ್ಕೆ ಕಾರಣ ಎರಡು: ಮೊದಲನೆಯದಾಗಿ ಸಂತೋಷ್ ಲಾಡ್ ಅವರು ಸಿದ್ದರಾಮಯ್ಯನವರ ಬೆಂಬಲಿಗರು. ಎರಡನೆಯದಾಗಿ ಲಾಡ್ ಕಲಘಟಗಿಯಿಂದ ಗೆದ್ದು ಬರುವುದು ನಿಶ್ಚಿತವಾಗಿರುವುದು. ಆದ್ದರಿಂದ ಲಾಡ್‌ಗೆ ಟಿಕೆಟ್ ಸಿಗದಂತೆ ನೋಡಿಕೊಂಡರೆ ಸಿದ್ದರಾಮಯ್ಯನವರನ್ನು ನಿಗ್ರಹಿಸಬಹುದು ಎಂಬ ದುರಾಲೋಚನೆ ಪರಮೇಶ್ವರ್ ಸಾಹೇಬರದ್ದು.

ಪರಮೇಶ್ವರ್ ಅವರ ತಂತ್ರಗಾರಿಕೆ ಅದೆಷ್ಟು ಪರಿಣಾಮ ಬೀರಿದೆ ಎಂದರೆ ಕಾಂಗ್ರೆಸ್ ಪಕ್ಷದ ಮತ್ತೊರ್ವ ಹಿರಿಯ ನಾಯಕ ಮತ್ತು ಅಲ್ಪಸಂಖ್ಯಾತರ ಕಣ್ಮಣಿ ಮಾಜಿ ಕೇಂದ್ರ ಸಚಿವ ಜಾಫರ್ ಶರೀಫ್ ಅವರ ಮೊಮ್ಮಗನಿಗೂ ಟಿಕೆಟ್ ಸಿಕ್ಕಿಲ್ಲ. ಹಾಗೆಯೇ ಮತ್ತೊರ್ವ ಕೇಂದ್ರ ಸಚಿವ ಮುನಿಯಪ್ಪನವರು ಹೈಕಮಾಂಡ್ ಜೊತೆ ನಿಕಟಸಂಬಂಧ ಹೊಂದಿದ್ದರೂ ಅವರ ಮಗಳಿಗೆ ಟಿಕೆಟ್ ಸಿಕ್ಕಿಲ್ಲ. ಅದೇ ರೀತಿ ಕೇಂದ್ರದಲ್ಲಿ ಸಚಿವರಾದ ಖರ್ಗೆ, ಮೊಯ್ಲಿ ಮೊದಲಾದವರ ಲಾಬಿಗಳಿಗೂ ಪರಮೇಶ್ವರ್ ಬ್ರೇಕ್ ಹಾಕಿದ್ದಾರೆ.

ಹೀಗೆ ತನ್ನ ಪ್ರತಿಸ್ಪರ್ಧಿಗಳ ರೆಕ್ಕೆಪುಕ್ಕಗಳನ್ನು ಕಟ್ ಮಾಡುವುದರಲ್ಲಿ ಯಶಸ್ವಿ ಆಗಿರುವ ಪರಮೇಶ್ವರ್ ತಮ್ಮ ಹಿಂಬಾಲಕರಿಗೆ ಟಿಕೆಟ್ ಕೊಡಿಸುವಲ್ಲಿಯೂ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ, ಕಾಂಗ್ರೆಸ್ ಕಾರ್ಯಕರ್ತರ ಜೊತೆ ಯಾವ ರೀತಿಯ ನೇರ ಸಂಬಂಧವನ್ನೂ ಹೊಂದಿರದ ಪ್ರೊ.ಬಿ.ಕೆ.ಚಂದ್ರಶೇಖರ್ ಅವರಿಗೆ ಬೆಂಗಳೂರಿನ ಬಸವನಗುಡಿ ಟಿಕೆಟ್ ಕೊಡಿಸಿದ್ದಾರೆ. ಬಸವನಗುಡಿ ಬಹುಸಂಖ್ಯಾತ ಬ್ರಾಹ್ಮಣರನ್ನು ಹೊಂದಿರುವ ಕ್ಷೇತ್ರ ಎಂಬ ಸಬೂಬನ್ನು ಪರಮೇಶ್ವರ್ ನೀಡಬಹುದು. ಆದರೆ ಹೆಚ್ಚಾಗಿ ಚಿಡ್ಡಿಗಳಾಗಿರುವ, ಸಾಂಪ್ರದಾಯಿಕವಾಗಿ ಬಿಜೆಪಿಯ ಬೆಂಬಲಿಗರಾಗಿರುವ ಬಸವನಗುಡಿಯ ಜನಿವಾರಿಗಳು ಅದು ಹೇಗೆ ಬಿಜೆಪಿಯ ರವಿಸುಬ್ರಹ್ಮಣ್ಯನನ್ನು ಕೈಬಿಟ್ಟು ಬಿಕೆಸಿ ಎಂಬ ಥಿಂಕ್ ಟ್ಯಾಂಕ್ ಬುದ್ಧಿಜೀವಿಯನ್ನು ಬೆಂಬಲಿಸುತ್ತಾರೆಂದು ಪರಮೇಶ್ವರರ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ 'ಬುದ್ಧಿಜೀವಿ'ಗಳೇ ಹೇಳಬೇಕು.

ಹಾಗೆಯೇ ಬೆಂಗಳೂರಿನ ಜಯನಗರದಲ್ಲಿ ಬಿಜೆಪಿಯ ವಿಜಯಕುಮಾರ್ ಅವರನ್ನು ಎದುರಿಸಲು ಸುದರ್ಶನ್ ಅವರೇ ಸೂಕ್ತ ವ್ಯಕ್ತಿ ಎಂದು ಎಲ್ಲರೂ ಹೇಳುತ್ತಿದ್ದರು. ಇದು ಕಾಂಗ್ರೆಸ್ ಪಕ್ಷ ನಡೆಸಿದ ಆಂತರಿಕ ಸಮೀಕ್ಷೆಯಲ್ಲೂ ವ್ಯಕ್ತವಾಗಿತ್ತು. ಆದರೂ ಜಯನಗರದ ಟಿಕೆಟ್ ಮಧುಸೂದನ ಎಂಬುವವರ ಪಾಲಾಗಿದೆ. ಈ ಮನುಷ್ಯನ ಹೆಸರನ್ನಾಗಲಿ, ಮುಖವನ್ನಾಗಲಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಕೇಳಿಲ್ಲ, ನೋಡಿಲ್ಲ. ಆದರೂ ಅಂತಹ ವ್ಯಕ್ತಿಗೆ ಅದು ಹೇಗೆ ಈ ಪ್ರತಿಷ್ಠಿತ ಕ್ಷೇತ್ರದ ಟಿಕೆಟ್ ಲಭಿಸಿತು ಎಂದು ಕಾರ್ಯಕರ್ತರು ಕೆದಕಿದಾಗ ಗೊತ್ತಾಗಿದ್ದೇನೆಂದರೆ ಈ ಮಧುಸೂದನ ಪರಮೇಶ್ವರರ ಊರಿನವರಾಗಿದ್ದು ಅವರಿಗೆ ಪರಿಚಿತ ಎಂಬುದು. "ಆದರೆ ಇಲ್ಲಿ ಪರಮೇಶ್ವರರು ಮಾತ್ರ ಮತದಾರರಲ್ಲವಲ್ಲಾ" ಎಂದು ಅಲ್ಲಿನ ಜನ ಇವತ್ತು ವ್ಯಂಗ್ಯವಾಡುತ್ತಿದ್ದಾರೆ. ಹಾಗೆಯೇ ಬೆಂಗಳೂರು ದಕ್ಷಿಣದಲ್ಲಿ ಕೂಗುಮಾರಿ ತೇಜಸ್ವಿನಿಗೆ ಟಿಕೆಟ್ ಕೊಡಬಾರದೆಂದು ಆ ಕ್ಷೇತ್ರದ ಕಾರ್ಯಕರ್ತರು ಹೇಳುತ್ತಿದ್ದರೂ ಅವರನ್ನೆಲ್ಲ ಕಡೆಗಣಿಸಿ ತೇಜಸ್ವಿನಿಗೆ ಟಿಕೆಟ್ ಕೊಡಲಾಗಿದೆ.

ಜೊತೆಗೆ ಮೂಲತಃ ಚಿಕ್ಕಮಗಳೂರಿನವರಾದ ಬಿ.ಎಲ್.ಶಂಕರ್ ಅವರಿಗೂ ಪರಮೇಶ್ವರ್ ಬೆಂಗಳೂರಿನ ದಾಸರಹಳ್ಳಿ ಕ್ಷೇತ್ರವನ್ನು ದಯಪಾಲಿಸಿದ್ದಾರೆ. ಶಂಕರ್ ಸಭ್ಯ ಸಜ್ಜನ, ಒಳ್ಳೆಯ ಮನುಷ್ಯ ನಿಜ. ಆದರೆ ಅವರು ಬಹಳ ಶ್ರಮ ಪಟ್ಟರೆ ಮಾತ್ರ ದಾಸರಹಳ್ಳಿ ಮತಕ್ಷೇತ್ರದಿಂದ ಗೆಲ್ಲಲು



ಸಾಧ್ಯ. ಇದು ಗೊತ್ತಿದ್ದೂ ಪರಮೇಶ್ವರ್ ಶಂಕರ್ ಅವರಿಗೆ ಟಿಕೆಟ್ ಕೊಡುತ್ತಾರೆಂದರೆ ಅದಕ್ಕೆ ಕಾರಣ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ಬೆಂಬಲಿಸುವವರ ಸಂಖ್ಯೆ ಹೆಚ್ಚಾಗಲಿ ಎಂದು ಉದ್ದೇಶ ಒಂದೇ. ಇದೆಲ್ಲವನ್ನು ಕಂಡು ಕಾಂಗ್ರೆಸ್ ನಾಯಕರೇ "ಬೆಂಗಳೂರಿನ 28 ಕ್ಷೇತ್ರಗಳಲ್ಲಿ ನಾವು ಅರ್ಧದಲ್ಲಾದರೂ ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೀಗ ಹತ್ತರಲ್ಲಿ ಗೆದ್ದರೆ ನಾವು ಲಕ್ಕಿ" ಎನ್ನುತ್ತಿದ್ದಾರೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದ ಟಿಕೆಟ್ ಆಕಾಂಕ್ಷಿ ಮುನಿರತ್ನಂ ನಾಯ್ಡು ಅವರಿಗೆ ಟಿಕೆಟ್ ನೀಡಬಾರದು ಎಂದು ಪರಮೇಶ್ವರ್ ಹೈಕಮಾಂಡ್‌ಗೆ ಪತ್ರ ಬರೆದದ್ದು ಬಹಿರಂಗವಾದ ನಂತರ ದೆಹಲಿಯಲ್ಲಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಕೆ.ಹರಿಪ್ರಸಾದ್ ಕೂಡ ಈಗ ಪರಮೇಶ್ವರ್ ವಿರೋಧಿ ಬಣ ಸೇರಿದ್ದಾರೆ. ಅದೇ ರೀತಿ ಹಿಂದುಳಿದ ವರ್ಗಗಳ ನಾಯಕ, ಬುದ್ಧಿಜೀವಿ ಹಾಗೂ ಮಾಜಿ ವಿಧಾನ ಪರಿಷತ್ತು ಸದಸ್ಯ ಎಲ್. ಹನುಮಂತಯ್ಯ ಅವರಿಗೂ ಟಿಕೆಟ್ ನಿರಾಕರಿಸಿರುವುದು ಎಲ್ಲ ನಾಯಕರ ಹುಬ್ಬೇರಿಸಿದೆ.




ಸದ್ಯಕ್ಕೆ ಕಾಂಗ್ರೆಸ್ ಪರ ರಾಜ್ಯಾದ್ಯಂತ ಗಾಳಿ ಬೀಸುತ್ತಿರುವುದು ಎಲ್ಲರಿಗೂ ಗೊತ್ತಾಗಿರುವ ವಿಷಯ. ಅದಕ್ಕೆ ಕಾರಣ ಕಾಂಗ್ರೆಸ್ ವಿರೋಧ ಪಕ್ಷವಾಗಿ ದೊಡ್ಡ ಸಾಧನೆ ಮಾಡಿದೆ ಎಂಬುದಲ್ಲ, ಆ ಪಕ್ಷ ಉತ್ತಮ ಮತ್ತು ಭ್ರಷ್ಟಾಚಾರರಹಿತ ಆಡಳಿತ ನೀಡುತ್ತದೆ ಎಂಬ ಭರವಸೆಯೂ ಅಲ್ಲ. ಬದಲಾಗಿ ಜನ ಕಳೆದ ಐದು ವರ್ಷಗಳಲ್ಲಿ ಬಿಜೆಪಿಯ ಕುತಂತ್ರ, ಅವ್ಯವಹಾರ, ಭ್ರಷ್ಟಾಚಾರ, ಕಾಮಕೇಳಿ, ಇತ್ಯಾದಿಗಳಿಂದ ಎಷ್ಟು ಬೇಸತ್ತಿದ್ದಾರೆಂದರೆ ಅವರು ವಿಧಿ ಇಲ್ಲದೆ ಈಗ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಪರಿಸ್ಥಿತಿಯಲ್ಲಿದ್ದಾರೆ. ಇದನ್ನು ಚೆನ್ನಾಗಿ ಅರಿತಿರುವ ಪರಮೇಶ್ವರ್ ಪರಿಸ್ಥಿತಿಯ ಲಾಭವನ್ನು ಪಡೆದು ಕಾಂಗ್ರೆಸ್ ಪರ ಬೀಸುತ್ತಿರುವ ಗಾಳಿಯಲ್ಲಿ ತಮ್ಮ ಹಲವು ತೌಡುಗಳನ್ನೂ ಗೆಲ್ಲಿಸಿಕೊಂಡು ತಾವು ಮುಖ್ಯಮಂತ್ರಿ ಆಗುವ ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳುವ ಕಾರ್ಯತಂತ್ರದಲ್ಲಿ ತೊಡಗಿದ್ದಾರಷ್ಟೇ. ಆ ನಿಟ್ಟಿನಲ್ಲಿ ಅವರೀಗ ತಮ್ಮ ಎದುರಾಳಿಗಳಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ.


ಆದರೆ ಪರಮೇಶ್ವರರ ಕಾರ್ಯತಂತ್ರವನ್ನು ಅರ್ಥಮಾಡಿಕೊಂಡಿರುವ ಇತರೆ ಕಾಂಗ್ರೆಸ್ ನಾಯಕರು ಸುಮ್ಮನೆ ಕೂತಿಲ್ಲ. ಅವರೆಲ್ಲ ತಮ್ಮ ತಮ್ಮ ನಡುವಿನ ಭಿನ್ನಾಭಿಪ್ರಾಯವನ್ನು ಮರೆತು ಪರಮೇಶ್ವರರಿಂದಾಗಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಇತ್ತ ಒಕ್ಕಲಿಗರ ಬೆಂಬಲವನ್ನು, ಅತ್ತ ಲಿಂಗಾಯತರ ಬೆಂಬಲವನ್ನೂ ಕಳೆದುಕೊಳ್ಳುತ್ತಿದೆಯೆಂದೂ, ಪರಮೇಶ್ವರ್ ಅವರು ಹೈಕಮಾಂಡ್‌ನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆಂದೂ, ಅನೇಕ ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ಸಿಗದಂತೆ ನೋಡಿಕೊಂಡಿದ್ದಾರೆಂದೂ, ಹಣಕ್ಕಾಗಿ ಕಾಂಗ್ರೆಸ್ ಟಿಕೆಟ್‌ಗಳನ್ನು ಮಾರಿದ್ದಾರೆಂದೂ ಈಗಾಗಲೇ ದೂರಿದ್ದಾರೆ. ಈಗ ಕೇಳುಬರುತ್ತಿರುವ ಸುದ್ದಿಯ ಪ್ರಕಾರ ಪರಮೇಶ್ವರ್ ವಿರುದ್ಧ ಹೈಕಮಾಂಡ್ ತನಿಖೆ ಮಾಡುವ ಸಾಧ್ಯತೆ ಇದೆಯಂತೆ.

ವಾಸ್ತವವಾಗಿ ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಆಗುವ ಸಾಮರ್ಥ್ಯ ಇದ್ದಿದ್ದರೆ ಅವರು ಇಂತಹ ಯಾವ ಸರ್ಕಸ್‌ಗಳನ್ನಾಡುವ ಅಗತ್ಯವೇ ಇರಲಿಲ್ಲ. ಆದರೆ ಅವರ ದುರಂತ ಎಂತಹದ್ದೆಂದರೆ ಅವರೇ ಮುಂದಿನ ಮುಖ್ಯಮಂತ್ರಿ ಎಂದು ಅಕಸ್ಮಾತ್ ಕಾಂಗ್ರೆಸ್ ಘೋಷಿಸಿದರೆ ಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರದ ಹತ್ತಿರ ಬರುವುದಿರಲಿ, ಬಿಜೆಪಿಗೋ ಅಥವಾ ಜೆಡಿಎಸ್‌ಗೋ ಜಾಕ್‌ಪಾಟ್ ಹೊಡೆದರೂ ಅಚ್ಚರಿ ಇಲ್ಲ. ಯಾಕೆಂದರೆ ಪರಮೇಶ್ವರ್ ಅವರಿಗೆ ಕಾರಿಸ್ಮಾವಾಗಲಿ, ಜಾತಿ ಮತ್ತು ವರ್ಗವನ್ನು ಮೀರಿದ ಜನಬೆಂಬಲವಾಗಲಿ ಇಲ್ಲವೇ ಇಲ್ಲ.

ಅಂತಹ ಗುಣಗಳನ್ನು ಅವರು ಬೆಳೆಸಿಕೊಳ್ಳುವವರೆಗೂ ಅವರು ಇಂತಹ ತಂತ್ರಗಳಲ್ಲಿ ತೊಡಗದೆ ಕಾಂಗ್ರೆಸ್ ಪಕ್ಷದ ಗೆಲುವಿಗೆ ಅಡ್ಡಬಾರದಿದ್ದರೆ ಅದು ರಾಹುಲ್ ಗಾಂಧಿಯ ಪುಣ್ಯ!!

● ವರದಿಗಾರ



ಕಲಾವಿದರ ರಾಜಕೀಯ

ಅಂತೂಇಂತೂ ಚುನಾವಣೆ ಘೋಷಣೆಯಾಗಿ ...ಯ ಮತ್ತು ಪ್ರಾದೇಶಿಕ ಪಕ್ಷಗಳು ತಮ್ಮ ಅಭ್ಯರ್ಥಿಗಳ ... ಪಟ್ಟಿಗಳನ್ನು ಬಿಡುಗಡೆ ಮಾಡಿವೆ. ಈ ಪಟ್ಟಿಯಲ್ಲಿ ... ಲೋಕದ ಹಲವರು ಸ್ಥಾನ ಪಡೆದಿದ್ದರೆ ಇನ್ನೂ ...ರು ಪ್ರಕಟಣೆ ಆಗಲಿರುವ ಮುಂದಿನ ಪಟ್ಟಿಗಳಲ್ಲಿ ... ಹೆಸರಿರಲಿ ಎಂದು ಕನಸು ಕಾಣುತ್ತಿದ್ದಾರೆ. ಟಿಕೆಟ್ ...ರುವ, ಪಡೆಯಲು ಆಶಿಸಿರುವ ಸಿನಿಮಾ ಕಲಾವಿದರ, ...ಪಕರ ರಾಜಕೀಯ ಭವಿಷ್ಯದ ಬಗ್ಗೆ ಒಂದು ಸಣ್ಣ ...ಕ್ ಇಲ್ಲಿದೆ.

ಮಂಡ್ಯದ ಗಂಡು ಅಂಬರೀಶ್

...ವರಿಗೆ ರಾಜಕೀಯ ಹೊಸದೇನಲ್ಲ, ಮೂರು ಬಾರಿ ...ಸಭಾ ಸದಸ್ಯರಾಗಿ ಆಯ್ಕೆಯಾಗಿ, ಒಮ್ಮೆ ಸ್ವಲ್ಪ ದಿನಗಳ ...ಗೆ ಕೇಂದ್ರ ಸಚಿವರೂ ಆಗಿದ್ದವರು. ಆದರೆ ಕೇಂದ್ರ ...ರಾಗಿ ಅವರೇನು ಸಾಧಿಸಿದರು ಎಂಬುದು ಮಾತ್ರ ...ಗೂ ನಿಗೂಢವಾಗಿದೆ.

...ವರು ಎರಡು ಬಾರಿ ವಿಧಾನಸಭಾ ಚುನಾವಣೆಗಳಲ್ಲಿ ... ಸೋತವರು. ಈಗ ಮತ್ತೊಮ್ಮೆ ಕಾಂಗ್ರೆಸ್ ಪಕ್ಷದಿಂದ ...ಡ್ಯ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ಪಡೆಯುವಲ್ಲಿ ...ಸ್ವಿ ಆಗಿದ್ದಾರೆ. ಮಂಡ್ಯ ಕ್ಷೇತ್ರದಿಂದ ಗೆದ್ದರೆ ವಿಧಾನ ...ಪ್ರವೇಶಿಸಿ ಮಂತ್ರಿಯಾಗುವ, ಮುಂದೊಂದು ದಿನ ...ಖ್ಯಮಂತ್ರಿ ಆಗುವ ಕನಸು ಅಂಬರೀಷ್ ಅವರದ್ದು. ...ರೆ ಮಂಡ್ಯದಲ್ಲಿ ಅವರಿಗೆ ತೀವ್ರ ವಿರೋಧ ...ವಾಗಿರುವುದರಿಂದ ಅವರ ಕನಸು ಈ ಬಾರಿ ...ಗುತ್ತದೆ ಎಂದು ಸುಲಭವಾಗಿ ಹೇಳಲಾಗುವುದಿಲ್ಲ.

ಉಮಾಶ್ರೀ





...ವರು ರಾಜಕೀಯವನ್ನು ಪ್ರವೇಶಿಸಿದ್ದು ಮಾಜಿ ...ಖ್ಯಮಂತ್ರಿ, ದಿವಂಗತ ಬಂಗಾರಪ್ಪನವರ ...ರ್ವಾದದಿಂದ. ಮೊದಲ ಬಾರಿ ಇವರು ...ವಣೆಯಲ್ಲಿ ಸ್ಪರ್ಧಿಸಿದ್ದು ಕೂಡ ಬಂಗಾರಪ್ಪನವರು ...ಸ್ಥಾಪಿಸಿದ್ದ ಕ್ರಾಂತಿರಂಗ ಪಕ್ಷದ ಮೂಲಕ. ಅದಾದನಂತರ ...ಗಾರಪ್ಪನವರ ಜೊತೆಗೆ ಕಾಂಗ್ರೆಸ್ ಸೇರಿದ ಉಮಾಶ್ರೀ ... ಪಕ್ಷದಿಂದ ವಿಧಾನ ಪರಿಷತ್ ಸದಸ್ಯೆಯಾಗಿ ...ಯಾದರು. ಒಮ್ಮೆ ವಿಧಾನ ಪರಿಷತ್ ಸದಸ್ಯೆ ...ನಂತರ ಕಾಂಗ್ರೆಸ್‌ನ ಹಿರಿಯ ನಾಯಕರೊಂದಿಗೆ ನಿಕಟ ...ಬಂಧವನ್ನು ಬೆಳೆಸಿ ರಾಜಕೀಯ ಪಟ್ಟುಗಳನ್ನು ಕಲಿತರು. ...ಕಳೆದ ಬಾರಿ ತೇರದಾಳ ಕ್ಷೇತ್ರದಿಂದ ಸ್ಪರ್ಧಿಸುವ ...ಕಾಶವನ್ನು ಕಡೆಗಳಿಗೆಯಲ್ಲಿ ಪಡೆದಿದ್ದರು. ಆದರೆ ಅವರ ...ದ್ಧ ಆಗ ಸ್ಥಳೀಯ ಕಾಂಗ್ರೆಸ್ ನಾಯಕರೇ ಪಿತೂರಿ ...ಸಿದ್ದರಿಂದ ಉಮಾಶ್ರೀ ಸೋತಿದ್ದರು. ಆದರೇನಂತೆ ...ಮಾಶ್ರೀ ಮಾತ್ರ ತೇರದಾಳ ಕ್ಷೇತ್ರವನ್ನಾಗಲಿ, ಅಲ್ಲಿನ ...ದಾರರನ್ನಾಗಲೀ ತಿರಸ್ಕರಿಸಲಿಲ್ಲ, ಬದಲಾಗಿ ಕಳೆದ ... ವರ್ಷಗಳಿಂದ ಅಲ್ಲೇ ಕೆಲಸ ಮಾಡುತ್ತಾ ಅಲ್ಲಿನ ...ರೊಂದಿಗೆ ನಿಕಟ ಸಂಬಂಧವನ್ನು ಮತ್ತು ನಂಬಿಕೆಯನ್ನು ...ಸಿದ್ದಾರೆ.

...ರಂಗಭೂಮಿ ಮತ್ತು ಸಿನಿಮಾ ಮುಖಾಂತರ ತಮ್ಮ ...ಭೆಯನ್ನು ಮೆರೆದು ಅಪಾರ ಅಭಿಮಾನಿಗಳನ್ನು ...ಂದಿರುವ, ಬದುಕಿನಲ್ಲಿ ಹಲವಾರು ಸಮಸ್ಯೆಗಳನ್ನು ...ಂಗಿಯಾಗಿ ಎದುರಿಸಿ ಗೆದ್ದಿರುವ ಉಮಾಶ್ರೀ ಈ ... ಗೆಲ್ಲುವುದು ನಿರೀಕ್ಷಿತವಾಗಿದೆ. ಚುನಾವಣಾ ಕಣದಲ್ಲಿ ...ಗ್ರೆಸ್ ಪರವಾಗಿ ಬೆರಳೆಣಿಕೆಯಷ್ಟು ...ಳೆಯರಿರುವುದರಿಂದ ಉಮಾಶ್ರೀ ಗೆದ್ದರೆ ಮುಂದಿನ ...ಗ್ರೆಸ್ ಸರ್ಕಾರದಲ್ಲಿ ಅವರು ಸಚಿವೆ ಆದರೂ ಅಚ್ಚರಿ ... ಅಂತಹ ಅದೃಷ್ಟ ಅವರಿಗೆ ಒದಗಿ ಬಂದರೆ ಅದು ...ರ ಶ್ರಮಕ್ಕೆ ಸಿಕ್ಕ ಸೂಕ್ತ ಪ್ರತಿಫಲವಾಗುತ್ತದೆ.

ರಕ್ಷಿತಾ ಪ್ರೇಮ್

... ಬಳ್ಳಾರಿಯ ಗಣಿ ಚೋರರ ಗ್ಯಾಂಗಿನ ಶ್ರೀರಾಮುಲು ...ರ ಬಿಎಸ್‌ಆರ್ ಎಂಬ ಹೊಸ ಪ್ರಾದೇಶಿಕ ಪಕ್ಷದ ...ಪಾಧ್ಯಕ್ಷೆ ಮತ್ತು ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ...ದ ಒಂದು ವರ್ಷದಿಂದ ಕೆಲಸ ಮಾಡುತ್ತಿರುವ ರಕ್ಷಿತಾ ...ಮ್ ಅವರ ಪಕ್ಷ ನಿಷ್ಠೆಯನ್ನು ಮೆಚ್ಚಲೇಬೇಕು. ಯಾಕೆಂದರೆ ...ಜಾ ಗಾಂಧಿ ಎಂಬ ಮತ್ತೋರ್ವ ನಟಿ ಆರೇ ತಿಂಗಳಲ್ಲಿ ...ರು ಪಕ್ಷಗಳನ್ನು ಬದಲಾಯಿಸಿರುವಾಗ ರಕ್ಷಿತಾ ಮಾತ್ರ ...ದಲಿನಿಂದ ಶ್ರೀರಾಮುಲು ಪಕ್ಷದಲ್ಲೇ ಉಳಿದಿದ್ದಾರೆ.

ಈಕೆ ಶ್ರೀರಾಮುಲು ಅವರ ನಾಯಕ ಸಮುದಾಯ ...ಬಲವಾಗಿರುವ ಗದಗ ಅಥವಾ ಬಳ್ಳಾರಿ ತರಹದ ಜಿಲ್ಲೆಯಿಂದ ಸ್ಪರ್ಧಿಸುವ ಆಶೆ ಹೊಂದಿದ್ದರು. ಆದರೆ ಬಿಎಸ್‌ಆರ್ ಪಕ್ಷ ಆಕೆಗೆ ಚಾಮರಾಜನಗರ ವಿಧಾನ ಸಭಾ ಕ್ಷೇತ್ರದ ಟಿಕೆಟ್ ನೀಡಿದೆ. ಆದರೆ ಆ ಕ್ಷೇತ್ರದಲ್ಲಿರುವ



ಬಿಎಸ್‌ಆರ್ ಪಕ್ಷದ ಕಾರ್ಯಕರ್ತರು ರಕ್ಷಿತಾರಿಗೆ ಟಿಕೆಟ್ ನೀಡಿರುವುದನ್ನು ವಿರೋಧಿಸುತ್ತಿದ್ದಾರೆ.

ರಾಜಕೀಯದಲ್ಲಿ ಇನ್ನೂ ಅಂಬೆಗಾಲಿಡುತ್ತಿರುವ ಕೂಸಾದ ರಕ್ಷಿತಾ ಈ ಚುನಾವಣೆಯಲ್ಲಿ ಗೆಲ್ಲುವ ಕುದುರೆ ಆಗುವ ಸಾಧ್ಯತೆ ತೀರಾ ಕಡಿಮೆ.

ಪೂಜಾ ಗಾಂಧಿ

'ಮುಂಗಾರು ಮಳೆ' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗದ ದಿಗಂತದಲ್ಲಿ ಉದಯಿಸಿದ ಪೂಜಾ ಗಾಂಧಿ ಎಂಬ ನಟಿ ರಾಜಕೀಯ ಕ್ಷೇತ್ರದಲ್ಲೂ ಯಶಸ್ವಿ ಆಗಲು ಹೊರಟಿದ್ದಾರೆ. ಮೊದಲು ಕುಮಾರಸ್ವಾಮಿಯವರ ಜೆಡಿಎಸ್ ಪಕ್ಷದಲ್ಲಿ ತೆನೆ ಹೊತ್ತ ಮಹಿಳೆ ಆಗಿದ್ದ ಪೂಜಾ ಕೆಲವೇ ದಿನಗಳಲ್ಲಿ ಯಡಿಯೂರಪ್ಪನ ಕೆಜೆಪಿ ಪಕ್ಷವನ್ನು ಸೇರಿ ಅಲ್ಲಿ ತೆಂಗಿನಕಾಯಿಯನ್ನು ತುರಿಯಲು ಯತ್ನಿಸಿದ್ದರು. ಆದರೆ ತುರಿಯೋ ಮಣೆಯಂತಿರುವ ಶೋಭಾ ಕರಂದ್ಲಾಜೆ ಮಧ್ಯ ಬಾಯಿ ಹಾಕಿದ್ದರಿಂದ ಕೆಜೆಪಿಯನ್ನು ತೊರೆದ ಪೂಜಾ ಗಣಿ ಕಳ್ಳರ ಬಿಎಸ್‌ಆರ್ ಪಕ್ಷ ಸೇರಿಕೊಂಡರು.

ಆರು ತಿಂಗಳಲ್ಲಿ ಮೂರು ಪಕ್ಷಗಳನ್ನು ಬದಲಾಯಿಸಿದ ರೆಕಾರ್ಡ್ ಹೋಲ್ಡರ್ ಪೂಜಾ ಗಾಂಧಿಗೆ ಈಗ ಬಿಎಸ್‌ಆರ್ ಪಕ್ಷ ರಾಯಚೂರು ನಗರ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ಕೊಟ್ಟಿದೆ. ಪೂಜಾ ರಾಜಕೀಯ ರಂಗಕ್ಕೆ ಧುಮುಕುವ ಮುನ್ನ ಏಡ್ಸ್ ತಡೆಗಟ್ಟುವ ಕಾರ್ಯಕ್ರಮದಲ್ಲಿ ರಾಯಚೂರು, ಬಿಜಾಪುರ ಮೊದಲಾದ ಕಡೆ ಎನ್.ಜಿ.ಓ. ಸಂಸ್ಥೆಯ ಜೊತೆ ಕೈಜೋಡಿಸಿ ಕೆಲಸ ಮಾಡಿದ್ದರು.

ಪೂಜಾ ಗಾಂಧಿ ಎಂಬ 'ಮಳೆ ಹುಡುಗಿ'ಯನ್ನು ರಾಯಚೂರಿನ ಬಿಸಿಲಲ್ಲಿ ಒಣಗಿಹೋಗಿರುವ ಅಲ್ಲಿಯ ಜನ ನೋಡಿ ತಮ್ಮ ಕಣ್ಣು ತಂಪಾಗಿಸಿಕೊಳ್ಳಬಹುದೇ ಹೊರತು ಆಕೆ ಆ ಕ್ಷೇತ್ರದಿಂದ ಗೆದ್ದು ಬರುವುದು ಕಷ್ಟಸಾಧ್ಯ ಎನಿಸುತ್ತಿದೆ.

ಮಯೂರ್ ಪಟೇಲ್

ಮೊನ್ನೆ ಮೊನ್ನೆ ತನಕ ಚೆಡ್ಡಿಗಳ ಬಿಜೆಪಿಯಲ್ಲಿ ಕುಣಿಯುತ್ತಿದ್ದ, ನಿನ್ನೆ ಯಡಿಯೂರಪ್ಪನ ಕೆಜೆಪಿಯಲ್ಲಿ ಚೀರಾಡುತ್ತಿದ್ದ ಇವತ್ತು ಶ್ರೀರಾಮುಲುವಿನ ಬಿಎಸ್‌ಆರ್ ಪಕ್ಷದಲ್ಲಿ ಹಾರಾಡುತ್ತಿರುವ ಆರ್ಕೆಸ್ಟ್ರಾ ಕಲಾವಿದ ಮದನ್ ಪಟೇಲ್ ಅವರ ಸುಪುತ್ರ ಈ ಮಯೂರ್ ಪಟೇಲ್.

ಆರಂಭದಲ್ಲಿ ಮದನ್ ಮತ್ತು ಮಯೂರ್ ಎಂಬ ಅಪ್ಪ-ಮಗನ ಜೋಡಿ ಶ್ರೀರಾಮುಲುವಿನ ಫ್ಯಾನ್‌ಗಳಾಗಿ ಆತನ ಫ್ಯಾನ್ ಪಕ್ಷದ ಚಿಹ್ನೆ ಅಡಿ ಸ್ಪರ್ಧಿಸಲಿದ್ದಾರೆ ಎಂಬ ಸುದ್ದಿ ಇತ್ತು. ಆದರೀಗ ಮಗ ಮಯೂರ್ ಪಟೇಲನಿಗೆ ಮಾತ್ರ ಮಹದೇವಪುರ ಕ್ಷೇತ್ರದಿಂದ ಸ್ಪರ್ಧಿಸುವ ಅವಕಾಶವನ್ನು ನೀಡಲಾಗಿದೆ.

ಅತ್ತ ಚಿತ್ರರಂಗದಲ್ಲೂ ಸರಿಯಾಗಿ ಕಾಲೂರದಿರುವ ಮಯೂರ್ ಇತ್ತ ರಾಜಕೀಯದಲ್ಲೂ ಪಕ್ವವಾಗಿರದ ಯುವಕ. ಆದ್ದರಿಂದ ಮಯೂರ್ ಪಟೇಲ್ ರಾಜಕೀಯವಾಗಿ ಗೆಲ್ಲುತ್ತಾರೆ ಎಂದು ಹೇಳಲು ಕಷ್ಟ. ಹೀಗಾಗಿ ಮಯೂರ್ ಪಟೇಲ್ ಸ್ಪರ್ಧೆ ಸಾಂಕೇತಿಕ ಮತ್ತು ನಾಮಕಾವಸ್ಥೆ ಮಾತ್ರ ಎಂದು ಹೇಳಬಹುದು.

ಕೆ. ಮಂಜು

ಚುನಾವಣೆ ಘೋಷಣೆ ಆಗುವ ಮೊದಲೇ ತಮ್ಮ ಸ್ವಂತ ಊರಾದ ತುರುವೇಕೆರೆಯಲ್ಲಿ ತನ್ನ ಚಿತ್ರವೊಂದರ ಕ್ಯಾಸೆಟ್ ಬಿಡುಗಡೆ ಸಮಾರಂಭವನ್ನು ಬಹಳ ಅದ್ದೂರಿಯಾಗಿ ಮಾಡುವ ಮೂಲಕ ನಿರ್ಮಾಪಕ ಕೆ.ಮಂಜು ರಾಜಕೀಯವನ್ನು ಪ್ರವೇಶಿಸುವ ತಮ್ಮ ಆಶಯವನ್ನು ಪರೋಕ್ಷವಾಗಿ ಪ್ರಕಟಿಸಿದ್ದರು. ಅಂದಿನ ಸಮಾರಂಭಕ್ಕೆ ಕನ್ನಡ ಚಿತ್ರರಂಗದ ಬಹುತೇಕ ನಟನಟಿಯರು ಬಂದು ಮಂಜುಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದರು. ಅದರಿಂದ ಸ್ಫೂರ್ತಿ ಪಡೆದ ಮಂಜು ಟಿಕೆಟ್‌ಗಾಗಿ ಎಲ್ಲ ರಾಜಕೀಯ ಪಕ್ಷಗಳ ಬಾಗಿಲು ಬಡಿದಿದ್ದರು. ಆದರೆ ಇಲ್ಲಿಯತನಕ ಯಾವ ರಾಜಕೀಯ ಪಕ್ಷವೂ ಅವರಿಗೆ ಟಿಕೆಟ್ ಘೋಷಿಸಿಲ್ಲ. ಟಿಕೆಟ್ ಸಿಕ್ಕರೂ ಇವರು ಮೊದಲ ಪ್ರಯತ್ನದಲ್ಲೇ ಗೆದ್ದು ಬರುವುದು ಡೌಟು.

ಮುನಿರತ್ನಂ ನಾಯ್ಡು

ಈಗ ಬಿಬಿಎಂಪಿಯಲ್ಲಿ ಕಾಂಗ್ರೆಸ್ ಕಾರ್ಪೊರೇಟರ್ ಆಗಿರುವ ಮುನಿರತ್ನಂ ನಾಯ್ಡು ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕಾಂಗ್ರೆಸ್ ಪಕ್ಷದ ಜನರಲ್ ಸೆಕ್ರೆಟರಿ ಆಗಿರುವ ಬಿ.ಕೆ.ಹರಿಪ್ರಸಾದ್ ಅವರ ಪಟ್ಟ ಶಿಷ್ಯ.

ಇವತ್ತು ಬೆಂಗಳೂರಿನ ರಾಜರಾಜೇಶ್ವರಿ ನಗರದ ಅಸೆಂಬ್ಲಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿ. ಆದರೆ ಆ ಪ್ರದೇಶದ ಟಿಕೆಟ್‌ಗಾಗಿ ಹಲವಾರು ಪ್ರಯತ್ನಿಸುತ್ತಿರುವುದರಿಂದ ಮುನಿರತ್ನಂ ನಾಯ್ಡು ಅವರು ಸದ್ಯ ಬಿಬಿಎಂಪಿಯಲ್ಲೇ 'ಶೇವೆ' ಸಲ್ಲಿಸುವ ಸಾಧ್ಯತೆಯೇ ಹೆಚ್ಚು.

ಬಿ.ಸಿ. ಪಾಟೀಲ್

ಹಾವೇರಿ ಜಿಲ್ಲೆಯ ಹಿರೇಕೆರೂರು ಅಸೆಂಬ್ಲಿ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕನಾಗಿ ಆಯ್ಕೆಯಾಗಿರುವ ಮಾಜಿ ಪೊಲೀಸ್ ಇನ್ಸ್‌ಪೆಕ್ಟರ್ ಕಮ್ 'ಭಯಾನಕ' ನಾಯಕ ನಟ ಬಿ.ಸಿ.ಪಾಟೀಲ್ ಕಾಂಗ್ರೆಸ್ ಪಕ್ಷದಿಂದ ಇದೇ ಕ್ಷೇತ್ರದಿಂದ ಮರು ಆಯ್ಕೆಯಾಗಲು ಟಿಕೆಟ್ ಪಡೆದಿದ್ದಾರೆ. ಕಾಂಗ್ರೆಸ್ ಪಕ್ಷದ ರಾಜಾಶ್ರಯ ಮತ್ತು ತನ್ನ ಸ್ವಂತ ಚಾರಿಷ್ಮದ ಬಲದಿಂದ ಪಾಟೀಲರಿಗೆ ಗೆಲುವು ಸಾಧಿಸುವುದು ಅಷ್ಟೇನು ಕಷ್ಟವಾಗಲಾರದು. ಒಂದು ವೇಳೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಲಿಂಗಾಯತ ಸಮುದಾಯದ ಕೋಟಾ ಅಡಿ ಪಾಟೀಲರಿಗೆ ಮಂತ್ರಿಯಾಗುವ ಸುಯೋಗವು ದೊರಕಬಹುದು.

ಮಧು ಬಂಗಾರಪ್ಪ ಮತ್ತು ಕುಮಾರ್ ಬಂಗಾರಪ್ಪ

ಬಂಗಾರಪ್ಪನವರ ಮಕ್ಕಳಾದ ಮಧು ಬಂಗಾರಪ್ಪ ಮತ್ತು ಕುಮಾರ್ ಬಂಗಾರಪ್ಪ ಮತ್ತೆ ಸೊರಬ ಅಸೆಂಬ್ಲಿ ಕ್ಷೇತ್ರದಲ್ಲಿ ಮುಖಾಮುಖಿಯಾಗುತ್ತಿರುವುದು ಒಂದು ವಿಶೇಷ. ಇವರಿಬ್ಬರು ಸಿನಿಮಾಗಳಲ್ಲಿ ನಾಯಕ ನಟರಾಗಿ ನಟಿಸಿದ್ದರೂ ಅಷ್ಟೊಂದು ಯಶಸ್ಸು ಕಂಡವರಲ್ಲ. ಆದರೂ ಇವರಿಬ್ಬರ ನಡುವಿನ ಚುನಾವಣಾ ಕಾಳಗ ಒಂದು ರೀತಿಯಲ್ಲಿ ಸಹೋದರರ ಸವಾಲ್.

ವೈಯಕ್ತಿಕವಾಗಿ ಇಬ್ಬರು ಒಳ್ಳೆಯವರೆ. ಆದರೆ ಬಂಗಾರಪ್ಪನವರ ಅಭಿಮಾನಿಗಳಿಗೆ ಮಾತ್ರ ಈ ಸಹೋದರರ ಸವಾಲು ತಲೆಬಿಟ್ಟು ಹಿಡಿಸಿದೆ. ಇವರಿಬ್ಬರಲ್ಲಿ ಯಾರು ಗೆದ್ದರೂ, ಯಾರು ಸೋತರೂ ಯಾರಿಗೂ ಬೇಸರವಾಗಲಾರದು, ಯಾರಿಗೂ ಸಂತೋಷವೂ ಆಗಲಾರದು. ಇಂತಹ ಒಂದು ವಿಚಿತ್ರವಾದ ಕ್ಷೇತ್ರ ಸೊರಬ ಕ್ಷೇತ್ರ. ಇದೇ ಮೊದಲ ಬಾರಿಗೆ ಬಂಗಾರಪ್ಪನವರ ಗೈರುಹಾಜರಿಯಲ್ಲಿ ಅವರ ಇಬ್ಬರು ಮಕ್ಕಳು ಮುಖಾಮುಖಿಯಾಗುತ್ತಿದ್ದಾರೆ.

ಸಿ.ಪಿ. ಯೋಗೇಶ್ವರ್

ಬಿಜೆಪಿ ಸರ್ಕಾರದಲ್ಲಿ ಮೊನ್ನೆ ಮೊನ್ನೆ ತನಕ ಮಂತ್ರಿಯಾಗಿದ್ದ ಸಿ.ಪಿ.ಯೋಗೇಶ್ವರರ ರಾಜಕೀಯ ಭವಿಷ್ಯವೇ ತೂಗುಯ್ಯಾಲೆಯಲ್ಲಿದೆ. ಕಳೆದ ಬಾರಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿ, 'ಆಪರೇಷನ್ ಕಮಲ' ತುತ್ತಾಗಿ ಬಿಜೆಪಿ ಸೇರಿದವರು ಯೋಗೇಶ್ವರ್. ಈಗ ಬಿಜೆಪಿ ಖಂಡಿತವಾಗಿಯೂ ಸೋಲುತ್ತದೆ ಎಂದು ಗೊತ್ತಾಗಿದ್ದೇ ತಡ ಮತ್ತೆ ಕಾಂಗ್ರೆಸ್‌ಗೆ ಹಾರಿಬರಲು ಪ್ರಯತ್ನಿಸಿದರು. ಆದರೆ ಇವರಂತಹ ಅವಕಾಶವಾದಿಗಳಿಗೆ ಜಾಗ ಕೊಡಬಾರದೆಂದು ಕಾಂಗ್ರೆಸ್‌ನ ಯುವರಾಜ ರಾಹುಲ್ ಗಾಂಧಿ ಫತ್ವಾ ಹೊರಡಿಸಿರುವುದು ಯೋಗೇಶ್ವರ್ ಅವರ ಅಧಿಕಾರ ದಾಹಕ್ಕೆ ಕಡಿವಾಣ ಹಾಕಿದೆ.

ಅತ್ತ ಕಾಂಗ್ರೆಸ್ ಇಲ್ಲ, ಇತ್ತ ಬಿಜೆಪಿಯೂ ಇಲ್ಲ, ಇವೆರಡರಲ್ಲದೆ ದಳಕ್ಕೂ ಹೋಗುವಂತಿಲ್ಲ ಎಂಬ ಪರಿಸ್ಥಿತಿಯಲ್ಲಿರುವ ಯೋಗೇಶ್ವರ್‌ಗೆ ಒಂದು ರೀತಿಯಲ್ಲಿ ತಕ್ಕ ಶಾಸ್ತಿ ಆಗಿದೆ. ರಾಜಕೀಯ ಎಂಬುದು ಸಿನಿಮಾಗಳಲ್ಲಿ ವಿವಿಧ ರೀತಿಯ ಪಾತ್ರಗಳನ್ನು ಮಾಡುವಂತಹದ್ದಲ್ಲ ಎಂಬುದು ಇಂತಹವರಿಗೆ ಆದಷ್ಟು ಬೇಗ ಅರ್ಥವಾದರೆ ಎಲ್ಲರಿಗೂ ಕ್ಷೇಮ.

ಶಶಿಕುಮಾರ್

ಕಳೆದ ಬಾರಿ ಚಳ್ಳಕೆರೆ ಅಸೆಂಬ್ಲಿ ಕ್ಷೇತ್ರದಿಂದ ಕೇವಲ 600 ಮತಗಳ ಅಂತರದಿಂದ ಶಶಿಕುಮಾರ್ ಸೋತಿದ್ದರೂ ಈ ಬಾರಿ ಅವರು ಟಿಕೆಟ್‌ಗಾಗಿ ಅರ್ಜಿಯನ್ನೇ ಸಲ್ಲಿಸಲಿಲ್ಲ. ಅದಕ್ಕೆ ಕಾರಣ ಅವರು ಆ ಕ್ಷೇತ್ರದಲ್ಲಿ ಮಾಡಿಕೊಂಡಿರುವ ಸ್ವಯಂಕೃತ ಅಪರಾಧಗಳು. ಈ ಹಿಂದೆ ಶಶಿಕುಮಾರ್ ಸಂಸದರಾಗಿದ್ದಾಗ ಕ್ಷೇತ್ರಕ್ಕಾಗಿ ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ. ಈ ಕಾರಣಕ್ಕೆ ಅವರಿಗೆ ಚಳ್ಳಕೆರೆ ಕಾಂಗ್ರೆಸ್ ಕಾರ್ಯಕರ್ತರಿಂದ ಸಮಾ ಒದೆ ಬಿದ್ದದ್ದೂ ಇದೆ. ಅದು ನಡೆದದ್ದು ಕಾಂಗ್ರೆಸ್ ಪಕ್ಷದವರು ಬೆಂಗಳೂರಿನಿಂದ ಬಳ್ಳಾರಿತನಕ ಪಾದಯಾತ್ರೆ ತೆಗೆದುಕೊಂಡು ಹೋದಾಗ. ಅವತ್ತು ಶಶಿಕುಮಾರ್ ತಾನೋರ್ವ ಕಾಂಗ್ರೆಸ್ ನಾಯಕನಂತೆ ಪೋಸು ಕೊಡುತ್ತಿದ್ದದ್ದನ್ನು ನೋಡಿದ ಚಳ್ಳಕೆರೆಯ ಕಾಂಗ್ರೆಸ್ ಕಾರ್ಯಕರ್ತರು ಆತನ ಮೇಲೆ ಎಗರಿ ಬಿದ್ದಿದ್ದರು. ಅವರ ಕೋಪವನ್ನು ನೋಡಿ ಪೇರಿ ಕಿತ್ತಿದ್ದ ಶಶಿಕುಮಾರ್ ಪಾದಯಾತ್ರೆಯಿಂದಲೇ ನಾಪತ್ತೆ ಆಗಿದ್ದರು. ಇವರ ರಾಜಕೀಯ ಬದುಕು ಅಂದೇ ಅಂತ್ಯಗೊಂಡಿತು.

ಹೀಗೆ ಈ ಬಾರಿಯ ಕರ್ನಾಟಕದ ಅಸೆಂಬ್ಲಿ ಚುನಾವಣೆಯಲ್ಲಿ ಬಹುತೇಕ ಎಲ್ಲ ಪಕ್ಷಗಳು ತಮ್ಮ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಲು ಸಿನಿಮಾ ತಾರೆಯರಿಗೆ ಅವಕಾಶ ಮಾಡಿಕೊಟ್ಟಿದೆ. ಕೆಲವರಿಗೆ ಇನ್ನು ಟಿಕೆಟ್ ಸಿಕ್ಕಿಲ್ಲ, ಹಾಗೆಯೇ ಕೆಲವರು ಬರೀ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಒಂದಂತೂ ನಿಜ, ಹಿಂದೆಂದಿಗಿಂತಲೂ ಅಧಿಕ ಸಂಖ್ಯೆಯಲ್ಲಿ ಸಿನಿಮಾ ತಾರೆಯರು ಚುನಾವಣಾ ಕಣದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಅದಕ್ಕೆ ಕಾರಣ ಅವರಿಗೆ ಸ್ಟಾರ್‌ಗಿರಿ ಇದ್ದರೂ ಅಧಿಕಾರ ಇರದಿಲ್ಲದಿರುವುದು.

ಹಣ ಎಂದರೆ ಹೆಣವೂ ಬಾಯಿ ಬಿಡುತ್ತದೆ ಎಂಬ ಗಾದೆ ಮಾತು ನಮ್ಮಲ್ಲಿದೆ. ಇವತ್ತಿನ ದಿನಗಳಲ್ಲಿ ಅಧಿಕಾರವೆಂದರೆ ಹಣ ಎಂಬಂತಾಗಿರುವಾಗ ಸಿನಿಮಾರಂಗದ ಥಳಕುಬಳುಕಿನ ಜನ ರಾಜಕೀಯ ಆಸ್ತಿಯನ್ನು ಬೆಳೆಸಿಕೊಂಡಿದ್ದರೆ ಅದರಲ್ಲೇನು ಅಚ್ಚರಿ, ಅಲ್ಲವೇ?!

● ಶ್ವೇತೈ

ಬೀದರ್ ಮಠದ ದುರಂತ


ಪಾಪಿ ಸರ್ಕಾರದಲ್ಲಿ ಸ್ವಾಮಿಗಳಿಗೂ ಉಳಿಗಾಲವಿಲ್ಲ!



ಸ್ವಾಮೀಜಿ ಗಣೇಶ್ವರ

ಮಠದ ಸಾಧಕರಿಗೆ ಆಗುತ್ತಿರುವ ಕಿರುಕುಳ ನೋಡಲಾಗುತ್ತಿಲ್ಲ, ನೊಂದಿದ್ದೇನೆ. ಅವರ ದುಃಖ ನೋಡಲಾಗದೆ ಭಗವಂತನಲ್ಲಿ ಒಂದಾಗುತ್ತಿದ್ದೇನೆ...!

ಇದು ಫೆಬ್ರವರಿ 28ರ ಬೆಳಗ್ಗೆ ಬೀದರ್‌ನ ಚೌಳಿ ಮಠದ ಹಿರಿಯ ಸ್ವಾಮಿ ಗಣೇಶ್ವರ ಅವಧೂತರ ಶವದೊಂದಿಗೆ ಸಿಕ್ಕ ಚೀಟಿ. ಧರ್ಮರಕ್ಷಕ ಬಿಜೆಪಿ ಸರ್ಕಾರದ ಅಧಿಕಾರದ ಪರಮಾವಧಿಯೋ ಎಂಬಂತೆ ಇಲ್ಲಿಗೆ ನಲವತ್ತು ದಿನಗಳ ಹಿಂದೆ ಚೌಳಿ ಮಠದ ಹಿರಿಯ ಸ್ವಾಮೀಜಿ ಗಣೇಶ್ವರ ಅವಧೂತರ ಆತ್ಮಹತ್ಯೆಯೊಂದಿಗೆ ಶುರುವಾದ ಕೇಸರಿ ದುರಂತವೀಗ ಅದೇ ಚೌಳಿ ಮಠದ ಮೂವರು ಕಿರಿಯ ಸ್ವಾಮಿಗಳ ಆತ್ಮಹತ್ಯೆಯ ಮೂಲಕ ಮುಗಿಲು ಮುಟ್ಟಿದೆ.



ಬೀದರ್‌ನಿಂದ 8 ಮೈಲಿ ದೂರದ ಹುಮನಾಬಾದ್ ರಸ್ತೆಯಲ್ಲಿರುವ ಚೌಳಿ ಮಠ ಸುತ್ತೂರು, ಸಿದ್ಧಗಂಗೆ, ಸಿರಿಗೆರೆಯಂತೆ ರಾಜಾಶ್ರಯದ ಮಠವೇನಲ್ಲ, ಇಲ್ಲಿದ್ದವರ್‍ಯಾರೂ ಜಗದ್ಗುರುಗಳಾಗಲಿ, ಸಂಘ ಪರಿವಾರದ ಆಶ್ರಯವಿದ್ದವರಾಗಲಿ ಅಲ್ಲ, ದೊಡ್ಡ ದೊಡ್ಡ ರಾಜಕಾರಣಿಗಳು, ಮಂತ್ರಿ-ಶಾಸಕರು ಬಂದುಹೋಗುವ ಮಠವೂ ಇದಲ್ಲ, ತಮ್ಮ ಪಾಡಿಗೆ ತಾವಿದ್ದ, ದೈವೋಪಾಸನೆಯೊಂದನ್ನೇ ನಂಬಿಕೊಂಡಿದ್ದ ಧರ್ಮವಂತ ಸ್ವಾಮೀಜಿಗಳಿಂದಾಗಿ ಬಿಜೆಪಿಗಾಗಲಿ, ಸಂಘ ಪರಿವಾರಕ್ಕಾಗಲಿ ಯಾವುದೇ ಪ್ರಯೋಜನವಿಲ್ಲವಾದ್ದರಿಂದ ಬೇರೆಲ್ಲ ಮಠಗಳಿಗೆ ಸಿಕ್ಕಂತೆ ಬೊಕ್ಕಸದ ಕೋಟಿಗಟ್ಟಲೆ ದುಡ್ಡೂ ಸಿಗಲಿಲ್ಲ.

ಇಂಥ ಸಾತ್ವಿಕ, ಧರ್ಮವಂತ, ಅಸಹಾಯಕ ಮಠದ ಮೂವರು ಕಿರಿಯ ಸ್ವಾಮಿಗಳೇ ಈಗ ಆತ್ಮಹತ್ಯೆಯ ದುರಂತಕ್ಕೀಡಾದವರು. ಮೊನ್ನೆ ಅಂದರೆ ಏಪ್ರಿಲ್ 8ರ ಸೋಮವಾರ ಬೆಳಗ್ಗೆ ನಸುಕಿನ ನಾಲ್ಕು ಗಂಟೆಗೆ ಚೌಳಿ ಮಠದಲ್ಲಿ ನಡೆದ ದುರಂತ ಬಹುಶಃ ಸ್ವಾತಂತ್ರ್ಯಾನಂತರದ ಆಧ್ಯಾತ್ಮಿಕ ಇತಿಹಾಸದಲ್ಲೇ ನಡೆದಿರಲಿಕ್ಕಿಲ್ಲ, ಆತ್ಮಹತ್ಯೆಗೆಂದೇ ಕಳೆದ ಒಂದು ವಾರದಿಂದ ಸಿದ್ಧತೆ ನಡೆಸಲಾಗಿದೆ. ಅಗ್ನಿಕುಂಡವನ್ನು ರಚಿಸಲೆಂದೇ ಮಣಗಟ್ಟಲೆ ಕಟ್ಟಿಗೆಯನ್ನು ತರಿಸಿಟ್ಟುಕೊಂಡಿದ್ದಾರೆ. ಸೋಮವಾರದ ನಸುಕಿನಲ್ಲಿ ತಂದ ಕಟ್ಟಿಗೆಯನ್ನೆಲ್ಲ ರಾಶಿ ಹಾಕಿ ಅಗ್ನಿಕುಂಡವನ್ನು ಸೃಷ್ಟಿಸಿದ ಮೂವರೂ ಕಿರಿಯ ಸ್ವಾಮಿಗಳು ಆತ್ಮಹತ್ಯೆಯ ದೃಢ ನಿರ್ಧಾರದಿಂದಲೇ ಬೆಂಕಿಗೆ ಆಹುತಿಯಾಗಿದ್ದಾರೆ!

ಚೌಳಿ ಮಠದ ಮೂವರು

ಹೀಗೆ ಆತ್ಮಹತ್ಯೆ ಮಾಡಿಕೊಂಡ ಚೌಳಿ ಮಠದ ಮೂವರು ಕಿರಿಯ ಸ್ವಾಮಿಗಳ ಪೈಕಿ ಅತ್ಯಂತ ಹಿರೀಕರೆಂದರೆ ಔರಾದಾ ತಾಲ್ಲೂಕಿನ ಮಾನೂರು ಗ್ರಾಮದ ಐವತ್ತು ವರ್ಷ ವಯಸ್ಸಿನ ಈರಾರೆಡ್ಡಿ ಸ್ವಾಮೀಜಿಯಾದರೆ ಎರಡನೆಯವರು 32 ವರ್ಷದ ಬೀದರ್ ತಾಲ್ಲೂಕು ನಾಗೂರು ಗ್ರಾಮದ ಜಗನ್ನಾಥ್ ಸ್ವಾಮೀಜಿ. ಇವರಲ್ಲಿ ಅತ್ಯಂತ ಕಿರಿಯನೇ ಚೌಳಿ ಗ್ರಾಮದ ಪ್ರಣವ ಸ್ವಾಮೀಜಿ. ಈತನಿಗಿನ್ನು ಹದಿನೆಂಟು ವರ್ಷ ವಯಸ್ಸು.

ಸೋಮವಾರ ಬೆಳಗ್ಗೆ ನಾಲ್ಕೂವರೆ ಹೊತ್ತಿಗೆಲ್ಲಾ ಮಠದ ಗರ್ಭಗುಡಿಯ ಮುಂದಿದ್ದ ಗೋಡೆ ಪಕ್ಕದ ಬೆಂಕಿ ಕುಂಡದಿಂದ ಚೀರಾಟ ಕೇಳಿಬಂತು. ಮುಖ್ಯ ಸಭಾಂಗಣದ ಹೊರಗಿದ್ದ ಕೊಠಡಿಯಲ್ಲಿ ಮಲಗಿದ್ದ ಮಹಾದೇವ ಸ್ವಾಮೀಜಿ ಎಂಬ ಮತ್ತೊಬ್ಬ ಕಿರಿಯ ಸ್ವಾಮೀಜಿ ಹೋಗಿ ನೋಡುವಷ್ಟರಲ್ಲಿ ಮೂವರೂ ಸ್ವಾಮಿಗಳೂ ಚೀರಾಡುತ್ತಿದ್ದದ್ದು ಕ್ಷೀಣಿಸತೊಡಗಿತ್ತು, ಮಠದ ವಾಸಿಗಳ ಕಣ್ಣೆದುರಿಗೇ ಮೂವರೂ ಸ್ವಾಮಿಗಳು ಸುಟ್ಟು ಕರಕಲಾಗಿದ್ದರು. ಕೆಲವೇ ಕ್ಷಣಕ್ಕೆ ಧಾವಿಸಿ ಬಂದ ಬೀದರ್ ಗ್ರಾಮೀಣ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಆನಂದ್ ಕಬ್ಬೂರು ಬೆಂಕಿ ಆರಿಸಿ ನೋಡಿದರೆ ಅಲ್ಲಿ ಸುಟ್ಟು ಕರಕಲಾಗಿದ್ದ ಮೂರು ಹೆಣಗಳಿದ್ದವು.

ಗರ್ಭಗುಡಿಯ ಗೋಡೆಗೆ ಅಂಟಿಸಿದ್ದ ಚೀಟಿಯಲ್ಲಿ 'ಸೋನಿ ಕ್ಯಾಮೆರಾ ಒಳಗೆ ಡೆತ್‌ನೋಟ್ ಇಡಲಾಗಿದೆ' ಎಂದು ಬರೆಯಲಾಗಿತ್ತು, ಕೋಣೆಯಲ್ಲಿದ್ದ ಸೋನಿ ಕ್ಯಾಮೆರಾ ತೆಗೆದು ನೋಡಿದರೆ ಅಲ್ಲಿ ಆತ್ಮಹತ್ಯೆಗೂ ಮುನ್ನ ಜಗನ್ನಾಥ್ ಸ್ವಾಮೀಜಿಯ ಹಸ್ತಾಕ್ಷರದಲ್ಲಿ ಬರೆದಿಟ್ಟಿದ್ದ ಪತ್ರವಿತ್ತು, ಅದಕ್ಕೆ ಈರಾರೆಡ್ಡಿ, ಜಗನ್ನಾಥ್ ಮತ್ತು ಪ್ರಣವ ಸ್ವಾಮೀಜಿ,



ಬೀದರ್‌ನ ಚೌಳಿ ಮಠ

ಮೂವರೂ ಸಹಿ ಹಾಕಿದ್ದರು.

ಆತ್ಮಹತ್ಯಾ ಪತ್ರ

ಸರ್ವೇಜನಾ ಸುಖಿನೋ ಭವಂತು. ಓಂ ಭಗವತೆ. ಪರಮ ಪೂಜ್ಯ ಗುರುಗಳೇ ನಮಗೆ ತಂದೆತಾಯಿ ಬಂಧುಬಳಗ ಎಲ್ಲವೂ. ನಿಮ್ಮನ್ನು ಅಗಲಿ ನಾವು ಇರಲಾರೆವು ಎಂದಾಗ 'ಈ ಅಶಾಶ್ವತ ಜಗತ್ತಿನಲ್ಲಿ ಈ ಕಲಿಯ ಪ್ರಭಾವಿತ ಜನರಲ್ಲಿ ಇರಲು ಸಾಧ್ಯವಿಲ್ಲ ಎಂದರೆ ನನ್ನ ಧಾಮಕ್ಕೆ ಬನ್ನಿರಿ' ಎಂದರು. ಹೇಗೆ ಎಂದು ಕೇಳಿದಾಗ 'ಒಬ್ಬರಿಂದ ಕಟ್ಟಿಗೆ ತರಿಸಿ. ಅಗ್ನಿದೇವನ ಮುಖಾಂತರ ಬನ್ನಿರಿ' ಎಂದರು. ಗುರುದೇವರ ವಿರಹದ ಬಾಧೆ ತಾಳುತ್ತಾ ಗುರುದೇವರನ್ನು ಕಳೆದುಕೊಂಡೆವಲ್ಲಾ ಎಂಬ ವಿರಹ ಸಹಿಸಲಸಾಧ್ಯವಾಗಿ ಈಗ ಅವರ ಪಾದದಲ್ಲಿ ಒಂದಾಗಿದ್ದೇವೆ...!'

ಇದು ಮೊದಲು ಸಿಕ್ಕ ಆತ್ಮಹತ್ಯಾ ಪತ್ರವಾದರೆ, ಆ ನಂತರ ಸೋನಿ ಕ್ಯಾಮರಾ ಇದ್ದ ತಟ್ಟೆಯ ಹಿಂದಿದ್ದ ಎರಡನೇ ಡೆತ್‌ನೋಟ್ ಇನ್ನೂ ವಿಚಿತ್ರವಾಗಿತ್ತು.

'... ಸ್ವಇಚ್ಛೆಯಿಂದಲೇ ನಮ್ಮ ಸ್ವಧಾಮವಾದ ಕೈಲಾಸಕ್ಕೆ ಹೋಗಿದ್ದೇವೆ. ನಮಗೆ ಯಾರೂ ಬಂಧುಬಳಗ ಇಲ್ಲ, ಆ ದೇವರೇ ನಮಗೆ ಎಲ್ಲವೂ. ಈ ವಿಷಯದಲ್ಲಿ ಯಾರಿಗೂ ತೊಂದರೆಗಳನ್ನು ಕೊಡಬೇಡಿ. ಇಂದು ಸಾವಿನ ಮೂಲಕ ಗುರುಗಳಿಗೆ ನೀಡಿದ ಪ್ರತಿಜ್ಞೆ ಪೂರ್ಣ ಮಾಡಿದ್ದೇವೆ. ಬದುಕಿದೊಡನೆ ಭಗವಂತನ ನಿಜರೂಪವನ್ನೇ ಕಾಣುವೆ. ಇಲ್ಲವೇ ದೇಹವನ್ನು ಅಗ್ನಿಗೆ ಹಾಕಿ ಬೂದಿ ಮಾಡುವೆ ಎಂಬುದೇ ನಮ್ಮ ಗುರಿ. ಈ ದೇಹದ ಭ್ರಮೆಯನ್ನು ಬಿಡಿರಿ. ನಾನು, ನನ್ನದು, ನನ್ನಿಂದಲೇ ಎಂಬ ಅಹಂಕಾರ ಮಮಕಾರವನ್ನು ತ್ಯಜಿಸಿ ಸದ್ಗುರು ಗಣೇಶ್ವರ ಲಿಂಗನ ಆಶ್ರಯಿಸಿ ಕಾಲವನ್ನು ಕಳೆಯಿರಿ. ಈ ನಾಮ, ರೂಪ, ಅಧಿಕಾರ, ಅಂತಸ್ತು, ಅಶಾಶ್ವತ. ನಿನ್ನೆ ಇರಲಿಲ್ಲ, ನಾಳೆ ಇರುವುದಿಲ್ಲ!

ಹೀಗೆ ಸಾಗುವ ಮೂವರು ಕಿರಿಯ ಸ್ವಾಮಿಗಳ ಡೆತ್‌ನೋಟ್ ಮೇಲುನೋಟಕ್ಕೆ ಹಿರಿಯ ಸ್ವಾಮಿ ಗಣೇಶ್ವರ







ಆತ್ಮಹತ್ಯೆ ಮಾಡಿಕೊಂಡ ಜಗನ್ನಾಥ್, ಈರಾರೆಡ್ಡಿ ಮತ್ತು ಪ್ರಣವಸ್ವಾಮಿ

ಮೌಢ್ಯದ ಹಿಂದಿರುವ ಕಾರಣ ಯಾವುದು?

ಆತ್ಮಹತ್ಯೆಗೂ ಮುನ್ನ ತಮ್ಮ ಹೇಳಿಕೆಗಳನ್ನು ವೀಡಿಯೋ ಕ್ಯಾಮೆರಾ ಮೂಲಕ ಸೆರೆಹಿಡಿದ ಮೂವರೂ ಸ್ವಾಮಿಗಳ ಹೇಳಿಕೆ ಇದೊಂದು ಹತಾಶ, ದುಃಖಿತ, ಭ್ರಮಾಧೀನ ಕೃತ್ಯದಂತೆಯೇ ಕಾಣುತ್ತದೆ.

ನಾನು ಇಹಲೋಕ ತ್ಯಜಿಸಿದ ಒಂದು ತಿಂಗಳೊಳಗೆ ಯಾರ್‍ಯಾರು ನನ್ನ ಸೇರಬಯಸುತ್ತಾರೋ ಅವರೆಲ್ಲ ಒಂದು ತಿಂಗಳೊಳಗೆ ಬನ್ನಿ ಎಂದು ಹಿರಿಯ ಸ್ವಾಮೀಜಿ ಮಠದ ಎಲ್ಲ ಸಾಧಕರಿಗೂ ಆಜ್ಞೆ ಮಾಡಿದ್ದರು. ಅದರಂತೆ ನಾವು ಗುರುಪಾದ ಸೇರುತ್ತಿದ್ದೇವೆ. ದೇಹವನ್ನು ತ್ಯಾಗ ಮಾಡಿ ನಾವು ಗುರುಗಳನ್ನು ನೋಡಲು ಹೊರಟಿದ್ದೇವೆ ಎಂದು ಅತ್ಯಂತ ಕಿರಿಯರಾದ ಪ್ರಣವ ಸ್ವಾಮಿ ವೀಡಿಯೋ ಕ್ಯಾಮೆರಾದೆದುರು ಹೇಳುತ್ತಿದ್ದರೆ ಹಿರಿಯನಾದ ಈರಾರೆಡ್ಡಿ ಸ್ವಾಮಿ ಅಪ್ಪೋರಾ ಆಜ್ಞೆಯಿತ್ತು, ನಮ್ಮ ಇಚ್ಛೆ ಕೂಡ ಅದೇ ಆಗಿದ್ದರಿಂದ ಬೆಂಕಿಗೆ ಆಹುತಿಯಾಗಿ ಅಪ್ಪೋರ ಬಳಿ ಹೋಗುತ್ತಿದ್ದೇವೆ. ಇದರಲ್ಲಿ ಯಾರ ತಪ್ಪೂ ಇಲ್ಲ... ಎಂದಿದ್ದಾರೆ.

ಇನ್ನು ಜಗನ್ನಾಥ್ ಸ್ವಾಮೀಜಿ 'ಭಗವಾನ್‌ನನ್ನು ನೋಡಲು ನಾವು ಕಾತರಿಸುತ್ತಿದ್ದೇವೆ. ನಾನು ಭಗವಂತನ ಪ್ರೇರಣೆಯಿಂದಲೇ ಜನಿಸಿದ್ದೇನೆ. ಓಂ ನಮಃ ಶಿವಾಯ ಮಂತ್ರ ಜಪಿಸುತ್ತಲೇ ನಾವು ಇಹಲೋಕ ತ್ಯಜಿಸುತ್ತಿದ್ದೇವೆ' ಎಂದು ಕ್ಯಾಮೆರಾ ಮುಂದೆ ನಿಂತು ಹೇಳಿಕೆ ಕೊಟ್ಟಿದ್ದಾರೆ. ಈ ಮೂವರು ಸ್ವಾಮಿಗಳ ಹೇಳಿಕೆ ಮೇಲುನೋಟಕ್ಕೆ ಭಕ್ತಿಯ ಪರಮಾವಧಿಯಂತೆ, ವಿಚಿತ್ರ ಉನ್ಮಾದದಂತೆ, ಭ್ರಮೆಯಂತೆ, ಹುಚ್ಚಾಟದಂತೆ ಕಾಣಬಹುದು.

ಆದರೆ ಚೌಳಿ ಮಠದ ಪರಿಸ್ಥಿತಿ, ಅಲ್ಲಿನ ಕಂದಾಚಾರಗಳು, ಸ್ವಾಮಿ ಶಿಷ್ಯರ ಮನಸ್ಥಿತಿ ಮತ್ತು ಒಂದರಮೇಲೊಂದಾಗಿ ಸಂಭವಿಸಿದ ದುರಂತಗಳು ಏನೇನೂ ಅರಿಯದ, ಸ್ವಾಮಿಯನ್ನೇ ಅವಲಂಬಿಸಿದ್ದ ಸ್ವಾಮಿಯ ಹೊರತಾಗಿ ಬೇರೆ ಗತಿಯೇ ಇಲ್ಲದಂತಿದ್ದ ಕಿರಿಯ ಸ್ವಾಮಿಗಳಲ್ಲಿ ಇಂಥ ಹತಾಶ ಮನಸ್ಥಿತಿಯನ್ನು ಹುಟ್ಟಿ ಹಾಕಿದ್ದರಲ್ಲಿ ಯಾವುದೇ ಆಚ್ಚರಿಯಿಲ್ಲ, ಉನ್ಮಾದ, ಆವೇಶ ಮತ್ತು ಭಕ್ತಿಯ ಪರವಶತೆಗೆ ಆ ಥರದ ಶಕ್ತಿಯಿದೆಯಾದರೂ ಇವೆಲ್ಲಕ್ಕೂ ಕಾರಣವಾದ ಹತಾಶೆಯ ಹಿಂದಿರುವ ಘಟನಾವಳಿಗಳಿಗೆ ಕಾರಣವೇನು?

ಮೌಢ್ಯ ಮಾತ್ರವೇ ಮೆರೆಯುತ್ತಿದೆ. ಅದರ ಹಿಂದಿನ ಕಾರಣ ನಿಗೂಢವಾಗೇ ಇದೆ.



ಅವಧೂತ ಸ್ವಾಮಿ ಸಾವಿಗೀಡಾದಾಗ ಸೇರಿದ್ದ ಭಕ್ತ ಸಮೂಹ



ಆತ್ಮಹತ್ಯೆ ಮಾಡಿಕೊಂಡ ಮೂರು ಸ್ವಾಮಿಗಳ ಕುಟುಂಬ ಸದಸ್ಯರ ರೋಧನೆ

ೂತರ ಅಗಲಿಕೆಯ ವೇದನೆ ತಾಳದೆ ಕಿರಿಯ ಗಳು ಆತ್ಮಹತ್ಯೆ ಮಾಡಿಕೊಂಡಂತೆ ಕಾಣಿಸುತ್ತದೆ. ಲಾಲಸೆಗಳೇ ತುಂಬಿರುವ ಹಣವೊಂದೇ. ೂಂದನ್ನು ನಿರ್ಧರಿಸುವ ಇಂಥ ದುಷ್ಕಾಲದಲ್ಲೂ ಗಾಗಿ ತಮ್ಮ ಬದುಕನ್ನೇ ಬೆಂಕಿಗಾಹುತಿ ಕೊಟ್ಟ ರು ಕಿರಿಯ ಸ್ವಾಮಿಗಳ ಅಗ್ನಿಪ್ರವೇಶವು ಸಾಮಾನ್ಯರ ವಿಚಿತ್ರದಂತೆ ಕಾಣಬಹುದು.

ದರೆ ಇಡೀ ಪ್ರಕರಣದ ಒಂದೊಂದೇ ವಳಿಗಳನ್ನು ಬಿಡಿಸಿ ನೋಡಿದರೆ ಇದಕ್ಕೆ ಬೇರೆಯದೇ ನಿಗೂಢ ಕಾರಣ ಗೋಚರಿಸುತ್ತದೆ. ಪ್ರತ್ಯಕ್ಷವೋ ಕ್ಷವೋ ಇದರಲ್ಲಿ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ತ ಮತ್ತು ಆತ್ಮವಂಚನೆಯೂ ದುರಂತದ ಗಳಲ್ಲೊಂದಾಗಿ ಗೋಚರಿಸದಿರದು.

ದೇವರಾದ ಅವಧೂತ!

ದರ್-ಹುಮನಾಬಾದ್ ರಸ್ತೆಯ ಚೌಳಿ ಮಠ ಯಾಗಿದ್ದು 1989ರಲ್ಲಿ. ಮೂಲತಃ ಮಹಾರಾಷ್ಟ್ರದ ಜಿಲ್ಲೆಯ ಗುಗುವಾಡಿ ಗ್ರಾಮದ ಶಿವಕುಮಾರ್

ನವರೇ ಸನ್ಯಾಸ ಸ್ವೀಕರಿಸಿ ತಮ್ಮ ಪತ್ನಿ ಮತ್ತು ನ್ನು ತ್ಯಜಿಸಿ ಶ್ರೀಶೈಲಕ್ಕೆ ಬಂದು ಗಣೇಶ್ವರ ತರಾದರು. ಮನೆ, ಸಂಸಾರ ತೊರೆದು ಶ್ರೀಶೈಲದಲ್ಲಿ ಮಾಡಿಕೊಂಡಿದ್ದ ಗಣೇಶ್ವರ ಅವಧೂತರನ್ನು ಗೆ ಕರೆತಂದದ್ದು ಇದೇ ಚೌಳಿ ಗ್ರಾಮದವರಾದ ಡಿವೈಎಸ್‌ಪಿ ಸಂಗಯ್ಯ ಸ್ವಾಮಿ.

ೂದಮೊದಲು ಸಂಗಯ್ಯ ಸ್ವಾಮಿಯವರ ನಲ್ಲೇ ವಾಸ್ತವ್ಯ ಹೂಡಿದ ಗಣೇಶ್ವರ ಅವಧೂತರು ಪಾಂಡಿತ್ಯದಿಂದಲೇ ವೇಗವಾಗಿ ಬೆಳೆದರು. ಚೌಳಿ ದಲ್ಲೇ ಎಂಟೆಕರೆ ಭೂಮಿಯಲ್ಲಿ ಮಠ ಸ್ಥಾಪಿಸಿದರು. ರುತ್ತ ಅನೇಕ ಸಾಧಕರು ಬಂದು ಅವರ ಯಾದರು. ಬೀದರ್ ಸುತ್ತಮುತ್ತ ಮಾತ್ರವಲ್ಲದೆ ದ ಆಂಧ್ರ, ಮಹಾರಾಷ್ಟ್ರಗಳಲ್ಲೂ ಅವರ ಭಕ್ತವೃಂದ ತು. ಅವಧೂತರು ಬೀದರ್‌ಗೆ ಆಗಮಿಸಿದ ರ್ಥ ಪ್ರತಿವರ್ಷ ಯುಗಾದಿ ಹೊತ್ತಿಗೆ ಅದ್ದೂರಿಯ ನಡೆದು ಅವತ್ತೇ ಸಮಸ್ತ ಭಕ್ತ ಸಮೂಹದ ಮುಖಿಯಾಗುತ್ತಿತ್ತು.

ಮಿಯ ವರ್ಚಸ್ಸೋ, ತಪಶ್ಶಕ್ತಿಯೋ ಬರಬರುತ್ತ ಶಿವನ ಅವತಾರವೆಂದೂ ದೇವರೆಂದೂ ಕೆಲ ಗಳು ಭಾವಿಸಲಾರಂಭಿಸಿದರು. ಮಠದ ಪ್ರವೇಶ ಲ್ಲೇ ಅವಧೂತರ ವಿವಿಧ ಭಂಗಿಗಳ 35 ಕಿರು ಗಳನ್ನು ಹಾಕಲಾಯ್ತು. ಮಠದ ಒಳಗೆ ನೃತ್ಯದ ಲ್ಲಿರುವ ಅರ್ಧ ನಾರೀಶ್ವರನ ಪ್ರತಿಮೆ ಸ್ಥಾಪಿಸಿ ಸುತ್ತ ಸಹಸ್ರ ಲಿಂಗಗಳನ್ನೂ ಪ್ರತಿಷ್ಠಾಪಿಸಲಾಯ್ತು. ದರ ಪರಮಾವಧಿಯೆಂಬಂತೆ 40 ಅಡಿ ಎತ್ತರದ ಧಾರಿ, ತ್ರಿಶೂಲಧಾರಿ ಗಣೇಶ್ವರ ಅವಧೂತರ ಬೃಹತ್ ಪ್ರತಿಮೆಯೊಂದನ್ನು ಮಠದ ಗರ್ಭಗುಡಿಯ ಎದುರೇ ಸ್ಥಾಪಿಸಲಾಯ್ತು.

ಇದೆಲ್ಲವೂ ಗಣೇಶ್ವರ ಅವಧೂತರ ಸ್ವಯಂ ವಿಜೃಂಭಣೆಯಂತೆ ಕಂಡರೂ ಅದಕ್ಕೆ ತಕ್ಕಂತ ಸಾತ್ವಿಕತೆ ಅವರಲ್ಲಿತ್ತು. ಇದೆಲ್ಲಕ್ಕೂ ಹೊರತಾಗಿ ಚೌಳಿ ಮಠದಲ್ಲಿದ್ದ ಮತ್ತೊಂದು ವೈಶಿಷ್ಟ್ಯವೆಂದರೆ ಇಲ್ಲಿನ ಗರ್ಭಗುಡಿಯಲ್ಲಿ ಗಣೇಶ್ವರ ಅವಧೂತರದೇ ಮೂರ್ತಿಯಿಟ್ಟು ಪ್ರತಿನಿತ್ಯ ಅದನ್ನೇ ಪೂಜಿಸಲಾಗುತ್ತಿತ್ತು. ಇದರರ್ಥ ಗಣೇಶ್ವರರೇ ಸಾಕ್ಷಾತ್ ದೇವರ ಅವತಾರವೆಂಬಂತೆ ಅವರ ಶಿಷ್ಯಗಣ ಭಾವಿಸುತ್ತಿತ್ತು. ಐದು ಹೆಡೆಗಳ ಸರ್ಪದ ಕೆಳಗೆ ಗಣೇಶ್ವರ ಅವಧೂತರು ಅಭಯಹಸ್ತ ಚಾಚಿದ ಮತ್ತೊಂದು ಪುತ್ಥಳಿಯೂ ಗರ್ಭಗುಡಿಯಲ್ಲಿತ್ತು!

ಹೆಣವಾದ ಅವಧೂತ

ಮಠದಲ್ಲಿದ್ದ ಸಾಧಕರು ಅಥವಾ ಶಿಷ್ಯರ ಪೈಕಿ ಈರಾರೆಡ್ಡಿ ಜಗನ್ನಾಥ್, ಪ್ರಣವ ಸ್ವಾಮೀಜಿ, ಮಹಾದೇವ ಸ್ವಾಮಿ, ಮಾರುತಿ ಸ್ವಾಮಿ, ಅಶೋಕ್ ಸ್ವಾಮೀಜಿ ಇತ್ಯಾದಿಗಳೇ ಪ್ರಮುಖರಾಗಿದ್ದರೂ ಆಗಾಗ ಎಲ್ಲೆಲ್ಲಿಂದಲೋ ಶರಣರು, ಸಾಧಕರು, ಸಂತರು ಬಂದು ಹೋಗುವುದು ಸಾಮಾನ್ಯವಾಗಿತ್ತು. ಈ ಮಧ್ಯೆ 2012ರ ಡಿಸೆಂಬರ್ 31ರಂದು ಮಠದ ಹೊರವಲಯದಲ್ಲಿ ಮಾರುತಿ ಸ್ವಾಮಿಗಳ ಮೇಲೆ ದುಷ್ಕರ್ಮಿಗಳ ತಂಡವೊಂದು ಹಲ್ಲೆ ನಡೆಸಿತು. ಈ ಬಗ್ಗೆ ಬೀದರ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತು. ಆದರೆ ದೂರಿನಲ್ಲಿ ಹಲ್ಲೆ ನಡೆಸಿದವರ್ಯಾರು, ಯಾವ ಕಾರಣಕ್ಕೆ ಹಲ್ಲೆ ನಡೆಸಿದರೆಂಬುದು ಮಾತ್ರ ನಿಗೂಢವಾಗೇ ಇತ್ತು. ದಾಳಿಯ ಭೀಕರತೆ ಯಾವ ಮಟ್ಟಕ್ಕಿತ್ತೆಂದರೆ ಮಾರುತಿ ಸ್ವಾಮಿಯ ಪಕ್ಕೆಗೇ ಚಾಕುವಿನಿಂದ ಇರಿಯಲಾಗಿತ್ತು.

ಇದಾಗಿ ಒಂದು ತಿಂಗಳಿಗೆ ಸರಿಯಾಗಿ ಅಂದರೆ 2013ರ ಜನವರಿ 31ರಂದು ಇದ್ದಕ್ಕಿದ್ದಂತೆ ಮಾರುತಿ ಸ್ವಾಮೀಜಿಯೇ ನಾಪತ್ತೆಯಾದರು. ಈ ಬಗ್ಗೆಯೂ ಗಣೇಶ್ವರ ಅವಧೂತರ ಶಿಷ್ಯರೇ ಬೀದರ್ ಗ್ರಾಮಾಂತರ ಠಾಣೆಗೆ ಬಂದು ದೂರು ಕೊಟ್ಟರು. ಮೊದಲು ನಡೆದ ಮಾರಕ ಹತ್ಯಾ ಯತ್ನ, ಆನಂತರ ಇದ್ದಕ್ಕಿದ್ದಂತೆ ನಾಪತ್ತೆಯಾದ ಪ್ರಕರಣಗಳು ಮಾಸುವ ಮೊದಲೇ ಇದೆಲ್ಲಕ್ಕಿಂತಲೂ ಭಯಾನಕ ಮತ್ತು ಆಘಾತಕಾರಿಯಾದ ಮತ್ತೊಂದು ದುರಂತ ಚೌಳಿ ಮಠದಲ್ಲಿ ನಡೆದದ್ದು 2013ರ ಫೆಬ್ರವರಿ 28ರ ಬೆಳ್ಳಂಬೆಳಗ್ಗೆ.

ಸಾಕ್ಷಾತ್ ದೈವಸ್ವರೂಪಿ ಗಣೇಶ್ವರ ಅವಧೂತರೇ ಹೆಣವಾಗಿ ಬಿದ್ದಿದ್ದರು! ತಾವು ವಾಸವಿದ್ದ ಗರ್ಭಗುಡಿಯಲ್ಲೇ ಹೆಣವಾಗಿದ್ದ ಗಣೇಶ್ವರ ಅವಧೂತರದ್ದು ಕೊಲೆಯೋ ಆತ್ಮಹತ್ಯೆಯೋ ಎಂಬ ಪ್ರಶ್ನೆಯನ್ನೇ ಪೊಲೀಸರು ಕೆದಕಲಿಲ್ಲ. ಇದ್ದಕ್ಕಿದ್ದಂತೆ ಸ್ವಾಮೀಜಿ ಸಜೀವ ಸಮಾಧಿಯಾದರು ಎಂದು ಕತೆ ಕಟ್ಟಲಾಯಿತು. ಆದರೆ ಸ್ವಾಮೀಜಿ ಆತ್ಮಹತ್ಯೆಗೂ ಮುನ್ನ ಬರೆದಿಟ್ಟಿದ್ದ ಡೆತ್‌ನೋಟ್ ಸಿಕ್ಕಿತ್ತು. ಅದರಲ್ಲಿ 'ಮಠದ ಸಾಧಕರಿಗೆ ಆಗುತ್ತಿರುವ ಕಿರುಕುಳ ನೋಡಲಾಗುತ್ತಿಲ್ಲ. ನೊಂದಿದ್ದೇನೆ. ಅವರ ದುಃಖ ನೋಡಲಾರದೆ ಭಗವಂತನಲ್ಲಿ ಒಂದಾಗುತ್ತಿದ್ದೇನೆ' ಎಂದು ಬರೆಯಲಾಗಿತ್ತು!

ಹಾಗಿದ್ದರೆ ಮಠದ ಸಾಧಕರಿಗೆ ಕಿರುಕುಳ ನೀಡುತ್ತಿದ್ದದ್ದು ಯಾರು? ಏನೇನು ಕಿರುಕುಳ ನೀಡಲಾಗಿತ್ತು? ಮಾರುತಿ ಸ್ವಾಮಿಯ ಹತ್ಯೆಗೆ ಯತ್ನಿಸಿದ್ದು ಯಾರು? ಯಾವ ಕಾರಣಕ್ಕೆ ಮಾರುತಿ ಸ್ವಾಮಿ ನಾಪತ್ತೆಯಾದರು? ಅದು ಕೊಲೆಯಾಗಿರಬಹುದೆ? ಇತ್ಯಾದಿ ಅನೇಕ ಪ್ರಶ್ನೆಗಳಿಗೆಲ್ಲ ಉತ್ತರವಾಗಬೇಕಿದ್ದ ಗಣೇಶ್ವರ ಅವಧೂತರ ಆತ್ಮಹತ್ಯೆಯನ್ನೂ ಸಜೀವ ಸಮಾಧಿಯ ನೆಪವೊಡ್ಡಿದ ಪೊಲೀಸರು ಮುಚ್ಚಿ ಹಾಕಿದ್ದರು.


ಅಶೋಕ್ ಅಸಡ್ಡೆ

ಬಹುಶಃ ಈ ಹಂತದಲ್ಲಾದರೂ ಪೊಲೀಸರು ಕಾರ್ಯಾಚರಣೆಗಿಳಿದಿದ್ದರೆ ಮಾರುತಿ ಸ್ವಾಮಿಯ ನಿಗೂಢ ಕಣ್ಮರೆ, ಅದಕ್ಕೂ ಮುನ್ನ ನಡೆದ ಹತ್ಯಾ ಯತ್ನ, ಆನಂತರ ನಡೆದ ಗಣೇಶ್ವರ ಅವಧೂತರ ಆತ್ಮಹತ್ಯೆ ಎಲ್ಲಕ್ಕೂ ನಿಖರ ಉತ್ತರ ಸಿಗುತ್ತಿತ್ತು. ಮುಂದಾಗುವ ಅನಾಹುತವನ್ನಾದರೂ ತಪ್ಪಿಸಬಹುದಿತ್ತು. ಆದರೆ ಇಷ್ಟೆಲ್ಲ ನಡೆದಾಗ್ಯೂ ಪ್ರತಿಯೊಂದರ ಬಗ್ಗೆ ಪೊಲೀಸರಿಗೆ ದೂರು ದಾಖಲಾಗಿಯೂ ಯಾವುದಕ್ಕೂ ಸ್ಪಂದಿಸದೆ, ಏನನ್ನೂ ಕೆದಕದೆ, ಯಾವುದೇ ಕ್ರಮ ಕೈಗೊಳ್ಳದೆ ನಿಷ್ಕ್ರಿಯವಾಗಿದ್ದ ಪೊಲೀಸರ ವರ್ತನೆಯೇ ಇದೆಲ್ಲಕ್ಕಿಂತಲೂ ಭಯಾನಕ ಪ್ರಶ್ನೆಯಂತಿತ್ತು.

ಅಧಿಕಾರದಲ್ಲಿದ್ದದ್ದು ಧರ್ಮಾಧಾರಿತ ಬಿಜೆಪಿ ಸರ್ಕಾರ. ಅದರಲ್ಲೂ ಸ್ವಾಮಿಗಳು, ಮಠಮಾನ್ಯಗಳೆಂದರೆ ಸಾಕ್ಷಾತ್ ಸರ್ಕಾರದ ಆಧಾರಸ್ತಂಭಗಳಂತೆ ಕೋಟಿ ಕೋಟಿ ಸರ್ಕಾರಿ ನಿಧಿ ಮಂಜೂರು ಮಾಡಿ ಕಾಲಿಗೆ ಬೀಳುತ್ತಿದ್ದವರ ಸರ್ಕಾರ. ಆದರೆ ಚೌಳಿ ಮಠದ ದುರಂತಕ್ಕೆ ಮಾತ್ರ ಬಿಜೆಪಿ-ಸಂಘಪರಿವಾರದ ಹಿಂದುತ್ವ, ಧರ್ಮಶ್ರದ್ಧೆ, ಧರ್ಮರಕ್ಷಣೆಗಳೆಲ್ಲವೂ ನಿಷ್ಪ್ರಯೋಜಕವಾಗಿದ್ದವು. ಈ ಮಧ್ಯೆ ಮಠದ ಸಾಧಕರಲ್ಲೊಬ್ಬರಾಗಿದ್ದ ಅಶೋಕ್ ಸ್ವಾಮೀಜಿ ಮಾರುತಿ ಸ್ವಾಮಿಯ ನಾಪತ್ತೆ ಕುರಿತಂತೆ ರಾಜ್ಯ ಹೈಕೋರ್ಟಿಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿ ಮಠಕ್ಕೆ ರಕ್ಷಣೆ ನೀಡಬೇಕೆಂದೂ, ಪೊಲೀಸರು ಯಾವುದೇ ರಕ್ಷಣೆ ನೀಡುತ್ತಿಲ್ಲವೆಂದೂ ತಮಗೆಲ್ಲಾ ಪ್ರಾಣಾಪಾಯವಿದೆಯೆಂದೂ ಗೋಳಿಟ್ಟರು ಕೂಡ. ಪೊಲೀಸರು ಮಾತ್ರ ತಲೆಕೆಡಿಸಿಕೊಳ್ಳಲಿಲ್ಲ.

ಇತ್ತ ಬೀದರ್ ಜಿಲ್ಲಾ ಪೊಲೀಸ್ ವರಿಷ್ಠ ಡಾ. ತ್ಯಾಗರಾಜನ್ 'ಗಣೇಶ್ವರ ಅವಧೂತರ ಸಾವಿನ ಕುರಿತಂತೆ ಯಾರೂ ದೂರು ನೀಡಿಲ್ಲ ಮತ್ತು ಭಕ್ತಾದಿಗಳು ವಿಪರೀತ ಜಮೆಯಾಗಿದ್ದರಿಂದಾಗಿ ಅವರ ನಿಯಂತ್ರಣಕ್ಕೆ ಪೊಲೀಸರನ್ನಷ್ಟೇ ನಿಯೋಜಿಸಲಾಗಿದೆಯೇ ಹೊರತು ತನಿಖೆಯ ಅಗತ್ಯವೇ ಇಲ್ಲ' ಎಂಬಂತೆ ತಿಪ್ಪೆ ಸಾರಿಸಿಬಿಟ್ಟರು. ಇದಾಗಿ ಕೆಲದಿನಕ್ಕೆ ಬೀದರ್‌ಗೆ ಬಂದಿದ್ದ ಗೃಹಮಂತ್ರಿ ಅಶೋಕ್‌ಗೆ ಅಲ್ಲಿನ ಪತ್ರಕರ್ತರೇ ಚೌಳಿ ಮಠದ ದುರ್ಘಟನೆಗಳ ಬಗ್ಗೆ ಪ್ರಶ್ನೆಯಿಟ್ಟರೆ 'ಘಟನೆಯ ವಿವರ ಪಡೆದಿದ್ದೇನೆ. ಹಿರಿಯ ಸ್ವಾಮೀಜಿಯ ಪತ್ರ ಮತ್ತು ಕಿರಿಯ ಸ್ವಾಮಿಗಳು ನೀಡಿರುವ ಹೇಳಿಕೆಯನ್ನಿಟ್ಟುಕೊಂಡು ತನಿಖೆ ನಡೆಸುವಂತೆ ಪೊಲೀಸರಿಗೆ ನಿರ್ದೇಶನ ನೀಡಿದ್ದೇನೆ' ಎಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿಬಿಟ್ಟರು.

ಮಠದ ಸ್ವಾಮಿಯೊಬ್ಬರ ಹತ್ಯಾ ಯತ್ನ, ಆ ನಂತರ ಅದೇ ಸ್ವಾಮಿಯ ಕಣ್ಮರೆ, ಇದಾದನಂತರ ನಡೆದ ಹಿರಿಯ ಸ್ವಾಮಿಯ ಆತ್ಮಹತ್ಯೆ ಕುರಿತಂತೆ ರಾಜ್ಯದ ಗೃಹಮಂತ್ರಿಯೊಬ್ಬ ಇಷ್ಟೊಂದು ಅಸಡ್ಡೆಯಿಂದ, ಉಡಾಫೆಯಿಂದ





ಮಾತಾಡುತ್ತಾನೆಂದರೆ ಇಡೀ ಪ್ರಕರಣದ ಹಿಂದೆ ಇನ್ನೆಂಥದೋ ನಿಗೂಢ ಕಾರಣವಿರಬೇಕು.

ರಾಜ್ಯದ ಗೃಹಮಂತ್ರಿಯೇ ತಿಪ್ಪೆ ಸಾರಿಸ ಹೊರಟ ಯಾವ ನಿಗೂಢ, ಚೌಳಿ ಮಠದ ಗರ್ಭದೊಳಗೆ ಅಡಗಿತ್ತು. ಆರೆಸ್ಸೆಸ್ ಮೂಲದ ಬಿಜೆಪಿಯ ನಾಯಕರೊಬ್ಬರು ತಂದಿಟ್ಟಿದ್ದ ಕೋಟಿಗಟ್ಟಲೆ ಕಪ್ಪು ಹಣದ ಸಮೇತ ಮಾರುತಿ ಸ್ವಾಮಿ ನಾಪತ್ತೆಯಾಗಿದ್ದರೆ? ಅಥವಾ ಮಠದ ಆಸ್ತಿ ಕಬಳಿಸಲು ಬಿಜೆಪಿಯ ನಾಯಕರೊಬ್ಬರು ಕೈಹಾಕಿದ್ದರೆ? ಚೌಳಿ ಮಠ ಬಿಜೆಪಿ ಆಳ್ವಿಕೆಯಲ್ಲಿ ರಾಜಾಶ್ರಯವಿದ್ದ ಮಠವಲ್ಲ. ಕೋಟಿಗಟ್ಟಲೆ ಬೊಕ್ಕಸದ ದುಡ್ಡೂ ಬರಲಿಲ್ಲ. ಸ್ವಾಮಿಗೆ ಸಂಘ ಪರಿವಾರದ ನೆಂಟಸ್ತಿಕೆಯಿದ್ದದ್ದಕ್ಕೂ ಪುರಾವೆಯಿಲ್ಲ.

ಭ್ರಷ್ಟ ಮಠಗಳು, ರಾಜಕಾರಣಿಗಳನ್ನು ಕರೆದು ಸನ್ಮಾನಿಸುವ ಪ್ರಭಾವಿ ಸ್ವಾಮಿಗಳು, ಅವುಗಳಿಗೆ ಸಿಕ್ಕ ಸರ್ಕಾರಿ ಧನಸಹಾಯ, ತತ್ಫಲವಾಗಿ ಬಿಜೆಪಿ ದುರಾಡಳಿತಕ್ಕೆ ಸಿಕ್ಕ ಮಠಮಾನ್ಯಗಳ ಕೃಪಾಶೀರ್ವಾದ ಮತ್ತು ಬಿಜೆಪಿ-ಆರೆಸ್ಸೆಸ್ ಪಾಪದಲ್ಲಿ ಮಠಗಳ ಪಾಲುದಾರಿಕೆಯ ಪಾಪದ ಫಲವೇ ಈಗ ಮೂವರು ಕಿರಿಯ ಸ್ವಾಮಿಗಳ ಆತ್ಮಹತ್ಯೆಯೇ?

ಸಾತ್ವಿಕ ಸ್ವಾಮಿಗಳ ಪವಾಡವೆಂದು, ದೈವಲೀಲೆಯೆಂದು ಪತ್ರಿಕೆ/ಟಿವಿಗಳು ಏನೇ ಬಣ್ಣ ಕಟ್ಟಿ ಹೊರಟರೂ ಅದು ಬಿಜೆಪಿಯ ಧರ್ಮರಕ್ಷಕ ಢೋಂಗಿತನಕ್ಕೆ ದೈವವೇ ಹಾಕಿದ ಬರೆಯಂತೆ, ಕಳಚಿ ಬಿದ್ದ ಮುಖವಾಡದಂತೆ ಕಾಣುವುದಿಲ್ಲವೇ?

ಹಿಂದೂ ಧರ್ಮರಕ್ಷಕರ ಸರ್ಕಾರದಲ್ಲಿ ಹಿಂದೂ ಸ್ವಾಮಿಗಳಿಗೇ ಉಳಿಗಾಲವಿಲ್ಲ!

● ರಾ. ಸೋಮನಾಥ್

ಮಾಯಕೊಂಡ: ಭ್ರಷ್ಟಾಚಾರವೇ ಬಸವರಾಜ ನಾಯ್ಕನನ್ನು ಮುಳುಗಿಸಿತು



ಮಾಯಕೊಂಡ ಮತಕ್ಷೇತ್ರದಲ್ಲಿ ಚುನಾವಣೆಯ ಗದ್ದಲವಿದೆಯಲ್ಲ ಅದು ಅಂತಿಂತಹ ಗದ್ದಲವಲ್ಲ. ಹಾಲಿ ಬಿಜೆಪಿ ಶಾಸಕ ಬಸವರಾಜ ನಾಯ್ಕನನ್ನು ಮಾಜಿ ಮಾಡಿಯೇ ತೀರಬೇಕೆಂದು ಮತದಾರರೇ ಎಬ್ಬಿಸಿರುವ ಗದ್ದಲವದು.

ಕಳೆದ ವಾರ ಬಸವರಾಜ ನಾಯ್ಕ ತನಗೆ ಬಿಜೆಪಿ ಟಿಕೆಟ್ ಸಿಕ್ಕಿದ ಖುಷಿಯಲ್ಲಿ ಮಾಯಕೊಂಡದಲ್ಲಿರುವ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ ಮಾಡಿಸುವ ಮೂಲಕ ತನ್ನ ಚುನಾವಣಾ ಪ್ರಚಾರವನ್ನು ಶುರುಮಾಡುವ ಹುಮ್ಮಸ್ಸಿನಲ್ಲಿದ್ದ. ಆದರೆ ಆತ ಅಲ್ಲಿಗೆ ಹೋದಾಗ ಜನ ಆತನಿಗೆ ಮುತ್ತಿಗೆ ಹಾಕಿದರಲ್ಲದೆ ದೇವಸ್ಥಾನವನ್ನು ಪ್ರವೇಶಿಸದಂತೆ ತಡೆಹಿಡಿದರು. ಅಷ್ಟೇ ಅಲ್ಲ, "ಐದು ವರ್ಷ ಶಾಸಕನಾಗಿ ಕ್ಷೇತ್ರಕ್ಕೆ ಏನು ಮಾಡಿದ್ದೀ ನೀನು? ಕ್ಷೇತ್ರದ ಉದ್ಧಾರಕ್ಕೆಂದು ಬಂದ ನೂರಾರು ಕೋಟಿ ಸರ್ಕಾರದ ಅನುದಾನವೆಲ್ಲ ಎಲ್ಲಿಗೆ ಹೋಯಿತು?" ಎಂದೆಲ್ಲ ಪ್ರಶ್ನಿಸಲಾರಂಭಿಸಿದಾಗ ಬಸವರಾಜ ನಾಯ್ಕ ಬೆವೆತು ಹೋದ. "ನೀನು ಬರೀ ನಿನ್ನ ಜಾತಿಯ ತಾಂಡಾಗಳಿಗಷ್ಟೆ ಶಾಸಕನೋ ಅಥವಾ ಇಡಿ ಕ್ಷೇತ್ರಕ್ಕೆ ಶಾಸಕನೋ?" ಎಂದೂ ಜನ ಪ್ರಶ್ನಿಸಿದಾಗ ಬಸವರಾಜ ನಾಯ್ಕನ ದೇಹವೇ ನಡುಗಿಹೋಯಿತು. ಜನರ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತತ್ತರಿಸಿಹೋದ.

ಇದೆಲ್ಲದರಿಂದಾಗಿ ಬೀರಲಿಂಗೇಶ್ವರನಿಗೆ ಮಂಗಳಾರತಿ ಮಾಡಲು ಆಗದೆ ಬಸವರಾಜ ನಾಯ್ಕ ಮನೆಗೆ ಹಿಂದಿರುಗಿದ. ಈಗ ಆತ ಚುನಾವಣೆಯಲ್ಲಿ ಸೋತು ಮೂಲೆಗುಂಪಾಗುವುದು ಗ್ಯಾರಂಟಿಯಾಗಿದೆ.

2008ರಲ್ಲಿ ಗೆದ್ದು ಬಸವರಾಜ ನಾಯ್ಕ ಶಾಸಕನಾದ ನಂತರ ಮಾಯಕೊಂಡ ಕ್ಷೇತ್ರದ ಅಭಿವೃದ್ಧಿ ಮಾಡಿದ್ದು ಅಷ್ಟರಲ್ಲೇ ಇದೆ. ಆದರೆ ತಾನು ಮಾತ್ರ ತುಂಬಾ ಅಭಿವೃದ್ಧಿ ಆಗಿದ್ದಾನೆ. ಆ ನಿಟ್ಟಿನಲ್ಲಿ ಈತ ಮಾಡಿದ ಅವ್ಯವಹಾರಗಳು ಒಂದೆರಡಲ್ಲ.

ಕಳೆದ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಬಸವರಾಜ ನಾಯ್ಕ ತನ್ನ ಮತ್ತು ತನ್ನ ಪತ್ನಿ ಸೋನಿಬಾಯಿಯ ಹತ್ತಿರ ಇರುವ ಹಣ ಮತ್ತು ಒಡವೆಯ ಒಟ್ಟು ಮೌಲ್ಯ ಕೇವಲ ಹತ್ತು ಲಕ್ಷ ಮತ್ತು ಹತ್ತು ಸಾವಿರ ರೂಪಾಯಿಗಳು ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಅಫಿಡವಿಟ್ಟಿನಲ್ಲಿ ಘೋಷಿಸಿದ್ದ.

ಆದರೆ ಎಂತಹ ಚಮತ್ಕಾರ ಜರುಗಿತೆಂದರೆ ಈತ ಶಾಸಕನಾದ ಹದಿನೆಂಟು ತಿಂಗಳ ನಂತರ ಬರೋಬ್ಬರಿ 15 ಲಕ್ಷ ರೂಪಾಯಿಗಳನ್ನು ಕೊಟ್ಟು ಎರಡು ಬೇರೆ ಬೇರೆ ಕಡೆ ಭೂಮಿ ಖರೀದಿಸಿದ. ಇಷ್ಟೆಲ್ಲ ಹಣ ಎಲ್ಲಿಂದ ಬಂತಪ್ಪ ನಿನಗೆ ಎಂದು ಕೇಳುವವರೇ ಇರಲಿಲ್ಲ.

ಅದೂ ಸಾಲದೆಂಬಂತೆ ಈತ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ತನ್ನ ಮಾಲೀಕತ್ವದ ಶ್ರೀ ರಂಗನಾಥ ವಿದ್ಯಾ ಸಂಸ್ಥೆ ನಡೆಸುವ ಶಾಲೆಯನ್ನು ಉದ್ಧಾರ ಮಾಡಿದನೆ ಹೊರತು ತನ್ನನ್ನು ಗೆಲ್ಲಿಸಿದ್ದ ಮಾಯಕೊಂಡ ಕ್ಷೇತ್ರವನ್ನಲ್ಲ. ಬಸವರಾಜ ನಾಯ್ಕನೇ ಕಾರ್ಯದರ್ಶಿಯಾಗಿರುವ ಈ ಸಂಸ್ಥೆ ನಡೆಸುವ ಶಾಲೆಗೆ ಕ್ರೀಡಾ ಸಾಮಗ್ರಿ ಎಂದೂ, ಬಯಲುರಂಗ ಮಂದಿರಕ್ಕೆಂದು ಹೊಸ ಕೊಠಡಿ ನಿರ್ಮಾಣಕ್ಕೆಂದು ಲಕ್ಷಾಂತರ ರೂಪಾಯಿಗಳನ್ನು ಕಾನೂನುಬಾಹಿರವಾಗಿ ಈತ ಪಡೆದಿದ್ದಾನೆ.



ರವೀಂದ್ರನಾಥ್

ಅತ್ತ ಮಾಯಕೊಂಡದಲ್ಲಿ ಸ್ವೇಚ್ಛಾಚಾರದಲ್ಲಿ ತೊಡಗಿದ್ದ ಬಸವರಾಜ ನಾಯ್ಕ ಬೆಂಗಳೂರಿನಲ್ಲೂ ಆಸ್ತಿ ಮಾಡುವುದರಲ್ಲಿ ಹಿಂದೆ ಬೀಳಲಿಲ್ಲ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ 'ಜಿ' ಕಟಗರಿ ಅಡಿ ಬಸವರಾಜ ನಾಯ್ಕ ಕಡಿಮೆ ದರದಲ್ಲಿ ಒಂದು ಬಿಡಿಎ ಸೈಟನ್ನು ಪಡೆದಿದ್ದ. ಕಾನೂನಿನಪ್ರಕಾರ ಒಮ್ಮೆ ಗಂಡ ಅಥವಾ ಹೆಂಡತಿ ರಾಜ್ಯದ ಯಾವುದೇ ನಗರ ಅಭಿವೃದ್ಧಿ ಮಂಡಲಿಯಿಂದ ಸೈಟನ್ನು ಪಡೆದನಂತರ ಇನ್ಯಾವುದೇ ನಗರ ಪ್ರಾಧಿಕಾರದಿಂದ ಮತ್ತೊಂದು ಸೈಟನ್ನು ಪಡೆಯುವಂತಿಲ್ಲ. ಆದರೆ ಬಸವರಾಜ ನಾಯ್ಕನ ಭೂದಾಹ ಎಂತಹದ್ದೆಂದರೆ ಆತ ಬಿಡಿಎ ಸೈಟ್ ಪಡೆದ ನಂತರವೂ ತನ್ನ ಹೆಂಡತಿ ಸೋನಿಬಾಯಿಯ ಹೆಸರಿಗೆ ದಾವಣಗೆರೆ ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ಮತ್ತೊಂದು ಸೈಟನ್ನು ಲಪಟಾಯಿಸಿದ!

ಇಂತಹ ಬಸವರಾಜ ನಾಯ್ಕ ಈಗ ಮಾಯಕೊಂಡದ ಮತದಾರರಿಗೆ ಬಿಲ್‌ಕುಲ್ ಬೇಡವಾಗಿದ್ದಾನೆ. ಆದರೆ ಕಾಂಗ್ರೆಸ್ ಇದನ್ನು ಲಾಭವಾಗಿ ಪರಿವರ್ತಿಸುವಲ್ಲಿ ಎಡವಿದೆ. ಮಾಜಿ ಶಾಸಕ ಶಿವಮೂರ್ತಿ ನಾಯ್ಕನಿಗೆ ಟಿಕೆಟ್ ನೀಡುವ ಮೂಲಕ ಗೆಲ್ಲಬಹುದಾಗಿದ್ದ ಈ ಕ್ಷೇತ್ರವನ್ನು ಕಾಂಗ್ರೆಸ್ ಚುನಾವಣೆಗೂ ಮುನ್ನವೇ ಸೋತಿದೆ.

ಯಾಕೆಂದರೆ ಈ ಕ್ಷೇತ್ರವೇ ಶಿವಮೂರ್ತಿ ನಾಯ್ಕನನ್ನು ಮರೆತು ಹಲವಾರು ವರ್ಷಗಳಾಗಿವೆ. ಅಜಮಾಸು ಹದಿನೈದು ವರ್ಷಗಳಿಂದ ಕ್ಷೇತ್ರದಿಂದ ಮಂಗಮಾಯವಾಗಿರುವ ಶಿವಮೂರ್ತಿ ನಾಯ್ಕ ಚುನಾವಣೆ ಹತ್ತಿರ ಬಂದಿರುವಾಗ ಮತ್ತೆ ಪ್ರತ್ಯಕ್ಷನಾಗಿದ್ದಾನೆ.

ಲಿಂಗಕಟ್ಟಿದ ಯಡ್ಡಿ

ಯಡಿಯೂರಪ್ಪ ಮಾಯಕೊಂಡ ಮತ್ತು ದಾವಣಗೆರೆ ಉತ್ತರ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಲು ಶಪಥ ಮಾಡಿದ್ದಾರೆ. "ನಾನೇ ಈ ಬಸವರಾಜ ನಾಯ್ಕನನ್ನು ಕರೆದು ಟಿಕೆಟ್ ನೀಡಿದ್ದು. ಅಷ್ಟೇ ಅಲ್ಲ, ಅವನನ್ನು ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷನನ್ನಾಗಿ ಮಾಡಿದೆ. ಈಗ ನನಗೇ ಕೈಕೊಟ್ಟಿದ್ದಾನೆ" ಎಂಬ ಸಿಟ್ಟು ಬಸವರಾಜ ನಾಯ್ಕನ ಮೇಲಿದೆ. ಹಾಗೇ ತರಕಾರಿ ಮಂತ್ರಿ "ರವೀಂದ್ರನಾಥ್ ಅದು ಹೇಗೆ ದಾವಣಗೆರೆ ಉತ್ತರದಿಂದ ಗೆಲ್ಲುತ್ತಾನೆ ನೋಡುತ್ತೇನೆ" ಎಂದು ಯಡ್ಡಿ ಸವಾಲು ಒಡ್ಡಿದ್ದಾರೆ.

ಈ ನಿಟ್ಟಿನಲ್ಲಿ ಯಡ್ಡಿ ಮಾಯಕೊಂಡದಲ್ಲಿ ಒಂದು ಸಂಚು ರೂಪಿಸಿದ್ದಾರೆ. ದಾವಣಗೆರೆ ಡಿ.ದೇವರಾಜ ಅರ[illegible] ಕಾಲೇಜಿನ ಪ್ರಾಂಶುಪಾಲ ಕಂ ಕಾರ್ಯದರ್ಶಿ ಆಗಿರು[illegible] ಲಿಂಗಪ್ಪನನ್ನು ಯಡ್ಡಿ ಕ್ಯಾಚ್ ಮಾಡಿದ್ದಾರೆ. ಈ ಲಿಂಗ[illegible] ತರಕಾರಿ ಮಂತ್ರಿ ರವೀಂದ್ರನಾಥರ ಪರಮಶಿಷ್ಯ. ಜೊತ[illegible] ಕ್ಯಾಪಿಟೇಶನ್ ಕುಳ. ಶಿಕ್ಷಣ ಮಾರಾಟದ ಭರ್ಜರಿ ಗಂ[illegible] ಕಟ್ಟಿಕೊಂಡೇ ಕೆಜೆಪಿ ಟಿಕೆಟ್ ಪಡೆದಿರುವ ಲಿಂಗಪ್ಪ ಯ[illegible] ಪ್ರಭಾವದಿಂದ ಲಿಂಗಾಯತರ ಬೆಂಬಲ ಪಡೆದು ಗೆಲ್ಲು[illegible] ನಿರೀಕ್ಷೆಯಲ್ಲಿದ್ದಾರೆ.

ಪಕ್ಷೇತರನಾಗಿ ಕಲ್ಲು ಗಣಿ ಕ್ವಾರಿಯ ಮಾಲೀಕ ಆನಂ[illegible] ಸ್ಪರ್ಧಿಸುತ್ತಿದ್ದಾರೆ. ಈತ ಈ ಚುನಾವಣೆಯಲ್ಲಿ ಗೆಲ್ಲಲೆಂ[illegible] ಅಜಮಾಸು ಹದಿನೈದು ಕೋಟಿ ರೂಪಾಯಿಗಳನ್ನು ವ[illegible] ಮಾಡಲು ಸಿದ್ಧನಿದ್ದಾನೆಂಬ ಮಾತು ಮಾಯಕೊಂಡದ[illegible] ಹಬ್ಬಿದೆ.

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯ ಬಸವರಾ[illegible] ನಾಯ್ಕ ಸೋಲುವುದು ಗ್ಯಾರಂಟಿ ಆಗಿದೆ. ಪೈಪೋ[illegible] ಇರುವುದು ಕಾಂಗ್ರೆಸ್‌ನ ಶಿವಮೂರ್ತಿ ನಾಯ್ಕ ಮತ್ತು ಕೆಜೆಪಿಯ ಲಿಂಗಪ್ಪರ ನಡುವೆ ಮಾತ್ರ.


● ಟಿ.ಎನ್.ಷಣ್ಮು[illegible]

> **ಬಸವರಾಜ ನಾಯ್ಕನಿಗೆ ಸೋಲ[illegible] ಪತ್ರಿಕೆಗೆ ಗೆಲುವು**
>
> [illegible]

ಶಿಗ್ಗಾಂವಿ: ಕಾಂಗ್ರೆಸ್‌ನ ಯಡವಟ್ಟುಗಳೂ.. ಬೊಮ್ಮಾಯಿಯ ಅಭಿವೃದ್ಧಿಗಳೂ...



ಬಸವರಾಜ್ ಬೊಮ್ಮಾಯಿ



ಮಂಜುನಾಥ್ ಕುನ್ನೂರು



ಆರ್.ಜೆ.ಸಿಂಧೂರ್



ರಾಜು ಕುನ್ನೂರು



ಎಸ್.ಕೆ.ಖಾದ್ರಿ

ಶಿಗ್ಗಾಂವಿಯಲ್ಲಿ ಹಾಲಿ ಶಾಸಕ ಕಮ್ ನೀರಾವರಿ ಸಚಿವ ಬಸವರಾಜ ಬೊಮ್ಮಾಯಿಯ ಗೆಲುವು ಮುಕ್ಕಾಲು ಪಾಲು ಖಾತ್ರಿಯಾದಂತಾಗಿದೆ. ಈ ಗೆಲುವಿಗೆ ಕ್ಷೇತ್ರದಲ್ಲಿ ಬೊಮ್ಮಾಯಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಒಂದು ಕಾರಣವಾದರೆ, ಕಾಂಗ್ರೆಸ್‌ನ ಯಡವಟ್ಟುಗಳು ಮತ್ತೊಂದು ಕಾರಣವಾಗುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಯಡ್ಡಿಯ ಕೆಜೆಪಿ ವರ್ಸಸ್ ಬಿಜೆಪಿಯ ತಿಕ್ಕಾಟದಿಂದ ಕೊನೇ ಗಳಿಗೆಯಲ್ಲಿ ಹೊರಬಂದು ಬಿಜೆಪಿಯಲ್ಲೇ ಉಳಿದ ಬಸವರಾಜ್ ಬೊಮ್ಮಾಯಿಯ ಗೆಲುವಿನ ಓಟ ಈ ಬಾರಿಯೂ ಮುಂದುವರಿಯುವ ಅಂದಾಜಿದೆ.

ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆ ಎನಿಸಿದ್ದ ಶಿಗ್ಗಾಂವಿ, ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರನ್ನು ಅವಿರೋಧವಾಗಿ ಆಯ್ಕೆ ಮಾಡಿ ರಾಜ್ಯದ ಮುಖ್ಯಮಂತ್ರಿಯನ್ನಾಗಿಸಿತ್ತು. ಅಲ್ಲದೆ, ಕಾಂಗ್ರೆಸ್ ಹೊರತುಪಡಿಸಿ ಬೇರಾವ ಪಕ್ಷದ ಅಭ್ಯರ್ಥಿಗಳೂ ಇಲ್ಲಿ ಸತತ ಎರಡು ಬಾರಿ ಆಯ್ಕೆಯಾಗಿಲ್ಲ. ಈ ಸಂಪ್ರದಾಯವನ್ನ ಬೊಮ್ಮಾಯಿ ಮುರಿಯುತ್ತಾರಾ? ಎನ್ನುವುದೇ ದೊಡ್ಡ ಪ್ರಶ್ನೆಯಾಗಿದೆ. ಹಾಗೊಮ್ಮೆ ಬೊಮ್ಮಾಯಿ ಗೆದ್ದರೂ ಅದು ಬಿಜೆಪಿ ಗೆಲುವಿಗಿಂತ ಹೆಚ್ಚಾಗಿ ಬೊಮ್ಮಾಯಿಯ ಗೆಲುವಾಗಿರುತ್ತೆ.

ಬೊಮ್ಮಾಯಿಗೆ ಚುನಾವಣೆಯಲ್ಲಿ ಎದುರಾಳಿಯಾಗಿ ರೋಚು ಕಾಂಗ್ರೆಸ್‌ನ ಮಾಜಿ ಶಾಸಕ ಅಜ್ಜಂಫೀರ ಖಾದ್ರಿ. ಈಗಾಗಲೇ 2004 ಮತ್ತು 2008ರಲ್ಲಿ ಸತತ ಎರಡು ಹೀನಾಯ ಸೋಲುಗಳಿಂದ ಸಂಪೂರ್ಣ ನೆಲಕಚ್ಚಿರುವ ಖಾದ್ರಿಯ ಸ್ಪರ್ಧೆಯೇ ಬೊಮ್ಮಾಯಿ ಗೆಲುವಿನ ಮೊದಲ ಸೂಚನೆಯಂತಿದೆ. 2008ರಲ್ಲಿ ಇದೇ ಬೊಮ್ಮಾಯಿಯ ವಿರುದ್ಧ 12 ಸಾವಿರ ಮತಗಳ ಅಂತರದಿಂದ ಸೋಲು ಕಂಡಿದ ಖಾದ್ರಿಯನ್ನೇ ಕಾಂಗ್ರೆಸ್ ಮತ್ತೆ ಕಣಕ್ಕಿಳಿಸಿರುವುದು ಅಚ್ಚರಿಯೂ ಹೌದು.

1999ರಲ್ಲಿ ಜಾತ್ಯತೀತ ಜನತಾದಳದಿಂದ ಸ್ಪರ್ಧಿಸಿ ಬಿಜೆಪಿಯ ಎಸ್.ಬಿ. ಪಾಟೀಲ ವಿರುದ್ಧ ಅಲ್ಪಮತದಲ್ಲಿ ಗೆಲುವು ಸಾಧಿಸಿ ಶಾಸಕರಾಗಿದ್ದ ಖಾದ್ರಿ ಕಾಂಗ್ರೆಸ್ಸಿನ ಹಿರಿಯ ಮುಖಂಡ ಮಂಜುನಾಥ ಕುನ್ನೂರರ ಹ್ಯಾಟ್ರಿಕ್ ಸಾಧಿಸುವ ಕನಸನ್ನೂ ಭಗ್ನಮಾಡಿದ್ದರು. ಆದರೆ ಅಧಿಕಾರದ ಆಸೆಗಾಗಿ ಆಯ್ಕೆಯಾದ ಒಂದೇ ತಿಂಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಮೂಲಕ ಜೆಡಿಎಸ್ ಪಕ್ಷಕ್ಕೆ ದ್ರೋಹ ಬಗೆದಿದ್ದಲ್ಲದೆ ಕ್ಷೇತ್ರದ ಜನರ ವಿರೋಧಕ್ಕೂ ಗುರಿಯಾಗಿದ್ದರು. ಕೈ ಪಾಳಯಕ್ಕೆ ಎಂಟ್ರಿ ಕೊಡುತ್ತಿದ್ದಂತೆ ತನ್ನ ವಿರುದ್ಧ ಕಾಂಗ್ರೆಸ್ಸಿನಿಂದ ಪರಾಭವಗೊಂಡಿದ್ದ ಮಂಜುನಾಥ ಕುನ್ನೂರರನ್ನು ಪಕ್ಷದಿಂದ ಉಚ್ಚಾಟನೆ ಮಾಡಿಸಿ, ಲಿಂಗಾಯತರ ವಿರೋಧ ಕಟ್ಟಿಕೊಂಡಿದ್ದ ಖಾದ್ರಿ ಸಾಹೇಬರು ಇವತ್ತಿಗೂ ಅದನ್ನು ಸರಿಮಾಡಿಕೊಳ್ಳಲು ಹೆಣಗಾಡುತ್ತಿದ್ದಾರೆ. ಸತತ ಎರಡು ಬಾರಿ ಶಾಸಕರಾಗಿ ಈ ಭಾಗದ ಪ್ರಬಲ ಲಿಂಗಾಯ[illegible] ನಾಯಕ ಎನಿಸಿಕೊಂಡಿದ್ದ ಕುನ್ನೂರ ಹಾಗೂ ಖಾದ್ರಿ ಮಧ್ಯ[illegible] ವೈರತ್ವ ದಶಕ ಕಳೆದರೂ ಸರಿಹೋಗಿಲ್ಲ.

ಇತ್ತೀಚೆಗಷ್ಟೆ ಸ್ಥಳೀಯ ಸಂಸ್ಥೆಯ ಚುನಾವಣೆಯ ಟಿಕೆ[illegible] ಹಂಚಿಕೆ ಸಂಬಂಧ ಹಾವೇರಿಯ ಟಿ.ಬಿ.ಯ[illegible] ಬಹಿರಂಗವಾಗಿ ಕಿತ್ತಾಡುವ ಮೂಲಕ ತಮ್ಮಿಬ್ಬರ ದ್ವೇಷ[illegible] ರಾಜಕಾರಣವನ್ನ ಬೆತ್ತಲಾಗಿಸಿಕೊಂಡಿದ್ದರು. ಇದ[illegible] ಐಸಿಯುನಲ್ಲಿರುವ ಕಾಂಗ್ರೆಸ್ಸನ್ನ ಕತ್ತು ಹಿಸುಕಿ ಕೊಂದಂತಾಗಿದ[illegible] ಇದು ಬೊಮ್ಮಾಯಿಗೆ ಪ್ಲಸ್ ಪಾಯಿಂಟ್ ಆಗುವುದರ[illegible] ಡೌಟೇ ಇಲ್ಲ.

ಬೊಮ್ಮಾಯಿಯ ಎಂಟ್ರಿ

ಖಾದ್ರಿಯ ಕುತಂತ್ರ ರಾಜಕಾರಣಕ್ಕೆ ಕಾಂಗ್ರೆಸ್ಸಿನಿಂ[illegible] ಉಚ್ಚಾಟನೆಗೊಂಡಿದ್ದ ಮಂಜುನಾಥ ಕುನ್ನೂರ ಬಿಜೆಪಿ ಸೇ[illegible] ಧಾರವಾಡ ದಕ್ಷಿಣ ಕ್ಷೇತ್ರದಿಂದ ಸಂಸದರಾಗಿಯೂ[illegible] ಆಯ್ಕೆಯಾಗಿದ್ದರು. ಇವರ ಹಿಂದೆ ಕಾಂಗ್ರೆಸ್‌ನ ಒಂದ[illegible] ದೊಡ್ಡ ಹಿಂಡೇ ಬಿಜೆಪಿಯತ್ತ ಕಾಲ್ಕಿತ್ತಿತ್ತು. ಹಾಳೂರಿಗ[illegible] ಉಳಿದವನೇ ಗೌಡನೆಂಬಂತೆ ಖಾಲಿಯಾಗಿದ್ದ ಕಾಂಗ್ರೆಸ್ಸಿಗ[illegible] ಖಾದ್ರಿಯೇ ಲೀಡರಾಗಿಬಿಟ್ಟ. ಜಿಲ್ಲೆಯಲ್ಲಿ ಸೋತು[illegible] ಸುಣ್ಣವಾಗಿದ್ದ ಮಾಜಿ ಮಂತ್ರಿ ಕೆ.ಬಿ.ಕೋಳಿವಾಡ, ಬಸವರಾ[illegible] ಶಿವಣ್ಣನವರ, ಮನೋಹರ ತಹಶೀಲ್ದಾರರಂತಹವ[illegible] ಸಖ್ಯದಿಂದ ಹಳೇ ಕಾಂಗ್ರೆಸ್ಸಿಗರನ್ನ ಮೂಲೆಗುಂಪು ಮಾಡಿ[illegible] ತನ್ನ ಪಟಾಲಂ ಪಡೆಯನ್ನ ಪಕ್ಷಕ್ಕೆ ತಂದು ಪ್ರತಿಷ್ಠಾಪಿಸಿದ[illegible] ಇದರಿಂದಾಗಿ ಅಳಿದುಳಿದ ಕಾಂಗ್ರೆಸ್ ನಿಷ್ಠರೂ ಬೇ[illegible] ಪಕ್ಷಗಳತ್ತ ಮುಖ ಮಾಡಿದ್ದರು. ಹಾಗಾಗಿ 2004[illegible]

ಧಾರವಾಡ ಗ್ರಾಮೀಣ:

ಸೀಮಾ ಮಸೂತಿ ಮನೆಗೆ, ವಿನಯ ಕುಲಕರ್ಣಿ ವಿಧಾನಸೌಧಕ್ಕೆ

ಉತ್ತರ ಕರ್ನಾಟಕ ಭಾಗದಿಂದ ಗೆದ್ದಿದ್ದ ಏಕೈಕ ಬಿಜೆಪಿ ಮಹಿಳಾ ...ಸಕಿ ಸೀಮಾ ಮಸೂತಿ ತನ್ನ ಅಧಿಕಾರಾವಧಿಯಲ್ಲಿ ಮಾಡಿದ ಭರ್ತಿ ...ಟಿಯಿಂದಲೇ ಖ್ಯಾತಿ ಗಳಿಸಿದಳೇ ಹೊರತು ಜನಪರ ಕಾರ್ಯಗಳಿಂದಲ್ಲ. ...ರವಾಡದ ಗ್ರಾಮೀಣ ಕ್ಷೇತ್ರದಿಂದ ಆಯ್ಕೆಯಾದ ಮರುಕ್ಷಣದಿಂದ ...ರಂಭವಾದ ಈಕೆಯ ಲೂಟಿ ದಂಧೆ ಚುನಾವಣೆ ಘೋಷಣೆಯಾದರೂ ...ತರವೂ ನಿಂತಿಲ್ಲ. ಅಂತಹ ರಣಹಸಿವಿನ ಸೀಮಾ ಮಸೂತಿಯನ್ನು ...ಪಸ್ ಮನೆಗೆ ಕಳುಹಿಸಲು ಈ ಕ್ಷೇತ್ರದ ಮತದಾರರು ಸಜ್ಜಾಗಿದ್ದಾರೆ.

ಒಂದು ಅವಧಿಗೆ ಶಾಸಕರಾಗಿ ಕ್ಷೇತ್ರದಲ್ಲಿ ಹೆಸರು ಗಳಿಸಿದ್ದ ಕಾಂಗ್ರೆಸ್‌ನ ...ನಯ ಕುಲಕರ್ಣಿ ಈ ಬಾರಿ ಸೀಮಾ ಮಸೂತಿ ವಿರುದ್ಧ ಸ್ಪರ್ಧಿಸಲು ...' ಟಿಕೆಟ್ ಪಡೆದಿದ್ದಾರೆ. ಕಳೆದ ಬಾರಿ ಯಡಿಯೂರಪ್ಪನ ಪರ ಅಲೆ ...ತ್ತು ಬಿಜೆಪಿಯ ಹಣಬಲದ ಮುಂದೆ ವಿನಯ್ ಕುಲಕರ್ಣಿ ಕೇವಲ ...26 ಮತಗಳಿಂದ ಸೀಮಾ ಮಸೂತಿ ಎದುರು ಸೋತಿದ್ದರು. ಆದರೆ ಹಾಗೆ ...ೋತವರು ಸುಮ್ಮನೆ ಮನೆಯಲ್ಲಿ ಕೂರಲಿಲ್ಲ. ಕಳೆದ ಐದು ವರ್ಷಗಳ ಕಾಲ ...ವರು ಜನಪರವಾದ ಮತ್ತು ಮಸೂತಿಯ ಭ್ರಷ್ಟಾಚಾರದ ವಿರುದ್ಧ ...ೋರಾಟಗಳಲ್ಲಿ ತೊಡಗುವ ಮೂಲಕ ಅಸಹಾಯಕರ ದನಿಯಾಗಿದ್ದರು. ...ವೆಲ್ಲದರಿಂದಾಗಿ ಚುನಾವಣೆಗೂ ಮುನ್ನವೆ ವಿನಯ್ ಕುಲಕರ್ಣಿ ಗೆದ್ದಿರುವಂತಹ ...ತಾವರಣ ಈ ಕ್ಷೇತ್ರದಲ್ಲಿ ಮೂಡಿದೆ.

ಸೀಮಾಳ ಜಾತಕ


ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದ ಮಧ್ಯಮ ವರ್ಗದ ...ಟುಂಬದಿಂದ ಬಂದ ಸೀಮಾ ಅದೇ ತಾಲೂಕಿನ ಉಪ್ಪಿನ ಬೆಟಗೇರಿ ...ಮದ ಮಸೂತಿ ಫ್ಯಾಮಿಲಿಯ ಅಶೋಕನೊಂದಿಗೆ ವಿವಾಹವಾದಾಗ ಆಕೆ ...ಳಿಕೊಳ್ಳುವಂತಹ ಶ್ರೀಮಂತೆ ಆಗಿರಲಿಲ್ಲ. ಆಗ ಆಕೆಯ ಗಂಡ ಅಶೋಕನ ...ಸರಿಗೆ ಇದ್ದದ್ದು ಕೇವಲ ಐದು ಎಕರೆ ಜಮೀನು ಮಾತ್ರ. ಅಷ್ಟೇ ಅಲ್ಲ ...ಮಾಳನ್ನು ಮದುವೆ ಆದಾಗ ಅಶೋಕನ ಕೈಯಲ್ಲಿ ಹೇಳಿಕೊಳ್ಳುವಂತಹ ...ಸವೂ ಇರಲಿಲ್ಲ. ಉಂಡಾಡಿ ಗುಂಡನಂತಿದ್ದ ಅಶೋಕ ಮಸೂತಿ ಆತ ...ತನೂ ಆಗಿರಲಿಲ್ಲ, ಇತ್ತ ವ್ಯಾಪಾರಿಯೂ ಆಗಿರಲಿಲ್ಲ.

ಈ ಹಿಂದೆ ಅಶೋಕ್ ಫೇಮಸ್ ಗ್ಯಾಂಬ್ಲರ್ ಕೂಡ ಆಗಿದ್ದ. ಒಮ್ಮೆ ...ಸ್ಪೇಟ್ ಅಡ್ಡೆಯ ಪೊಲೀಸರು ರೇಡು ಬಿದ್ದಾಗ ಈತನನ್ನ ಗರಗ್ ಪೊಲೀಸ್ ...ಸ್ಟೇಗೆ ಹಾಕಲಾಗಿತ್ತು. ಅಲ್ಲಿ ಅಶೋಕ್ ಸಾಹೇಬರು ಕೈಯಲ್ಲಿ ಸ್ಲೇಟು ...ಹಿಡುಕೊಂಡಿದ್ದ ಫೋಟೋ ನೇತಾಡುತ್ತಿದ್ದುದು. (ಪತ್ನಿ ಸೀಮಾ ಶಾಸಕಿ ...ದ ನಂತರವೇ ಆ ಫೋಟೋವನ್ನು ತೆಗೆಸಿಹಾಕಲಾಯಿತು.)

12ನೇ ಕ್ಲಾಸ್ ಪಾಸ್ ಆಗಿರುವ ಸೀಮಾ ಮೇಡಂ ಜಿಲ್ಲಾ ಪಂಚಾಯತಿ ...ಲ್‌ನಿಂದ ರಾಜಕಾರಣಕ್ಕೆ ಎಂಟ್ರಿ ಕೊಟ್ಟರು. ಆದರೆ ಮೊದಲ ...ರಿಗೆ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆದ್ದನಂತರ ...ಮಾ ಮೇಡಮ್ ತನ್ನನ್ನು ಬೆಂಬಲಿಸಿದ್ದ ಜನರನ್ನು ಮರೆತು ...ರವಾಡವನ್ನೇ ತನ್ನ ಸ್ವಕ್ಷೇತ್ರವನ್ನಾಗಿ ಮಾಡಿಕೊಂಡು ಭರ್ತಿ ...ೂಲಿಗಿಳಿದುಬಿಟ್ಟಳು. ಪೂರ್ತಿ ಐದು ವರ್ಷ ಜಿಲ್ಲಾ ...ಚಾಯತಿಯಲ್ಲಿ ಗೆಬರಿದ ಹಣವನ್ನು ತೂರಿ ಮತ್ತೆ ಗೆಲ್ಲುತ್ತೇನೆ ...ದು ಗರಗ್ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್ಸಿನ ಗೀತಾ ಪಾಟೀಲ್‌ನ ...ಮುರು ಡಿಪಾಸಿಟ್ ಕಳೆದುಕೊಂಡಳು.

ಶೆಟ್ಟರ್ ಬೆಂಬಲ ಇತ್ತು

ಅಧಿಕಾರವಿದ್ದಾಗ ಅಟ್ಟಹಾಸದಿಂದ ಮೆರೆದು, ಸೋತಾಗ ...ಹಮೇಲೆ ಸೆರಗು ಹೊತ್ತುಕೊಳ್ಳುವುದು ಸೀಮಾಳ ಬಣ್ಣದ


ವಿನಯ ಕುಲಕರ್ಣಿ


ಸೀಮಾ ಮಸೂತಿ

ಮಾತನ್ನು ನಂಬಿದ ಇಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಲೀಸಾಗಿ ಸೀಮಾಳಿಗೆ ಬಿಜೆಪಿಯ ಬಿ ಫಾರ್ಮ್ ಸಿಗುವಂತೆ ನೋಡಿಕೊಂಡರು.

2008ರಲ್ಲಿ ಆಕೆ ಪ್ರಥಮ ಬಾರಿಗೆ ವಿಧಾನಸಭಾ ಚುನಾವಣೆಗೆ ನಿಲ್ಲುವ ಹೊತ್ತಿಗೆ ಗಂಡಹೆಂಡತಿ ಇಬ್ಬರೂ ಲಕ್ಷಗಳ ಲೆಕ್ಕದಲ್ಲಿ ತೂಗುತ್ತಿದ್ದರು. ಆಗ ಸೀಮಾ ಚುನಾವಣೆ ಆಯೋಗಕ್ಕೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ತಮ್ಮಿಬ್ಬರ ಆಸ್ತಿಯ ಮೌಲ್ಯ ಒಟ್ಟು 55 ಲಕ್ಷಕ್ಕಿಂತಲೂ ಹೆಚ್ಚು ಎಂದು ಘೋಷಿಸಿದ್ದಳು. ಇಷ್ಟೆಲ್ಲ ದುಡ್ಡು ಬಂದಿದ್ದು ಎಲ್ಲಿಂದ?

ಆದರೆ ತಾನು ಚುನಾವಣೆಯಲ್ಲಿ ಗೆಲ್ಲುತೇನೆಂಬ ಭರವಸೆಯೇ ಸೀಮಾ ಮಸೂತಿಗೆ ಇರಲಿಲ್ಲ. ಆದ್ದರಿಂದ ಕಾಂಗ್ರೆಸ್‌ನ ವಿನಯ ಕುಲಕರ್ಣಿ ಎಂಬ ಸಜ್ಜನ ರಾಜಕಾರಣಿ ಎದುರು ಪ್ರಚಾರಕ್ಕೂ ಹೋಗದ ಸೀಮಾ ಮನೆಯಲ್ಲಿ ಟೈಂಪಾಸ್ ಮಾಡಿದ್ದೇ ಹೆಚ್ಚು. ಎಲೆಕ್ಷನ್‌ಗೆಂದು ಬಿಜೆಪಿ, ಹಿರಿಯ ನಾಯಕರು, ಗಣಿ ಕಳ್ಳ ಜನಾರ್ದನ ರೆಡ್ಡಿ ಇತ್ಯಾದಿಗಳು ಕೊಟ್ಟ ರೊಕ್ಕವೇ ಎರಡು ಲಕ್ಷಕ್ಕೂ ಹೆಚ್ಚು. ಸೋಲಿನ ಭಯದಲ್ಲಿದ್ದ ಸೀಮಾ ತೋರಿಕೆಗಾಗಿ ಎರಡು ವಾಹನಗಳನ್ನು ಪ್ರಚಾರಕ್ಕೆ ಬಿಟ್ಟು, ಕಣ್ಣಿಗೆ ಬಿದ್ದವರ ಮುಂದೆ ಕೈ ಮುಗಿದು, ಸಾಧ್ಯವಾದಷ್ಟು ಹಣವನ್ನು ತನ್ನ ಬಳಿಯೇ


ಪ್ರಹ್ಲಾದ್ ಜೋಶಿ


ಜಗದೀಶ್ ಶೆಟ್ಟರ್

ಇಟ್ಟುಕೊಳ್ಳಲು ಯೋಚಿಸಿದ್ದರು ಎಂದು ಬಿಜೆಪಿ ವಲಯದಲ್ಲಿ ಆಗಲೇ ಪಿಸುಪಿಸು ಕೇಳಿಬಂದಿತ್ತು.

ಆದರೆ ಧಾರವಾಡದ ಗ್ರಾಮೀಣ ಕ್ಷೇತ್ರದ ನಸೀಬು ಕೆಟ್ಟಿತ್ತು. ಪ್ರಾಮಾಣಿಕವಾಗಿ ಕ್ಷೇತ್ರದಲ್ಲಿ ಅಲ್ಪಸ್ವಲ್ಪ ಕೆಲಸ ಮಾಡಿದ್ದ ವಿನಯ ಕುಲಕರ್ಣಿಯನ್ನು ಯಡಿಯೂರಪ್ಪನ ಜಾತಿರಾಜಕಾರಣ ಸೋಲಿಸಿಬಿಟ್ಟಿತು. ಸೀಮಾ ಗೆದ್ದುಬಿಟ್ಟಳು.

ಸೀಮಾ ಶಾಸಕಿ ಆಗಿದ್ದೇ ತಡ ಆಕೆಯ ಗಂಡ ಅಶೋಕ್ ಧಾರವಾಡ ಗ್ರಾಮೀಣ ಕ್ಷೇತ್ರದಲ್ಲಿ 'ಕಾಸು ಕೊಟ್ಟರೆ ಕಾಮಗಾರಿ' ಎಂಬ ನೂತನ ಸ್ಕೀಮನ್ನು ಪ್ರಾರಂಭಿಸಿದ. ಹೇಳಿಕೇಳಿ ಅಶೋಕನೇ ಗುತ್ತಿಗೆದಾರ. ಆದ್ದರಿಂದ ಇವತ್ತು ಅಶೋಕ್ ಈಗ ಕೊಟ್ಯಗಳ ಲೆಕ್ಕದಲ್ಲಿ ತೂಗುತ್ತಿದ್ದಾನೆ.

ಕಡಿದು ಕಟ್ಟೆ ಹಾಕಿದ್ದು ಏನಿಲ್ಲ

ಶಾಸಕಿಯಾದ ನಂತರ ಸೀಮಾ ಕ್ಷೇತ್ರದಲ್ಲಿ ಹೇಳಿಕೊಳ್ಳುವಂಥ ಯಾವ ಘನಂದಾರಿ ಕೆಲಸವನ್ನೇನೂ ಮಾಡಿಲ್ಲ. ಬದಲಾಗಿ ಇಡೀ ಧಾರವಾಡ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಯಾವ ರಾಜಕಾರಣಿಯೂ ಮಾಡದಷ್ಟು ಟ್ರಾನ್ಸ್‌ಫರ್‌ಗಳನ್ನು ಮಾಡಿಸಿರುವುವೇ ಸೀಮಾ ಮೇಡಂ ಅವರ ಸಾಧನೆ.

ಮುಖ್ಯಮಂತ್ರಿಯೊಬ್ಬ ತನ್ನ ಸರ್ಕಾರದಲ್ಲಿ ಮಂತ್ರಿಗಿರಿ ಹಂಚಿದಂತೆ ಸೀಮಾ ತನ್ನ ಕ್ಷೇತ್ರದಲ್ಲಿ ಇಲಾಖೆಗಳನ್ನು ತನ್ನ ಚೇಲಾಗಳಿಗೆ ಹಂಚಿದರು. ಆ ಚೇಲಾಗಳೆಲ್ಲರೂ ಪರ್ಸೆಂಟೇಜ್ ವ್ಯವಹಾರಕ್ಕೆ ಇಳಿದರು. ಪರಿಣಾಮವಾಗಿ ಕ್ಷೇತ್ರದ ರಸ್ತೆಗಳು ದಾಖಲೆಗಳಲ್ಲಿ ಮಾತ್ರ ಜೆಲ್ಲಿ, ಡಾಂಬರು ಕಂಡವು. ಆಶ್ರಮ ಮನೆಗಳು ಬಡವರಿಗೆ ಹಂಚಿಕೆ ಆಗುವ ಬದಲು ಮಾರಾಟವಾದವು. ಇದನ್ನೆಲ್ಲ ಕಂಡು ಒಮ್ಮೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಖುದ್ದಾಗಿ ಆಕೆಗೆ ಉಗಿದಿದ್ದಲ್ಲದೇ ಆಕೆಯ ಕ್ಷೇತ್ರದಲ್ಲಾಗಿರುವ ಕಾಮಗಾರಿ ಕುರಿತಂತೆ ತನಿಖೆಗೆ ಆದೇಶಿಸಿದ್ದರು.

ಮಾಡಿದ ಆಸ್ತಿಗೆ ಲೆಕ್ಕವಿಲ್ಲ

ಕೇವಲ ಐದು ಎಕರೆಯ ಜಮೀನಿಗೆ ಒಡೆಯನಾಗಿದ್ದ ಅಶೋಕನೊಂದಿಗೆ ಸೀಮಾ ದಾಂಪತ್ಯ ಜೀವನ ಶುರುಮಾಡಿದ್ದರೂ ಆಕೆಯ ಎಂಟು ವರ್ಷಗಳ ರಾಜಕೀಯ ಬದುಕಿನಲ್ಲಿ ಗಳಿಸಿರುವ ಆಸ್ತಿಯ ಮೌಲ್ಯ ಕೋಟ್ಯಾಂತರ ರೂಪಾಯಿಗಳದ್ದು.

ಧಾರವಾಡದ ಮುರುಗಾ ಮಠದ ಹತ್ತಿರ 1.16 ಕೋಟಿ ಕೊಟ್ಟು ಒಂದು ನಿವೇಶನ ಖರೀದಿಸಿದ ಸೀಮಾ ಸದ್ಯ ಆ ಜಾಗೆಯಲ್ಲಿ ನಾಲ್ಕು ಕೋಟಿ ರೂ. ವೆಚ್ಚದಲ್ಲಿ ಭವ್ಯಬಂಗಲೆ ಕಟ್ಟುತ್ತಿದ್ದಾಳೆ. ಅಲ್ಲದೆ, ಧಾರವಾಡದ ಹತ್ತಿಕೊಳ್ಳದ ಹತ್ತಿರ ಆರು ಎಕರೆ, ಕ್ಯಾರಕೊಪ್ಪದ ಹತ್ತಿರ 20 ಎಕರೆ, ಯಾದವಾಡದಲ್ಲಿ ಐದು ಎಕರೆ ಖರೀದಿಸಿದ್ದಾಳೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ 'ಜಿ' ಕೆಟೆಗರಿಯಲ್ಲಿ ಕಡಿಮೆ ದರದಲ್ಲಿ ಬೆಂಗಳೂರಿನಲ್ಲಿ ಸೈಟು ಪಡೆದ ಚೆಡ್ಡಿಗಳಲ್ಲಿ ಸೀಮಾ ಮಸೂಸಿ ಕೂಡ ಒಬ್ಬಾಕೆ.

ಭೂಲೂಟಿಯಲ್ಲೂ ಎತ್ತಿದ ಕೈ

ಧಾರವಾಡ ಹೊರವಲಯದಲ್ಲಿ ಪ್ರಾಕೃತಿಕ ಸಮತೋಲನ ಕಾಯ್ದುಕೊಳ್ಳಲು ಕೇಂದ್ರ ಸರ್ಕಾರದ ನಿರ್ದೇಶನದಂತೆ 1995 ರಿಂದ ರಾಜ್ಯ ಸರ್ಕಾರ 2,000 ಎಕರೆ ಭೂಮಿಯನ್ನು ಮೀಸಲಿಟ್ಟಿತ್ತು. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 4 ಕ್ಕೆ ಹೊಂದಿಕೊಂಡಿದೆ ಈ ಪ್ರದೇಶ. ಜೊತೆಗೆ ಹೆದ್ದಾರಿ ಪಕ್ಕ 100 ಮೀ ಅಗಲದ ಪ್ರದೇಶವನ್ನು ಹಸಿರು ಪಟ್ಟಿ ಎಂದು ಸರ್ಕಾರ ಘೋಷಿಸಿದೆ.

ಈ ಭೂಮಿಯ ಮೇಲೆ ಕಣ್ಣು ಹಾಕಿದ ಸೀಮಾ ಮಸೂತಿ ತನ್ನ ತಮ್ಮ ನಾಗಪ್ಪನ ಪುನೀತ್ ಎಂಟರ್‌ಪ್ರೈಸಸ್‌ಗೆ ಒಂದು ಎಕರೆ ಸರ್ಕಾರಿ ಭೂಮಿ ಕೊಡಬೇಕೆಂದು ಅರ್ಜಿ ಸಲ್ಲಿಸಿದಳು. ಇವಳ ಅರ್ಜಿಯನ್ನು ಕೈಗಾರಿಕಾ ಮಂತ್ರಿ ಮತ್ತು ಭಾರಿ ಭೂಗಳ್ಳ ಮುರುಗೇಶ ನಿರಾಣಿ ರೆಕಮೆಂಡ್ ಮಾಡಿದ. ಜೊತೆಗೆ ಸಂಸದ ಮತ್ತು ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಶಿ ಕೂಡ ಕೆಎಸ್‌ಎಸ್‌ಐಡಿಸಿ ಅಧ್ಯಕ್ಷ ಮಾಜಿ ಮಂತ್ರಿ 'ಬ್ಲೂ ಫಿಲ್ಮ್' ಕುಖ್ಯಾತಿಯ ಸಿ.ಸಿ. ಪಾಟೀಲನಿಗೆ ಶಿಫಾರಸ್ಸು ಮಾಡಿದರು. ಇವರೆಲ್ಲರು ಪ್ರಭಾವ ಬೀರಿದ್ದರಿಂದ ಸೀಮಾ ಅರ್ಜಿ ಸಲ್ಲಿಸಿದ ಮೂರೇ ದಿನಕ್ಕೆ ಭೂಮಿ ಮಂಜೂರಾಯಿತು!

ಸೀಮಾ ಮಸೂತಿ ಅರ್ಜಿಗೆ 02-01-2009 ರಂದು ಒಂದು ಎಕರೆ ಭೂಮಿಯನ್ನು ಮಂಜೂರು (ನಂ. ಐಎಡಿಬಿ/ಅಲಾಟ್/ಸೆಕ್ರೆ/12314/08-09) ಮಾಡಲಾಗಿದೆ. ಕಡತದಲ್ಲಿ ಸೀಮಾ ಮಸೂತಿ ಶಿಫಾರಸ್ಸಿನ ಮೇರೆಗೆ ಎಂದು ನಮೂದಿಸಲಾಗಿದೆ. ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆಯನ್ನು ಸೀಮಾ ಭರ್ತಿಯಾಗಿ ಮಾಡುತ್ತಿದ್ದಾಳೆ. ಈಗ ಆ ಭೂಮಿಯಲ್ಲಿ ಸೀಮಾಳ ತಮ್ಮನ ಹೆಸರಿನಲ್ಲಿ ಒಂದು ಐಷಾರಾಮಿ ಹೋಟೆಲ್ ತಲೆ ಎತ್ತುತ್ತಿದೆ.

ಸೋಲಿನ ಭಯದಲ್ಲಿ

2013ರ ಚುನಾವಣೆ ಘೋಷಣೆಯಾದ ದಿನದಿಂದ ಸೋಲಿನ ಭಯದಲ್ಲಿರುವ ಸೀಮಾ ಜನರ ಮುಂದೆ ಈಗ ಹೊಸರಾಗ ಶುರುಹಚ್ಚಿಕೊಂಡಿದ್ದಾಳೆ. ಕ್ಷೇತ್ರದಲ್ಲಿ ಹಿಂದೆಂದೂ ಆಗದ ಅಭಿವೃದ್ಧಿ ತಾನು ಮಾಡಿದ್ದಾಗಿ ಹೇಳಿಕೊಂಡು ತಿರುಗುತ್ತಿದ್ದಾಳೆ. ಆದರೆ ವಾಸ್ತವವಾಗಿ ಇವಳ ಕಾರೇ ಕ್ಷೇತ್ರದ ರಸ್ತೆಯಲ್ಲಿ ಓಡಾಡಲು ಹೆಣಗಾಡುತ್ತಿದೆ. ಅಷ್ಟರಮಟ್ಟಿಗೆ ರಸ್ತೆ ಸುಧಾರಣೆ ಮಾಡಿರುವ ಈಕೆ ಹೋದಲೆಲ್ಲಾ ಜನರಿಂದ ಉಗಿಸಿಕೊಳ್ಳುತ್ತಿದ್ದಾಳೆ.

ಈ ಬಾರಿ ಧಾರವಾಡದ ಗ್ರಾಮೀಣ ಕ್ಷೇತ್ರದ ಜನ ಸೀಮಾಳನ್ನ ಮನೆ ಮನೆಗೆ ಅಟ್ಟಿ, ಕಾಂಗ್ರೆಸ್‌ನ ವಿನಯ ಕುಲಕರ್ಣಿಯನ್ನು ಚುನಾಯಿಸಿ ವಿಧಾನಸೌಧಕ್ಕೆ ಕಳುಹಿಸುವುದರಲ್ಲಿ ಸಂದೇಹವಿಲ್ಲ. ಜೆಡಿಎಸ್, ಕೆಜೆಪಿ, ಬಿಎಸ್‌ಆರ್ ಪಕ್ಷಗಳ ಪ್ರಭಾವ ಇಲ್ಲಿ ಅಷ್ಟೇನು ಕಾಣುತ್ತಿಲ್ಲ. ಹೀಗಾಗಿ ಸೀಮಾ ಮತ್ತು ವಿನಯ ಕುಲಕರ್ಣಿ ಮಧ್ಯ ನೇರ ಹಣಾಹಣಿ ನಿಶ್ಚಿತ

● ತುರಳಿಕುಪ್ಪಿ ವಿನಯ

...ನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ರಾಜಶೇಖರ್ ಸಿಂಧೂರ್‌ರ ವಿರುದ್ಧ ...ದ್ರಿಗೆ ಮೊದಲ ಸೋಲು ಅಷ್ಟೇ ಸುಲಭದಲ್ಲಿ ದಕ್ಕಿತ್ತು. ಅದು ಶಿಗ್ಗಾಂವಿ ...ಗ್ರೆಸ್ ಅವನತಿಯ ಅಧಿಕೃತ ಸೋಲೂ ಆಗಿತ್ತು!

ಅಣು ಒಪ್ಪಂದದ ಮತದಾನಕ್ಕೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಕಾಂಗ್ರೆಸ್ ...ವಾಗಿ ನಿಂತ ಕುನ್ನೂರು ಮರಳಿ ಬಿಜೆಪಿಯತ್ತ ಮುಖ ಮಾಡಲೇ ಇಲ್ಲ. ...ಪಸ್ಸು ತಮ್ಮ ಮೂಲ ಪಕ್ಷ ಕಾಂಗ್ರೆಸ್ಸಿಗೆ ಮರಳಿದರು. ಆದರೆ ಕುನ್ನೂರು ...ದೆ ಬಿಜೆಪಿ ಸೇರಿದ್ದ ಬಹುಪಾಲು ಲೀಡರ್‌ಗಳು ಅವರ ಹಿಂದೆ ವಾಪಸ್ಸು ...ಗ್ರೆಸ್‌ಗೆ ಹೋಗದೆ ಬಿಜೆಪಿಯಲ್ಲೇ ಉಳಿದದ್ದು ಕಾಂಗ್ರೆಸ್‌ಗೆ ತಟ್ಟಿದ ಎರಡನೇ ...ಘಾತವಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಜೆಡಿಯು ...ರೆದು ಬಿಜೆಪಿ ಸೇರಿದ ಬೊಮ್ಮಾಯಿ ಶಿಗ್ಗಾಂವಿ ಕ್ಷೇತ್ರಕ್ಕೆ ಎಂಟ್ರಿ ಕೊಡುತ್ತಿದ್ದಂತೆ ...ವ ಕಳೆದುಕೊಂಡಿದ್ದ ಬಿಜೆಪಿಗೆ ಉಸಿರು ಸಿಕ್ಕಂತಾಯಿತು. ಖಾದ್ರಿಯಿಂದಾಗಿ ...ಗ್ರೆಸ್‌ಅನ್ನು ವಿರೋಧಿಸುತ್ತಿದ್ದ ಪ್ರಭಾವಿ ಜಾತಿಯ ಲಿಂಗಾಯತರಿಗೆ ...ಸದೊಬ್ಬ ನಾಯಕನೂ ದೊರಕಿದಂತಾಗಿತ್ತು. ವಿಧಾನ ಪರಿಷತ್ ...ಸ್ಯರಾಗಿದ್ದಾಗ ತಮ್ಮ ಬಹುಪಾಲು ಅನುದಾನವನ್ನ ಇದೇ ಕ್ಷೇತ್ರಕ್ಕೆ ಧಾರೆ ...ರೆದಿದ್ದ ಬೊಮ್ಮಾಯಿ ಇಲ್ಲಿಯ ಜನರಿಗೂ ಅಷ್ಟೇ ಚಿರಪರಿಚಿತರಾಗಿದ್ದರು. ...ಲ್ಲವು 2008ರ ಚುನಾವಣೆಯಲ್ಲಿ ಸ್ಪಷ್ಟವಾಗಿ ವರ್ಕ್‌ಔಟ್ ಆಗಿದ್ದವು. ...ದ್ರಿಗೆ ಮಣ್ಣುಮುಕ್ಕಿಸಿದ ಬೊಮ್ಮಾಯಿ ತಮ್ಮ ಮೊದಲ ಜಯವನ್ನು ...ಖಲಿಸಿದ್ದರು.

...ಂಗ್ರೆಸ್‌ನ ಬಂಡಾಯ, ಬೊಮ್ಮಾಯಿಯ ಜಯ?

ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿಯಾಗಿದ್ದ ...ಜಿ ಸಂಸದ ಮಂಜುನಾಥ ಕುನ್ನೂರರಿಗೆ ಬಿಜೆಪಿಯ ಬೊಮ್ಮಾಯಿಯನ್ನ ...ಳಿಸುವುದಕ್ಕಿಂತ ಸ್ವಪಕ್ಷದ ಎದುರಾಳಿ ಖಾದ್ರಿಯನ್ನು ಮೂಲೆಗುಂಪು ...ಡುವುದೇ ಮುಖ್ಯ ಉದ್ದೇಶವಾಗಿದೆ. ಅದಕ್ಕಾಗಿ ತಮ್ಮ ಪುತ್ರ ರಾಜು ...ನ್ನೂರರನ್ನ ವಿಧಾನಸಭಾ ಚುನಾವಣೆಯ ಕಣಕ್ಕಿಳಿಸಬೇಕೆಂದು ಕಳೆದೆರಡು ...ರ್ಷದಿಂದ ತಯಾರಿ ಶುರು ಮಾಡಿಕೊಂಡಿದ್ದರು. ಯುವ ಕಾಂಗ್ರೆಸ್ ...ನಾವಣೆಯಲ್ಲೂ ಯುವಕರನ್ನು ಒಂದುಗೂಡಿಸಿ ಮೂರು ಸಾವಿರಕ್ಕೂ ...ಸದಸ್ಯತ್ವ ಮಾಡಿಸುವ ಮೂಲಕ ಟಿಕೆಟ್‌ಗೆ ಅರ್ಹನಾಗಿ ಸಿದ್ದು ತೊಡೆದಿದ್ದರು. ...ಪಟ್ಟದಲ್ಲಿ ಆಯ್ಕೆಯಾಗಿದ್ದ ರಾಜು, ರಾಜ್ಯ ಸಮಿತಿಯಲ್ಲೂ ಮೂರನೇ ...ಕ್ಕೆ ಚುನಾಯಿತರಾಗಿ ಸ್ಥಾನವನ್ನು ಪುದ್ದೆ ಗಿಟ್ಟಿಸಿಕೊಂಡಿದ್ದರು. ಆದರೆ, ...ದಾಖಲೆಯೊಂದನ್ನ ಸೃಷ್ಟಿಸಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆನ್ನುವ ...ಣದಿಂದ ರಾಜು ಕುನ್ನೂರನ್ನು ಹುದ್ದೆಯಿಂದ ವಜಾ ಮಾಡಿದರು.

ಇದರ ಹಿಂದೆ ಖಾದ್ರಿಯ ಕೈವಾಡವಿದೆ ಎಂತಲೇ ಗುಲ್ಲಾಗಿದೆ. ಈ ಕುತಂತ್ರ ರಾಜಕಾರಣಕ್ಕೆ ತಕ್ಕ ಉತ್ತರ ಕೊಡಲು ಕುನ್ನೂರು ಫ್ಯಾಮಿಲಿ ಸಜ್ಜಾಗಿತ್ತು. ಅಪ್ಪ ಇಲ್ಲವೇ ಮಗ ಇಬ್ಬರಲ್ಲಿ ಒಬ್ಬರಾದರೂ ಬಿ ಫಾರ್ಮ್ ದಕ್ಕಿಸಿಕೊಂಡು ಖಾದ್ರಿಯ ಖೇಲ್ ಖತಮ್ ಮಾಡಲು ಸಜ್ಜಾಗಿದ್ದರು. ಆದರೆ, ಕಾಂಗ್ರೆಸ್ಸ್ ಹೈಕಮಾಂಡ್ ಮಂಜುನಾಥ ಕುನ್ನೂರರನ್ನು ಧಾರವಾಡದ ಲೋಕಸಭಾ ಕ್ಷೇತ್ರಕ್ಕೆ ಕಣಕ್ಕಿಳಿಸುವ ಇರಾದೆಯಿಂದ ಬಿ ಫಾರ್ಮ್ ನಿರಾಕರಿಸಿದೆ. ಇದು ಕುನ್ನೂರು ಕುಟುಂಬಕ್ಕೆ ರಾಜಕೀಯವಾಗಿ ಯಾವ ಸೂಚನೆ ನೀಡುತ್ತದೋ ಏನೋ.. ಆದರೆ, ಖಾದ್ರಿಯನ್ನ ರಾಜಕೀಯವಾಗಿ ಮೂಲೆಗುಂಪು ಮಾಡಬೇಕೆಂದು ಪ್ರಯತ್ನಿಸುತ್ತಿದ್ದ ಅನೇಕರಿಗೆ ನಿರಾಸೆಯಾಗಿರುವುದಂತೂ ಸತ್ಯ.

ಕಾಂಗ್ರೆಸ್ ಒಳಗಿನ ಕಚ್ಚಾಟ ಬೊಮ್ಮಾಯಿಗೆ ಲಾಭದಾಯಕವಾಗೇ ಇದೆ. ಕಾಂಗ್ರೆಸ್‌ನ ಒಂದೊಂದೇ ತಲೆಗಳು ಬೊಮ್ಮಾಯಿ ಅಂಗಳದಲ್ಲಿ ಒಂದೊಂದಾಗಿ ಕಾಣಿಸಿಕೊಳ್ಳುತ್ತಿರುವುದು ಇದೇ ಕಾರಣಕ್ಕೆ. ಹೀಗಾಗಿ ಮಾಜಿ ಸಂಸದ ಮಂಜುನಾಥ ಕುನ್ನೂರು ಚುನಾವಣೆಯ ಕಣಕ್ಕೆ ಇಳಿಯದಿದ್ದರೂ, ಅವರು ಕೈಗೊಳ್ಳುವ ನಿಲುವು ಮಾತ್ರ ಅಖಾಡದ ಚಿತ್ರಣವನ್ನೇ ಬದಲಿಸಲಿದೆ.

ಇನ್ನು ಕಾಂಗ್ರೆಸ್‌ನ ಇಂತಹ ಯಡವಟ್ಟುಗಳು ಮಾತ್ರವಲ್ಲದೆ ಕ್ಷೇತ್ರದಲ್ಲಿ ಬೊಮ್ಮಾಯಿ ಕೈಗೊಂಡ ಅಭಿವೃದ್ಧಿ ಕಾರ್ಯಗಳೂ ಈ ಚುನಾವಣೆಯಲ್ಲಿ ಪ್ರಮುಖ ಅಸ್ತ್ರಗಳಾಗಿವೆ. ನೀರಾವರಿಯ ಕಲ್ಪನೆಯನ್ನೂ ಊಹಿಸಿಕೊಳ್ಳದ ಈ ಕ್ಷೇತ್ರದಲ್ಲಿ 250 ಕೋಟಿ ರೂ. ವೆಚ್ಚದ 24 ಸಾವಿರ ಎಕರೆ ಭೂಮಿಗೆ ನೀರುಣಿಸುವ ತುಂತುರು ನೀರಾವರಿಯನ್ನ ಒಂದೇ ಅವಧಿಯಲ್ಲಿ ಸಾಕಾರಗೊಳಿಸಿದ್ದೇ ಬೊಮ್ಮಾಯಿಯ ಪ್ಲಸ್ ಪಾಯಿಂಟ್. ಇದು ಕೃಷಿ ಅವಲಂಬಿತ ಶಿಗ್ಗಾಂವಿ ಸವಣೂರು ತಾಲೂಕಿನ ಜನರಲ್ಲಿ ಬೊಮ್ಮಾಯಿಯತ್ತ ಒಲವು ಮೂಡಿಸಿದೆ.

ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ನೇರ ಹಣಾಹಣಿ ಬಿಟ್ಟರೆ ಬೇರೆ ಪಕ್ಷದ ಅಭ್ಯರ್ಥಿಗಳು ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ಇತ್ತ ಇದು ತನ್ನ ಕಟ್ಟಕಡೆಯ ಹೋರಾಟವಾಗಬಹುದೆನ್ನುವ ಭೀತಿಗೆ ಬಿದ್ದ ಕಾಂಗ್ರೆಸ್ಸಿನ ಖಾದ್ರಿ ದಿನಕ್ಕೊಂದು ಡ್ರಾಮಾ ಶುರು ಮಾಡಿದ್ದಾನೆ. ಜನರಿಂದ ದೇಣಿಗೆ ಪಡೆದು ಚುನಾವಣೆ ಎದುರಿಸುವ ಸೀನ್ ಕ್ರಿಯೇಟ್ ಮಾಡುತ್ತಿದ್ದಾನೆ. ಆಂತರಿಕ ವೈಷಮ್ಯ, ಜಾತಿ ಸಮೀಕರಣದ ಮುಂದೆ ಇದೆಲ್ಲ ವರ್ಕ್‌ಔಟ್ ಆಗುವ ಸಾಧ್ಯತೆ ತುಂಬಾ ಕಡಿಮೆ.

● ವರದಿಗಾರ


ಜಮಖಂಡಿ: ಕಾಂಗ್ರೆಸ್‌ನಲ್ಲಿ ಭುಗಿಲೆದ್ದ ಬಂಡಾಯ



ಮುರುಗೇಶ್ ನಿರಾಣಿ



ಸಿದ್ದು ನ್ಯಾಮಗೌಡ



ಶ್ರೀಕಾಂತ್ ಕುಲಕರ್ಣಿ

ಸ್ವತಂತ್ರ ಭಾರತದಲ್ಲಿ ಮೊಟ್ಟಮೊದಲು ವಿಲೀನಗೊಂಡಿದ್ದು ಜಮಖಂಡಿ ಸಂಸ್ಥಾನ. ಇಲ್ಲಿನ ಜನ ಅತ್ಯಂತ ಸಜ್ಜನರು. ಆದ್ದರಿಂದ ಅವರು ಸದಾ ಜಾತಿ ಬಲ, ತೋಳ್ಬಲ, ಹಣಬಲವನ್ನು ವಿರೋಧಿಸಿಕೊಂಡು ಬಂದಿದ್ದಾರೆ. ಆದರೂ ಇಮ್ಮು ಜಮಖಂಡಿ ಮತಕ್ಷೇತ್ರದಲ್ಲಿ ಚುನಾವಣೆಯ ಕಾವು ಮುಗಿಲು ಮುಟ್ಟಿದ್ದು ಜಾತಿ ಮತ್ತು ಹಣದ ಮದ ಎಲ್ಲೆಡೆ ತಾಂಡವವಾಡುತ್ತಿವೆ.

ಬಿಜೆಪಿಯಿಂದ ಹಾಲಿ ಶಾಸಕ ಶ್ರೀಕಾಂತ ಕುಲಕರ್ಣಿ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್ ತನ್ನ ಅಧಿಕೃತ ಅಭ್ಯರ್ಥಿಯಾಗಿ ಮಾಜಿ ಕೇಂದ್ರ ಸಚಿವ ಸಿದ್ದು ನ್ಯಾಮಗೌಡ ಎಂಬ ಸಕ್ಕರೆ ಕುಳನನ್ನು ಘೋಷಿಸಿದೆ. ಆದರೆ ಸಿದ್ದು ನ್ಯಾಮಗೌಡರ ವಿರುದ್ಧ ಶ್ರೀಕಾಂತ ಕುಲಕರ್ಣಿ ಯುದ್ಧ ಸಾರುವ ಮುನ್ನವೇ ಕಾಂಗ್ರೆಸ್ ಪಕ್ಷದಲ್ಲಿ ಸಿದ್ದು ವಿರುದ್ಧ ತೀವ್ರ ಬಂಡಾಯವೆದ್ದಿದೆ.

ಕಾಲ್ತೆಗೆದ ನಿರಾಣಿ

ಸ್ವಕ್ಷೇತ್ರ ಬೀಳಗಿಯಲ್ಲಿ ಸೋಲುವ ಭೀತಿಯಿಂದ ಜಮಖಂಡಿಗೆ ಎಂಟ್ರಿ ಕೊಡಲು ದೈತ್ಯ ಸಕ್ಕರೆ ಕುಳ ಮುರುಗೇಶ್ ನಿರಾಣಿ ಯತ್ನಿಸಿದ್ದರು. ಕೆಜೆಪಿ ಅಥವಾ ಬಿಜೆಪಿ ಅಭ್ಯರ್ಥಿಯಾಗಿ ಜಮಖಂಡಿಯಿಂದ ಸ್ಪರ್ಧಿಸುವುದಾಗಿ ಹೇಳಿದ್ದ ನಿರಾಣಿ ಭಾರೀ ಪ್ರಮಾಣದಲ್ಲಿ ಹಣ ಖರ್ಚು ಮಾಡಿ ಪ್ರಚಾರವನ್ನೂ ಕೈಗೊಂಡಿದ್ದರು. ಸ್ಥಳೀಯ ನಗರ ಹಾಗು ಗ್ರಾಮೀಣ ಭಾಗದ ಮುಖಂಡರನ್ನು ಸಂಪರ್ಕಿಸಿ ಅವರು ಖರೀದಿಸುವ ಮಟ್ಟಿಗೂ ಇಳಿದಿದ್ದರು. ಜೊತೆಗೆ ಕ್ರಿಕೆಟ್ ಟೂರ್ನಮೆಂಟ್, ಯೋಗ ಶಿಬಿರಗಳು, ಸಿಕ್ಕಸಿಕ್ಕಲ್ಲಿ ಕಾರ್ಯಕ್ರಮಗಳು ಇತ್ಯಾದಿಗಳಿಗೆ ಹಣ ಸುರಿದಿದ್ದರು. ಇದೆಲ್ಲದರಿಂದ ಇತರೆ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳ ಮುಖದಲ್ಲಿ ಸೋಲಿನ ಛಾಯೆ ಕಾಣಿಸಿಕೊಂಡಿತ್ತು.

ಎಷ್ಟರಮಟ್ಟಿಗೆಂದರೆ ಸ್ವತಃ ಬಿಜೆಪಿಯ ಶ್ರೀಕಾಂತ್ ಕುಲಕರ್ಣಿ ನಿರಾಣಿ ವಿರುದ್ಧ ಜಮಖಂಡಿಯಲ್ಲಿ ಸೋಲುತ್ತೇನೆಂದು ಭಾವಿಸಿ ತನಗೆ ಬೀಳಗಿಗೆ ಟಿಕೆಟ್ ಕೊಟ್ಟರೆ ಜಮಖಂಡಿ ಕ್ಷೇತ್ರ ಬಿಟ್ಟುಕೊಡುವ ಮಾತನಾಡಿದ್ದರು. ಸದ್ಯ ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇದ್ದರೂ ಸ್ಥಳೀಯ ನಾಯಕರು ಜಮಖಂಡಿಯಲ್ಲಿ ಸೋಲು ತಮಗೆ ಕಟ್ಟಿಟ್ಟ ಭುತ್ತಿ ಎಂದು ಭಾವಿಸಿದ್ದರು.

ಆದರೆ ಒಂದು ಸತ್ಯ ನಿರಾಣಿಗೆ ಬಹಳ ತಡವಾಗಿ ಅರ್ಥವಾಗಿತ್ತು. ಅದೇನೆಂದರೆ ಇಲ್ಲಿನ ಯಾವ ಚುನಾವಣೆಯಲ್ಲೂ ಮತದಾರ ಹಣ ಬಲಕ್ಕಾಗಲಿ, ತೋಳ್ಬಲಕ್ಕೆ ಮರುಳಾಗಿಲ್ಲ; ನಿರಾಣಿಯಂತವರ ಅರ್ಭಟ ಇಲ್ಲಿ ಗೆದ್ದಿಲ್ಲ; ಜಾತಿರಾಜಕಾರಣ ಕೂಡ ಈ ಕ್ಷೇತ್ರದಲ್ಲಿ ವರ್ಕ್ ಔಟ್ ಆಗಿಲ್ಲ.

ಇದಕ್ಕೆ ಹಲವಾರು ಉದಾಹರಣೆಗಳಿವೆ. ಮಾಜಿ ಉಪರಾಷ್ಟ್ರಪತಿ ಬಿ.ಡಿ.ಜತ್ತಿಯವರನ್ನು ಹೊರತುಪಡಿಸಿದರೆ ಈ ಕ್ಷೇತ್ರದಿಂದ ಗೆದ್ದು ಬಂದವರೆಲ್ಲ ಜಾತಿ ಹಾಗು ಹಣಬಲ ಇಲ್ಲದವರೆ. 1972ರಲ್ಲಿ ಎ.ಜಿ.ದೇಸಾಯಿ ಎಂಬ ರೊಕ್ಕಸ್ಥ ಸಾಹುಕಾರನನ್ನು ಪಿ.ಎಂ.ಬಾಂಗಿ ಎಂಬ ಸಾಮಾನ್ಯ ಹಾಗು ಜನಪರ ವ್ಯಕ್ತಿ ಸೋಲಿಸಿದ್ದರು. 1978ರಲ್ಲಿ ಕಾಂಗ್ರೆಸ್‌ನಿಂದ ಗೆದ್ದ ವಿ.ವಿ.ಪತ್ತಾರ ಕೂಡ ಸಾಮಾನ್ಯ ಕುಟುಂಬದವರು. ನಂತರ 1983ರಲ್ಲಿ ಜಿ.ಎಸ್.ಬಾಗಲಕೋಟ ಎಂಬ ಸಭ್ಯ ಹಾಗು ಸರಳ ವ್ಯಕ್ತಿ ಬಿ.ಡಿ.ಜತ್ತಿಯವರ ಪುತ್ರ ದಾನಪ್ಪ ಜತ್ತಿಯವರನ್ನೇ ಸೋಲಿಸಿದ್ದರು. ನಂತರ ಮೂರು ಚುನಾವಣೆಗಳಲ್ಲಿ ಸತತ ರಾಮಣ್ಣ ಕಲೂತಿ ಗೆದ್ದು ಬಂದರು. ಇವರೂ ಅತೀಸಾಮಾನ್ಯ ಮನೆತನದಿಂದ ಬಂದವರು. ಈಗಲೂ ಸಹ ಇವರು ಸ್ಕೂಟರ್ ಮೇಲೆ ತಿರುಗುತ್ತಾರೆ. ನಂತರ ಇವರನ್ನು ಸೋಲಿಸಿದ ಸಿದ್ದು ಸವದಿ ಸಾಮಾನ್ಯ ವ್ಯಾಪಾರಸ್ಥ ಆಗಿದ್ದವರು. ಇವರ ನಂತರ ಗೆದ್ದಿದ್ದ ಸಿದ್ದು ನ್ಯಾಮಗೌಡ ಆಗ ಸಾಮಾನ್ಯ ಕುಟುಂಬದವರಾಗಿದ್ದರು. ಗೆದ್ದ ನಂತರ ಸಿದ್ದು ನ್ಯಾಮಗೌಡ ಕೇಂದ್ರ ಮಂತ್ರಿ ಆದರಲ್ಲದೆ ಸಕ್ಕರೆ ಉದ್ಯಮಿಯೂ ಆಗುವ ಮೂಲಕ ಅಸಾಮಾನ್ಯ ವ್ಯಕ್ತಿಯಾದರು. ಆಗ ಅವರನ್ನು ಹಣಿದು ಹಾಕಿದ್ದು ಜಾತಿಬಲ ಮತ್ತು ಹಣಬಲ ಎರಡು ಇಲ್ಲದಿದ್ದ ಆರೆಸ್ಸೆಸ್ಸಿನ ಕಾರ್ಯಕರ್ತ ಶ್ರೀಕಾಂತ ಕುಲಕರ್ಣಿ.

ಈ ಇತಿಹಾಸವನ್ನು ಅರ್ಥಮಾಡಿಕೊಂಡ ನಿರಾಣಿ ಹಳೆ ಗಂಡನ ಪಾದವೇ ಗತಿ ಎಂಬಂತೆ ಸ್ವಕ್ಷೇತ್ರ ಬೀಳಗಿಗೆ ಮರಳಿದರಲ್ಲದೆ ಬಿಜೆಪಿಯಲ್ಲೇ ಉಳಿಯಲು ನಿರ್ಧರಿಸಿದ್ದಾರೆ.

ಕುಲಕರ್ಣಿಗೂ ಗೆಲ್ಲುವ ಭರವಸೆ ಇಲ್ಲ

ಕಳೆದ ಸಾರಿ ಬಿಜೆಪಿ ಪರವಾಗಿದ್ದ ಗಾಳಿ, ಸಿದ್ದು ನ್ಯಾಮಗೌಡರ ರೈತ ವಿರೋಧಿ ಧೋರಣೆ, ಹೆಚ್ಚಾಗಿದ್ದ ಸಂಘ ಪರಿವಾರದ ಚಟುವಟಿಕೆ - ಇವೆಲ್ಲ ಜೊತೆಗೂಡಿ ಶ್ರೀಕಾಂತ ಕುಲಕರ್ಣಿ ಎಂಬ ಬ್ರಾಹ್ಮಣನನ್ನು ಗೆಲ್ಲಿಸಿದ್ದರು.

ಆದರೆ ಈ ಸಾರಿ ಅಂತಹ ಯಾವ ಅಂಶಗಳೂ ಅವ
ಬೆಂಬಲಕ್ಕೆ ಇಲ್ಲ, ಈಗ ಬಿಜೆಪಿಯ ಹೆಸರು ಎತ್ತಿದ
ಜನ ಉರಿದು ಬೀಳುತ್ತಿದ್ದಾರೆ. ಅಷ್ಟರಮಟ್ಟಿಗೆ ಬಿಜೆಪಿ
ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅರಾಜಕತೆ ಮತದಾರರ
ಅಸಹ್ಯ ಹುಟ್ಟಿಸಿವೆ. ಇನ್ನು ಭಾರತ ಮಾತೆಯ 'ಸೇವೆ'ಯನ
ಕೈಬಿಟ್ಟಿರುವ ಇಲ್ಲಿನ ಆರೆಸ್ಸಿಗರು ಗುತ್ತಿಗೆ, ಕಮೀಷನ
ಎಂದೆಲ್ಲಾ ಜನರನ್ನು 'ಶೇವ್' ಮಾಡುತ್ತಿದ್ದಾರೆ. ಸ್ವತಃ
ಶ್ರೀಕಾಂತ್ ಕುಲಕರ್ಣಿ ಕೂಡ ತಮ್ಮ ಮಕ್ಕಳನ್ನು ಮುಂ
ಬಿಟ್ಟು ಸಾಕಷ್ಟು ದುಡ್ಡು ಮಾಡಿಕೊಂಡಿದ್ದಾರೆಂಬ ಆರೋ
ಕೇಳಿಬರುತ್ತಿದೆ. ಇನ್ನೂ ಜಾತಿಬೆಂಬಲದ ಲೆಕ್ಕಕ್ಕೆ ಹೋದ
ಅವರ ಬ್ರಾಹ್ಮಣರ ಜನಸಂಖ್ಯೆ 5000ರನ್ನೂ ದಾಟುವುದಿಲ್ಲ
ಇವೆಲ್ಲ ಕಾರಣಗಳಿಗಾಗಿ ಸ್ವತಃ ಶ್ರೀಕಾಂತ್ ಕುಲಕರ್ಣಿಗು
ಗೆಲ್ಲುವ ಭರವಸೆ ಇಲ್ಲ.

ಭುಗಿಲೆದ್ದ ಕಾಂಗ್ರೆಸ್ ಬಂಡಾಯ

ಜನರಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ
ಮಡುಗಟ್ಟಿ ಕಾಂಗ್ರೆಸ್ ಪರವಾದ ಅಲೆ ಇದ್ದರೂ ಸ್ಥಳೀಯ
ಕಾಂಗ್ರೆಸ್ ನಾಯಕರು ಅದನ್ನು ಸರಿಯಾಗಿ
ಉಪಯೋಗಿಸಿಕೊಳ್ಳುತ್ತಿಲ್ಲ.

ಈ ಬಾರಿಯ ಕಾಂಗ್ರೆಸ್ ಟಿಕೆಟ್‌ಗಾಗಿ ಸಿದ
ನ್ಯಾಮಗೌಡ, ಜಗದೀಶ್ ಗುಡ್ಡಗುಂಟಿ, ರಾಮಣ್ಣ ಕಲೂತಿ
ಸುಶೀಲಕುಮಾರ್ ಬೆಳಗಲಿ, ಎಸ್.ಎಸ್. ದೇವರವ
ಮತ್ತು ಶ್ರೀಶೈಲ ದಳವಾಯಿ ಮಧ್ಯೆ ತೀವ್ರ ಪೈಪೋಟಿ
ಇತ್ತು. ಅವರುಗಳಲ್ಲಿ ನ್ಯಾಮಗೌಡ, ಗುಡಗುಂಟಿ
ಬೆಳಗಲಿಯವರ ಹೆಸರುಗಳು ಅಂತಿಮ ಸುತ್ತಿಗೆ ಹೋಗಿದ್ದವು
ಕೊನೆಗೆ ನ್ಯಾಮಗೌಡರಿಗೆ ಅದೃಷ್ಟ ಖುಲಾಯಿಸಿ ಅವರೀಗ
ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.


ಈ ಹಿಂದೆ ಎರಡು ಸಾರಿ ಸೋತಿರುವ ಸಿದ್ದು
ನ್ಯಾಮಗೌಡ ಹಣಬಲ ಹಾಗು ಜಾತಿಬಲವನ್ನೆ
ನೆಚ್ಚಿಕೊಂಡಿದ್ದಾರೆ. ಇವರಿಗೆ ಟಿಕೆಟ್ ಸಿಕ್ಕಿರುವುದು ಇಲ್ಲಿನ
ಕಾಂಗ್ರೆಸ್ ಪಾಳೆಯದಲ್ಲಿ ಸಾಕಷ್ಟು ಅಸಹನೆಗೆ ಕಾರಣವಾಗಿದೆ

ಕಾಂಗ್ರೆಸ್ ಟಿಕೆಟ್ ಸಿಗದಿದ್ದ ಕಾರಣಕ್ಕೆ ಸಾಕಷ್ಟು
ಹಣಬಲ ಹೊಂದಿರುವ ಜಗದೀಶ್ ಗುಡಗುಂಟಿ ಈಗ
ಕೆಜೆಪಿಯಿಂದ ಸ್ಪರ್ಧಿಸಲು ಹೊರಟಿದ್ದಾರೆ. ಅಷ್ಟೇ ಅಲ್ಲ
ಮತ್ತೊರ್ವ ಕಾಂಗ್ರೆಸ್ ಟಿಕೆಟ್ ವಂಚಿತ ಸುಶೀಲಕುಮಾರ್
ಬೆಳಗಲಿ ಬಂಡಾಯ ಅಭ್ಯರ್ಥಿಯಾಗಿ ಸಿದ್ದು ನ್ಯಾಮಗೌಡರನ್ನು
ಸೋಲಿಸುವ ತಯಾರಿಯಲ್ಲಿದ್ದಾರೆ.

ಇದೆಲ್ಲದರಿಂದ ಜಮಖಂಡಿಯಲ್ಲಿ ಕಾಂಗ್ರೆಸ್ ಸೆಲ್ಫ್
ಗೋಲ್ ಹೊಡೆದುಕೊಳ್ಳುವ ಮೂಲಕ ಬಿಜೆಪಿಯ
ಶ್ರೀಕಾಂತ್ ಕುಲಕರ್ಣಿಯನ್ನು ಗೆಲ್ಲಿಸಿದರೂ ಅಚ್ಚರಿ ಇಲ್ಲ

● ಮಹಾಲಿಂಗಪ್ಪ ಆಲಬಾಳ

ನವಲಗುಂದ: ಮತ್ತೆ ಮುನೇನಕೊಪ್ಪನಿಗೆ ಗೆಲುವು



ರೈತ ಬಂಡಾಯದ ನೆಲವಾದ ನವಲಗುಂದ ಕ್ಷೇತ್ರದಿಂದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರ ಆಪ್ತನಾದ ಹಾಲಿ ಬಿಜೆಪಿ ಶಾಸಕ ಶಂಕರ ಪಾಟೀಲ ಮುನೇನಕೊಪ್ಪ ಮತ್ತೆ ಆಯ್ಕೆಗೊಳ್ಳುವ ಎಲ್ಲ ಲಕ್ಷಣಗಳು ಕಂಡುಬರುತ್ತಿವೆ.

ಹಿಂದೊಮ್ಮೆ ಈ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ ಎನಿಸಿಕೊಂಡಿತ್ತು. ಇದಕ್ಕೆ ಕಾರಣ 1957ರಿಂದ ನಡೆದ ಎಂಟು ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದದ್ದು. ಈ ಕ್ಷೇತ್ರದಲ್ಲಿ ಅಹಿಂದ ಮತಗಳು ಯಾವಾಗಲೂ ಕಾಂಗ್ರೆಸ್‌ಅನ್ನು ಬೆಂಬಲಿಸುತ್ತಾ ಬಂದಿದ್ದಾವೆ. ಲಿಂಗಾಯತರ ಒಳಪಂಗಡಗಳಾದ ಪಂಚಮಶಾಲಿ, ಸಾದರು ಹಾಗು ರೆಡ್ಡಿಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ರೆಡ್ಡಿ ಸಮಾಜ ಕೂಡ ಯಾವಾಗಲೂ ಕಾಂಗ್ರೆಸ್ಸನ್ನು ಬೆಂಬಲಿಸುತ್ತಾ ಬಂದಿತ್ತು. ಇದರೊಂದಿಗೆ ಗಣನೀಯ ಸಂಖ್ಯೆಯಲ್ಲಿರುವ ಕುರುಬ ಸಮುದಾಯ ಹಾಗು ನಿರ್ಣಾಯಕ ಪಾತ್ರ ವಹಿಸುವ ಮುಸ್ಲಿಂರೂ ಕಾಂಗ್ರೆಸ್ ಪರ ಇದ್ದರು.

ಆದರೆ 2004ರಲ್ಲಿ ಕಾಂಗ್ರೆಸ್ ಅನ್ನು ಸೋಲಿಸಿದ ಬಿಜೆಪಿಯ ಡಾ.ಆರ್.ಬಿ.ಶಿರಿಯಣ್ಣವರ ಮತ್ತು 2008ರಲ್ಲಿ ಶಂಕರ ಪಾಟೀಲ ಮುನೇನಕೊಪ್ಪ ಇಲ್ಲಿ ಕಮಲವನ್ನು ಅರಳಿಸಿದ್ದರು. ಇದಕ್ಕೆ ದಾರಿ ಮಾಡಿಕೊಟ್ಟಿದ್ದು ಕೆ.ಎನ್.ಗಡ್ಡಿ. 1994ರಲ್ಲಿ ಬಂಗಾರಪ್ಪನವರ ಕೆಸಿಪಿ (ಕರ್ನಾಟಕ ಕಾಂಗ್ರೆಸ್ ಪಕ್ಷ) ಅಭ್ಯರ್ಥಿಯಾಗಿ ಗೆದ್ದಿದ್ದ ಕೆ.ಎನ್.ಗಡ್ಡಿ ಅನಂತರ ಕಾಂಗ್ರೆಸ್ ಸೇರಿ ಎರಡು ಬಾರಿ ಗೆದ್ದು ಸಚಿವರಾಗಿದ್ದರು.

ಸಚಿವರಾದ ನಂತರ ಗಡ್ಡಿ ತನ್ನದೇ ಜಿನ್ನಿಂಗ ಫ್ಯಾಕ್ಟರಿ ತೆರೆದರಲ್ಲದೆ ರಾಜೀವ ಗಾಂಧಿ ಎಜುಕೇಷನ್ ಟ್ರಸ್ಟ್ ಪ್ರಾರಂಭಿಸಿದರು. ಜೊತೆಗೆ ನೂರಾರು ಎಕರೆ ಪ್ರದೇಶಗಳನ್ನು ಖರೀದಿಸಿದರು. ಇದೆಲ್ಲದರ ನಡುವೆ ಅವರು ಅದೆಷ್ಟು ಬ್ಯುಸಿ ಆದರೆಂದರೆ ತಮ್ಮನ್ನು ಗೆಲ್ಲಿಸಿದ್ದ ಮತದಾರರ ನೆರವಿಗೆ ಬರುವುದನ್ನೇ ಮರೆತರು. ಆ ಕಾರಣಕ್ಕೆ 2004ರಲ್ಲಿ ಇಲ್ಲಿನ ಅಹಿಂದ ಮತದಾರರು ಕುರುಬ ಸಮುದಾಯದ ಗಡ್ಡಿಯನ್ನು ಸೋಲಿಸಿದ್ದರು. ಅಷ್ಟೇ ಅಲ್ಲ, ಅಂದಿನಿಂದ ಇಲ್ಲಿನ ಅಹಿಂದ ಮತಗಳು ಚದುರಿಹೋಗಿ ಕೋಮುವಾದಿ ರಾಜಕಾರಣ ಪ್ರಾರಂಭವಾಯಿತು. ಆ ಕಾರಣಕ್ಕೇ ಅಪ್ಪಟ ಹಿಂದೂತ್ವವಾದಿ ಬಿಜೆಪಿಯ ಶಿರಿಯಣ್ಣವರ ಮತ್ತು ಮುನೇನಕೊಪ್ಪ ಸುಲಭವಾಗಿ ಗೆದ್ದು ಬರಲು ಸಾಧ್ಯವಾಗಿತ್ತು.

ಅದರಲ್ಲೂ 2008ರ ಚುನಾವಣೆಯಲ್ಲಿ ಯಡಿಯೂರಪ್ಪನ ಕಾರಣಕ್ಕೆ ಇಲ್ಲಿನ ಎಲ್ಲಾ ಲಿಂಗಾಯತ ಒಳಪಂಗಡಗಳು ಒಂದಾಗಿ ಬಿಜೆಪಿಯನ್ನು ಬೆಂಬಲಿಸಿದ್ದವು. ಆ ಕಾರಣಕ್ಕೆ ಮುನೇನಕೊಪ್ಪ ಸುಲಭವಾಗಿ ಗೆಲುವು ಸಾಧಿಸಿದ್ದರು.

ಆದರೆ ಈ ಬಾರಿಯ ರಾಜಕೀಯ ಪರಿಸ್ಥಿತಿ ಸ್ವಲ್ಪ ಭಿನ್ನವಾಗಿದೆ. ಇತ್ತೀಚೆಗೆ ನಡೆದ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ನವಲಗುಂದದಲ್ಲಿ ಕಾಂಗ್ರೆಸ್ ಬಹುಮತ ಪಡೆದಿದೆ. ಅದನ್ನು ಮತ್ತು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರ ಜನಪ್ರಿಯತೆ ಎರಡನ್ನೂ ಬಂಡವಾಳವಾಗಿಸಿಕೊಂಡು ಗಡ್ಡಿ ಮತ್ತೆ ಕಾಂಗ್ರೆಸ್‌ನಿಂದ ಅಖಾಡಕ್ಕೆ ಇಳಿಯುತ್ತಿದ್ದಾರೆ.

ಬಿಜೆಪಿ ವತಿಯಿಂದ ಲಿಂಗಾಯತ ಒಳಪಂಗಡ ಪಂಚಮಸಾಲಿಯರು ಮುನೇನಕೊಪ್ಪ ಕಣಕ್ಕಿಳಿಯುವುದು ಖಾತ್ರಿಯಾಗಿದೆ. ಹಾಗೆಯೇ ಜೆಡಿಎಸ್‌ನಿಂದ ರೆಡ್ಡಿ ಸಮುದಾಯದ ಎನ್.ಎಚ್.ಕೋನರೆಡ್ಡಿ ಸ್ಪರ್ಧಿಸುತ್ತಿದ್ದಾರೆ. ಕೆಜೆಪಿಯಿಂದ ಸ್ಪರ್ಧಿಸಲು ಮಾಜಿ ಶಾಸಕ ಶಿರಿಯಣ್ಣವರ ಆಸಕ್ತಿ ತೋರಿದ್ದರು. ಆದರೆ ಅವರೀಗ ರಾಜಕೀಯದಿಂದ ನಿವೃತ್ತಿ ಘೋಷಿಸಿರುವರಿಂದ ಅವರ ಬದಲಾಗಿ ಮುನೇನಕೊಪ್ಪನ ಸಹೋದರ ಸಂಬಂಧಿ ಬೆನ್ನೂರ ಗ್ರಾಮದ ಚಂದ್ರಶೇಖರ ದಾಡಿಬಾಯಿ ಅವರಿಗೆ ಕೆಜೆಪಿ ಟಿಕೆಟ್ ನೀಡಲಾಗಿದೆ. ಇವನ ಸ್ಪರ್ಧೆ ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲದಾಗಿದೆ.


ಈ ಎಲ್ಲಾ ರಾಜಕೀಯ ಲೆಕ್ಕಾಚಾರದಲ್ಲಿ ನೋಡಿದರೆ ಬಿಜೆಪಿಯ ಮುನೇನಕೊಪ್ಪ ರೇಸ್‌ನಲ್ಲಿ ಮುಂದಿದ್ದಾರೆ. ಅಣ್ಣಿಗೇರಿಯನ್ನು ತಾಲ್ಲೂಕಾಗಿ ಮಾಡಿಸಿದ್ದು ಮತ್ತು ಸಾವಿರಾರು ಆಶ್ರಯ ಮನೆಗಳನ್ನು ಮುನೇನಕೊಪ್ಪ ಅವರ ಗೆಲುವಿಗೆ ಪ್ಲಸ್ ಪಾಯಿಂಟ್‌ಗಳಾಗಿವೆ.

● ಹುಬ್ಬಳ್ಳಿಯಾಂವ

ತೇರದಾಳ: ಉಮಾಶ್ರೀ ಗೆಲುವು ಇನ್ನಷ್ಟು ಹತ್ತಿರ

ಸರ್ವಾಧಿಕಾರಿ ಮನೋಭಾವದ, ಒರಟು ನಡೆನುಡಿಯ, ಪಾಳೇಗಾರಿ ಸ್ವಭಾವದ ಬಿಜೆಪಿ ಶಾಸಕ ಸಿದ್ದು ಸವದಿಯನ್ನು ಸೋಲು ಹುಡುಕಿಕೊಂಡು ಬರುತ್ತಿರುವಂತೆ ಕಾಣಿಸುತ್ತಿದೆ.

ತೇರದಾಳ ಮತಕ್ಷೇತ್ರದಲ್ಲಿನ ಬೆಳವಣಿಗೆಗಳನ್ನು ನೋಡಿದರೆ ಸವದಿ ಸೋಲುವುದು ಮತ್ತಷ್ಟು ನಿಕ್ಕಿಯಾಗಿದೆ. ಕಾರಣ ಇಲ್ಲಿನ ಇತ್ತೀಚಿನ ಪ್ರತಿಯೊಂದು ರಾಜಕೀಯ ಬೆಳವಣಿಗೆಗಳು ಉಮಾಶ್ರೀಗೆ ವರವಾಗಿ ಪರಿಣಮಿಸುತ್ತಿದೆ.



ಕೆಲವೇ ವರ್ಷಗಳ ಹಿಂದೆ ಸಿದ್ದು ಸವದಿಯ ಬಲಗೈನಂತಿದ್ದ ತೇರದಾಳ ಪುರಸಭೆ ಮಾಜಿ ಅಧ್ಯಕ್ಷ ಹಾಗು ಪ್ರಬಲ ನಾಯಕ ಬಸವರಾಜ ಬಾಳಿಕಾಯಿ ಈಗ ಕೆಜೆಪಿ ಪಕ್ಷದಿಂದ ಕಣಕ್ಕಿಳಿದಿದ್ದಾರೆ. ಈತನ ಏಕೈಕ ಗುರಿ ಸವದಿಯನ್ನು ಸೋಲಿಸುವುದು. ತೇರದಾಳ ಭಾಗದ ಪ್ರಮುಖ ಲಿಂಗಾಯತ ನಾಯಕರಾದ ಬಾಳಿಕಾಯಿ ಬಹಿರಂಗವಾಗಿಯೇ ಸಿದ್ದು ಸವದಿಯ ವಿರುದ್ಧ ತೊಡೆ ತಟ್ಟಿರುವುದು ಸವದಿಗೆ ಮರ್ಮಾಘಾತ ನೀಡಲಿದೆ.

ಒಂದೆಡೆ ಬಾಳಿಕಾಯಿ ಸವದಿ ವಿರುದ್ಧ ತಿರುಗಿಬಿದ್ದಿದ್ದರೆ ಇನ್ನೊಂದೆಡೆ ಸವದಿಯ ಮತ್ತೊಬ್ಬ ಶಂಕರ ಸೊರಗಾಂವಿ ಕೂಡ ಸೆಡ್ಡು ಹೊಡೆದು ಈಗ ಉಮಾಶ್ರೀ ಪರ ನಿಂತಿದ್ದಾರೆ. ಇದು ಕೂಡ ಸವದಿ ಮೇಲೆ ಬಹಳಷ್ಟು ಪರಿಣಾಮ ಬೀರಲಿದೆ. ಇದಕ್ಕಿಂತ ದೊಡ್ಡ ಆಘಾತವೆಂದರೆ ತೇರದಾಳ ತಾಲ್ಲೂಕು ಕೇಂದ್ರವನ್ನಾಗಿ ಮಾಡದ ಕಾರಣ ಆ ಭಾಗದ ನಗರ ಹಾಗು ಹಳ್ಳಿಗಳ ಜನ ಸಂಪೂರ್ಣವಾಗಿ ಸವದಿ ವಿರುದ್ಧ ಎದ್ದು ನಿಂತಿದ್ದಾರೆ. ಇದು ಸಂಪೂರ್ಣವಾಗಿ
ಸವದಿಯನ್ನು ನಿದ್ದೆಗೆಡಿಸಿದೆ.

ಇತ್ತ ಕಾಂಗ್ರೆಸ್ ಪಾಳೆಯದಲ್ಲೂ ಉಮಾಶ್ರೀಗೆ
ವರವಾಗುವ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿವೆ
ಬಸವರಾಜ ಬಾಳಿಕಾಯಿ ಸವದಿಯನ್ನು ಸೋಲಿಸುವ
ಕಾರಣಕ್ಕಾಗಿ ಭಾರೀ ಪ್ರಮಾಣದಲ್ಲಿ
ಬಿಜೆಪಿ ಮತಗಳಿಗೆ ಕನ್ನ ಹಾಕಿದರೆ
ಇತ್ತೀಚಿನವರೆಗೂ ಟಿಕೆಟ್‌ಗಾಗಿ
ಯತ್ನಿಸುತ್ತಿದ್ದ ನಿವೃತ್ತ ಡಿಜಿಪಿ ಶಂಕರ
ಬಿದರಿಯವರ ಸಹೋದರ
ರಾಜಶೇಖರ್ ಬಿದರಿ ಕೂಡ
ಉಮಾಶ್ರೀ ಪರ ಅಖಾಡಕ್ಕಿಳಿ
ಯಲು ಸಜ್ಜಾಗಿದ್ದಾರೆ. ಇದು
ಉಮಾಶ್ರೀಗೆ ಮತ್ತಷ್ಟು ಬಲ
ತಂದು ಕೊಟ್ಟಿದೆ.

ಆದರೆ ಅವರ ವಿರುದ್ಧ ಕೆಲಸ
ಮಾಡಿದ್ದಕ್ಕಾಗಿ ಕಾಂಗ್ರೆಸ್
ಪಕ್ಷದಿಂದಲೇ ಉಚ್ಚಾಟಿತರಾಗಿರುವ
ಡಾ.ಎಂ.ಎಸ್.ದಾನಿಗೊಂಡ,
ಚಿದಾನಂದ ಕಕಮರಿ, ಮಲ್ಲು
ಖಾನಕಾರ, ಪರಪ್ಪ ಉರಬನ್ನಿವರ,
ಅಜೀತ ಮಗದುಮ್ ಮುಂತಾದವರ ಬಂಡಾಯದ
ಚಟುವಟಿಕೆಗಳತ್ತ ಉಮಾಶ್ರೀ ಅವರು ಗಮನ
ಹರಿಸಬೇಕಿದೆ. ಇಲ್ಲವೆಂದರೆ ಇವರಲ್ಲಿ ಹಲವರು ಬಂಡಾಯ
ಅಭ್ಯರ್ಥಿಗಳಾಗಿ ಕಣಕ್ಕಿಳಿಯುವ ಸಾಧ್ಯತೆಗಳಿವೆ. ಹಾಗಾದರೆ
ಉಮಾಶ್ರೀ ಅವರಿಗೆ ಅಲ್ಪ ಹಿನ್ನಡೆಗೆ ಆಗಬಹುದು.

ಆದರೆ ಸವದಿಗೆ ಬಂದೆರಗುತ್ತಿರುವ ಕಂಟಕಗಳು
ಉಮಾಶ್ರೀಗೆ ವರವಾಗಿ ಪರಿಣಮಿಸಿ ಗೆಲುವು
ಸಲೀಸಾಗುವುದು ಮಾತ್ರ ಸತ್ಯ.

...ಶೇಕಡವಾರು ಸಾಂಸ್ಕೃತಿಕ ರಾಜಕಾರಣ ಮತ್ತು ವಚನಗಳು


...ತ್ತೀಚೆಗೆ ವಚನಗಳ ಬಗ್ಗೆ ಮತ್ತೊಮ್ಮೆ ವಾದ-ವಿವಾದಗಳು ಶುರುವಾಗಿವೆ. ... ಮೂಲಕಾರಣರು ಬಾಲಗಂಗಾಧರ, ಡಂಕಿನ್ ಝಳಕಿ ಮತ್ತು ರಾಜಾರಾಮ ...ಕೆ ಎಂಬ ಮೂವರು ವಿದ್ವಾಂಸರು. ಅವರಿಗೆ ಪರೋಕ್ಷವಾಗಿ ಬೆಂಬಲವಿತ್ತು ...ವಾದ-ವಿವಾದಗಳನ್ನು ಉದ್ಘಾಟಿಸಿದವರು ಎಚ್.ಎಸ್.ಶಿವಪ್ರಕಾಶರು. ಈ ...ವರು ವಿದ್ವಾಂಸರು ವಚನಗಳ ಬಗ್ಗೆ ಕೆಲವೊಂದು ಸಮಾನ ಮನಸ್ಥ ...ಗಳನ್ನು ಹೊಂದಿದ್ದಾರೆ. ಬಾಲಗಂಗಾಧರ ಮತ್ತು ಡಂಕಿನ್ನರು ಚಿಂತನಬಯಲು ... ಪತ್ರಿಕೆಯಲ್ಲಿ ಇತ್ತೀಚೆಗೆ ವಚನಗಳ ಬಗ್ಗೆ ಲೇಖನವನ್ನು ಪ್ರಕಟಿಸಿದ್ದು ...ಲೇಖನದಲ್ಲಿ ಅವರು ಮಂಡಿಸುವ ವಾದಗಳಿಗೂ ಮತ್ತು ರಾಜಾರಾಮ್ ...ಯವರು ತಮ್ಮ ಇತ್ತೀಚಿನ ಲೇಖನದಲ್ಲಿ ("ವಚನ ಚಳವಳಿಗಳ ಸೈದ್ಧಾಂತಿಕ ...ಯ ಕುರಿತು..." (ಪ್ರಜಾವಾಣಿ) ಕೊಟ್ಟಿರುವ ಅಭಿಪ್ರಾಯಗಳಿಗೂ ಅನೇಕ ...ತೆಗಳಿವೆ. ಹಾಗಾಗಿ ಈ ಮೂವರ ವಾದಗಳನ್ನು ಸ್ಥೂಲವಾಗಿ ಹೀಗೆ ... ಮಾಡಬಹುದು: ಅ) ವಚನಸಾಹಿತ್ಯವು ಜಾತಿ ವಿರೋಧಿ ಎಂಬುದು ...ಲ್ಲ, ಆ) ಜಾತಿ ವಿರೋಧಿ ಅಭಿಪ್ರಾಯವು ಪ್ರೊಟೆಸ್ಟಂಟ್/ಪೌರಸ್ತ್ಯ ...ಣನದ ಪೂರ್ವಾಗ್ರಹಗಳಿಂದ ಕೂಡಿರುವಂತದ್ದು, ಇ) ಈ ಪೂರ್ವಾಗ್ರಹಕ್ಕೆ ...ತ್ಯರು ಉಂಟುಮಾಡಿದ ಜ್ಞಾನಧಾರೆಯೇ ಮುಖ್ಯ ಕಾರಣ, ಈ) ವಚನಗಳನ್ನು ...ತೀಯ ಆಧ್ಯಾತ್ಮಿಕತೆಯ ಅಖಂಡತೆಯಲ್ಲಿ ನೋಡಿದರೆ ನಮ್ಮ ...ರ್ವಾಗ್ರಹಗಳು ಪರಿಹಾರವಾಗಿ ಬಿಡುತ್ತವೆ, ಉ) ವಚನಗಳು ಹೊರಸೂಸುವ ...ತ್ಮಿಕತೆಯನ್ನ ನಾವು ಸಾಮಾಜಿಕ ಚಳವಳಿಗಳೆಂದು ತಿಳಿದುಕೊಳ್ಳುವುದು ... ಇದ್ದಾವುದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ನಾವು ಪ್ರೊಟೆಸ್ಟಂಟ್ ...ರ್ವಾಗ್ರಹಗಳಿಂದ ಹೊರಬರಲು ಸಾಧ್ಯವಿಲ್ಲ ಎಂದು ಅವರು ಘೋಷಿಸಿದ್ದಾರೆ. ...ಹತುಶಾಹಿ ಪಾಶ್ಚಾತ್ಯರಿಂದ ಉಂಟಾದ ವಿಚಾರಧಾರೆಗಳು ವಚನಗಳನ್ನು ...ವಿಸಿದವು; ಹಾಗಾಗಿ ವಚನಗಳನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳದೆ, ...ತ್ಯರ ನೆರಳಲ್ಲಿ ಇದ್ದೇವೆ ಎಂದು ಅಭಿಪ್ರಾಯ ಪಡುತ್ತಾರೆ. ಜಾತಿ ಎಂಬುದು ...ಹತುಶಾಹಿ ನಿರ್ಮಿಸಿಕೊಟ್ಟ ವಿಚಾರಧಾರೆ. ಹಾಗಾಗಿ ಆ ವಿಚಾರಧಾರೆಯು ...ರೋಪು ಕೇಂದ್ರಿತವಾದುದು ಮತ್ತು ಈ ವಿಚಾರಧಾರೆಯಿಂದ ವಚನಗಳನ್ನು ...ವಿರೋಧಿ ಎನ್ನುವುದು ಶುದ್ಧ ಚಾರಿತ್ರಿಕ ತಪ್ಪು ಎಂದು ಇವರು ಬಲು ...ಹದಿಂದ ಘೋಷಿಸಿದ್ದಾರೆ. ಈ ಮೂವರಲ್ಲಿ ಸಮಾನವಾಗಿ ಕಾಣುವ ...ಂದು ಅಂಶ "ಶೇಕಡವಾರು" ವಾದ (ಅಂದರೆ ಶೇಕಡ ಇಷ್ಟು ವಚನಗಳು ...ಲ್ಲ ಹೇಳುತ್ತವೆ; ಶೇಕಡ ಅಷ್ಟು ವಚನಗಳು ಅದನ್ನು ಹೇಳುತ್ತವೆ ಎಂಬ ...ಅಂಶಗಳ ವಾದ). ಈ ಮೂವರಲ್ಲಿಯೂ (ಇವರ ಜೊತೆ ಎಚ್.ಎಸ್. ...ಕಾಶರನ್ನು ಸೇರಿಸಬಹುದೇನೋ) "ಏಕತಾನತೆ" ಕಾಣಿಸುತ್ತಿರುವುದರಿಂದ ...ಲ್ಲರನ್ನು ಕುರಿತು ನನ್ನ ಕೆಲವು ವಾದಗಳನ್ನು ಇಲ್ಲಿ ಮಂಡಿಸಲು ಇಷ್ಟ ...ಸ್ತೇನೆ.

...ವಚನ ಸಾಹಿತ್ಯವು ಜಾತಿವಿರೋಧಿ ಅಲ್ಲ ಅನ್ನುವ ವಾದಕ್ಕೆ ನಾನು ...ಯಿಸುವ ಅವಶ್ಯಕತೆ ಇಲ್ಲ ಅನಿಸುತ್ತೆ, ಏಕೆಂದರೆ ಈಗಾಗಲೇ ಇಂತಹ ...ಕ್ಕೆ ಅನೇಕರು ಪ್ರತಿಕ್ರಿಯಿಸಿದ್ದಾರೆ. ಹಾಗಾಗಿ ಮಿಕ್ಕ ವಿಷಯಗಳನ್ನ ನಾವು ...ತಬಹುದು. ಈ ಮೂವರ ಬಗ್ಗೆ ನನಗೆ ಇರುವ ಮೊದಲ ...ಮಾನವೇನೆಂದರೆ ಇವರು ವಸಾಹತುಶಾಹಿ, ಅದು ಹುಟ್ಟಿ ಹಾಕಿದ ...ಸ್ಟಂಟ್ ಪರಿಕಲ್ಪನೆ ಮತ್ತು ಅದು ಆಧುನಿಕ ವಚನ ಅಧ್ಯಯನಗಳ ... ಶತಮಾನದ ಮೊದಲ ಅರ್ಧ ಭಾಗದಲ್ಲಿ ಉಂಟಾದ ಅಧ್ಯಯನಗಳು) ...ಗೆ ಯಾವ ಬಗೆಯ ಸಂಬಂಧವನ್ನು ಹೊಂದಿತ್ತು ಎಂಬ ವಿಷಯದ ...ಯಾವುದೇ ಆರ್ಕೈವಲ್ ಅಧ್ಯಯನಗಳನ್ನು ಕೂಲಂಕಷವಾಗಿ ಅಧ್ಯಯನ ...ದ್ದಾರೆಯೆ ಎಂಬುದು. ನನ್ನ ಮಾಹಿತಿಯ ಮಿತಿಯಲ್ಲಿ ಹೇಳುವುದಾದರೆ ...ತ ಈ ಮೂವರು ಯಾವುದೇ ಕೆಲಸವನ್ನು ಮಾಡಿಲ್ಲ, ಇವರ ವಾದಗಳನ್ನು ...ಸಿದರೆ ಈ ಮೂವರು ವಸಾಹತುಶಾಹಿ ಕಾಲಘಟ್ಟದ ಬಗ್ಗೆ ಕೆಲವೊಂದು ...ಕೃತ ಮತ್ತು ಸ್ವೀಪಿಂಗ್ ಹೇಳಿಕೆಗಳನ್ನು ಮಾತ್ರ ನೀಡುತ್ತಿದ್ದಾರೆ. ಇದನ್ನು ...ಭಿಸಿದವರು ಬಹುತೇಕ ಆಧುನಿಕೋತ್ತರ, ವಸಾಹತೋತ್ತರ ಪಾಶ್ಚಾತ್ಯ ...ಸರೇ ಆಗಿದ್ದಾರೆ! ಇವರು ತೋರಿಸಿಕೊಟ್ಟ ಹಾದಿಯಲ್ಲಿ ಈ ಮೂವರು ...ಯುತ್ತಿರುವ ಹಾಗಿದೆ. ಆದರೆ ಈ ರೀತಿ ವಾದಿಸುವ ಪಾಶ್ಚಾತ್ಯ ವಿದ್ವಾಂಸರು ...ಶ್ರಮ ಪಟ್ಟಿದ್ದಾರೆ (ಅವರ ವಿಚಾರಗಳ ಬಗ್ಗೆ ಅನೇಕರಿಗೆ ತಕರಾರಿರಬಹುದು. ...ಬೇರೆ ಪ್ರಶ್ನೆ. ಆದರೆ ಅವರು ತಮ್ಮ ವಿಚಾರಗಳಿಗೆ ಮೊದಲು ತಕ್ಕಮಟ್ಟಿಗೆ ...ವರ್ಕ್ ಮಾಡಿರುವುದನ್ನು ನೋಡಬಹುದು). ಆದರೆ ಈ ಮೂವರು ...ಸರು ಯಾವುದೇ ಶ್ರಮ ಪಟ್ಟಿರುವ ಹಾಗೆ ಕಾಣುವುದಿಲ್ಲ. ವಿಶೇಷವಾಗಿ ...ಯತ ಸಾಹಿತ್ಯ, ಇತಿಹಾಸ ಮತ್ತು ವಚನಗಳ ಆಧುನಿಕ ಅಧ್ಯಯದ ...ಇವರಿಗೆ ಮಾಹಿತಿ ಕಡಿಮೆ ಇದೆ ಎಂದು ದೃಢವಾಗಿ ಹೇಳಬಹುದು. ...ಯತ ಅಥವಾ ವಚನಗಳ ಆಧುನಿಕ ಇತಿಹಾಸದ ಸಂಕೀರ್ಣತೆ ಮತ್ತು ...ಆಗಿನ (20ನೇ ಶತಮಾನದ ಮೊದಲಾರ್ಧ) ಸಮಾಜದಲ್ಲಿ ಉಂಟುಮಾಡಿದ ...ನದ ಬಗ್ಗೆ ಇವರಿಗೆ ಎಳ್ಳಷ್ಟು ಜ್ಞಾನವಿದ್ದಿದ್ದರೆ ತಮ್ಮ ವಾದಗಳನ್ನು ...ಸುವ ಮೊದಲು ನೂರಾರು ಬಾರಿ ಯೋಚಿಸುತ್ತಿದ್ದರೇನೊ!

...ವಸಾಹತುಶಾಹಿ ಕಾಲದ ಆಧುನಿಕ ವಚನ ಅಧ್ಯಯನದ ಕೆಲವು ...ಶುಗಳನ್ನು ನಾವು ಈ ರೀತಿ ಗಮನಿಸಬಹುದು:


...) ಪ್ರೊಟೆಸ್ಟಂಟ್ ಪರಿಕಲ್ಪನೆಯನ್ನು ವಚನಗಳಿಗೆ ಬಂಧಿಸುವ ಮೊದಲು ...ಪರಿಕಲ್ಪನೆಯ ಬಗ್ಗೆ ಲಿಂಗಾಯತ ವಿದ್ವಾಂಸರಲ್ಲೇ ಒಮ್ಮತಗಳಿರಲಿಲ್ಲ. ...ತ್ಯರು ವಚನಗಳನ್ನು ಅಧ್ಯಯನ ಮಾಡುವ ಮೊದಲೆ ಲಿಂಗಾಯತ ...ಂಸರು ವಚನಗಳ ಬಗ್ಗೆ ಸ್ಥಳೀಯ ತಾತ್ವಿಕ ಜ್ಞಾನಧಾರೆಗಳಿಗೆ ...ದಿಯಾಗಿಯೋ, ವಿರುದ್ಧವಾಗಿಯೋ ಅಥವಾ ಪರ್ಯಾಯವಾಗಿಯೋ ...ಸಗಳನ್ನು ಕೈಗೊಂಡರು. ವಚನಗಳನ್ನು ಮೊದಲ ಬಾರಿಗೆ ಆಧುನಿಕ ...ಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನ ಪಟ್ಟ ಫ.ಗು.ಹಳಕಟ್ಟಿಯವರ ...ಲ ವಚನ ಸಂಕಲನವಾದ 'ವಚನ ಶಾಸ್ತ್ರ ಸಾರ'(1923)ದಲ್ಲಿ ಇರುವ ...ವಿಗಳೇ ಇದಕ್ಕೆ ಸಾಕ್ಷಿ.

...) ಮೊದಲಿಗೆ ಪ್ರೊಟೆಸ್ಟಂಟ್ ಪರಿಕಲ್ಪನೆಯನ್ನು ಲಿಂಗಾಯತರ ಸಂಸ್ಕೃತಿಗೆ/ ...ಕ್ಕೆ ಬಳಸಿದ್ದು ಪಾಶ್ಚಾತ್ಯನಾದರೂ ಅದು ವಚನಗಳನ್ನು ಗಮನಿಸಿ ಮಾಡಿದ ...ಲೆಯಲ್ಲ ಅಥವಾ ವರ್ಣನೆಯಲ್ಲ, ಲಿಂಗಾಯತ ಪುರಾಣಗಳನ್ನು ಅಧ್ಯಯನ



ಮಾಡಿ ಕಂಡುಕೊಂಡ ವಿಚಾರ (ವಿಶೇಷವಾಗಿ ಪಾಲ್ಕುರಿಕೆ ಸೋಮನಾಥನ ಬಸವಪುರಾಣ). ಪಾಶ್ಚಾತ್ಯ ವಿದ್ವಾಂಸ ಸಿ.ಪಿ.ಬ್ರೌನ್ (1860 ರ ಸುಮಾರು) ಇದಕ್ಕೆ ಸಾಕ್ಷಿ. ಇವರು ಕಂಡುಕೊಂಡ "ಸತ್ಯ"ವನ್ನು ಪಾಶ್ಚಾತ್ಯರಾಗಲಿ, ಸ್ಥಳೀಯ ವಿದ್ವಾಂಸರಾಗಲಿ ಒಪ್ಪಿಕೊಂಡರೆ? ಖಂಡಿತ ಇಲ್ಲ, ಡಬ್ಲ್ಯು.ಎ.ವುರ್ತ್ ಎಂಬ ಪಾಶ್ಚಾತ್ಯ ಕ್ರಿಶ್ಚಿಯನ್ ಮಿಷಿನರಿ (ಬ್ರೌನನ ಸಮಕಾಲೀನ) ಬ್ರೌನ್‌ನಂತವರ ವಾದವನ್ನು ಒಪ್ಪಲೇ ಇಲ್ಲ. ನಂತರ ಬಂದ ಸಂಸ್ಕೃತ ಮತ್ತು ವರ್ಣಾಶ್ರಮ-ಪರವಾಗಿರುವ ಲಿಂಗಾಯತ/ಬ್ರಾಹ್ಮಣರು ಕೂಡ ಇದನ್ನು ಒಪ್ಪಲಿಲ್ಲ. ಈ ವಿಷಯದ ಬಗ್ಗೆ ಅನೇಕ ವಾದ-ವಿವಾದಗಳಾದವು. ಈ ವಾದ-ವಿವಾದಗಳ ಐತಿಹಾಸಿಕ ಸೂಕ್ಷ್ಮತೆ ಮತ್ತು ಸಂಕೀರ್ಣತೆಯನ್ನು ಈ ಮೂವರು ಗಮನಿಸದೆ ವಚನಗಳ ಬಗ್ಗೆ ಮಾತನಾಡುವುದು ಪ್ರಿಮೆಚುರ್ ಅಂತ ನನ್ನ ಭಾವನೆ. ವಸಾಹತುಶಾಹಿ ಕಾಲಘಟ್ಟದ ದೀರ್ಘ ಅವಧಿಯ ಸಂಕೀರ್ಣ ಚರಿತ್ರೆಯನ್ನು ಅವರು ಯಾಕೆ ಅಧ್ಯಯನ ಮಾಡಿಲ್ಲ ಎಂಬ ಪ್ರಶ್ನೆ ಎದುರಾಗುತ್ತದೆ? ಪ್ರಾಯಶಃ ಆ ರೀತಿ ಮಾಡುವುದರಿಂದ ವಚನಗಳು ಅಥವಾ ಇತರ ಪರಂಪರೆಗಳ ಮೇಲೆ ತಮ್ಮ ಪೂರ್ವನಿಯೋಜಿತ ವಿಚಾರಗಳನ್ನು ಅಥವಾ ಸಂಶೋಧನಾ ಪದ್ಧತಿಯನ್ನು ಹೇರಲು ಸಾಧ್ಯವಿಲ್ಲ, ಹಾಗಾಗಿ ವಚನಗಳ ಒಂದೆರಡು ಸಂಪುಟಗಳನ್ನು ನೋಡಿ ತಾವು ಏನನ್ನು ಹೇಳಬೇಕೆಂದಿದ್ದಾರೊ ಅದನ್ನು ಸಾಧಿಸಲು "ಆಯ್ಕೆ" ರಾಜಕಾರಣವನ್ನು ಅವರು ಪ್ರದರ್ಶಿಸಿದ್ದಾರೆ. ಈ ಆಯ್ಕೆ ರಾಜಕಾರಣವು ಕೇವಲ 'ಜಾತಿ' ಪರಿಕಲ್ಪನೆಗೆ ಮಾತ್ರ ಸೀಮಿತವಾಗಿರುವುದು ಅನೇಕ ಅನುಮಾನಗಳಿಗೆ ಎಡೆಮಾಡಿಕೊಡುತ್ತವೆ.

ಇ) ಭಾರತೀಯ ಆಧ್ಯಾತ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ವಚನಗಳನ್ನು ನೋಡಬೇಕಾದರೆ ಯಾವುದೀ ಆಧ್ಯಾತ್ಮಿಕ ಪರಂಪರೆ ಎಂಬ ಶಂಕೆ ಮೂಡುತ್ತದೆ. ಅವುಗಳು ಅನಾದಿಕಾಲದಿಂದಲೂ ಇದ್ದ ಹಾಗೆ ಮುಂದುವರೆದವೇ? ಬದಲಾವಣೆಗಳಾಗಲೇ ಇಲ್ಲವೆ? ಜೈನ, ಬುದ್ಧ ವೇದ, ಉಪನಿಷತ್, ಆಗಮ ಇತ್ಯಾದಿಗಳ ಪರಂಪರೆಗಳು ಸದಾಕಾಲ ಒಂದೇ ತೆರನಾಗಿರಲಿಲ್ಲ, ಕಾಲ, ಕಾಲಕ್ಕೆ ಬದಲಾಗುತ್ತಾ ಬಂದವು. ಇದರ ಬಗ್ಗೆ ಈ ಮೂವರು ವಿದ್ವಾಂಸರಿಗೆ ತಿಳಿದಿಲ್ಲವೆ? ಹೀಗಾಗಿ ಈ ಮೂವರು ವಾದಿಸುವ ಆಧ್ಯಾತ್ಮಿಕ ಅಖಂಡತೆಯ ಪರಂಪರೆಯ ಬಗ್ಗೆ ನಮಗೆ ಅನೇಕ ಬಗೆಹರಿಸಲಾಗದ ಸಮಸ್ಯೆಗಳು ಉಂಟಾಗುತ್ತವೆ. ಹಿಂದೆ ವಚನಗಳನ್ನು ಭಾರತೀಯ ಆಧ್ಯಾತ್ಮಿಕ ಪರಂಪರೆಗಳ ಜೊತೆಗೆ ಹೋಲಿಸಿ



ಅಧ್ಯಯನ ಮಾಡಿದವರ ಸಂಖ್ಯೆ ಅನೇಕ. ಡಿ.ಆರ್.ನಾಗರಾಜರ "ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ" ಇದಕ್ಕೆ ಒಂದು ಸಣ್ಣ ಸಾಕ್ಷಿ. ಇದರಲ್ಲಿ ನಾಗರಾಜರು ಬಾಲಗಂಗಾಧರರಂತವರ ಅಭಿಪ್ರಾಯಗಳ ಬಗ್ಗೆ ಸಂಕ್ಷಿಪ್ತವಾಗಿ ತಕರಾರನ್ನು ತೆಗೆದಿದ್ದಾರೆ.

ಈ) ಈ ಮೂವರು ಹೇಳುವ ಆಧ್ಯಾತ್ಮಿಕ ಪರಂಪರೆಯ ಅಖಂಡತೆಯಲ್ಲಿ ವಚನಗಳನ್ನು ನೋಡಬೇಕು ಎನ್ನುವ ವಾದ ಹೊಸದೇನಲ್ಲ, ಈ ಮೂವರು ತಾವೇನೋ ಹೊಸತನ್ನು ಹೇಳುತ್ತಿದ್ದೇವೆ ಅನ್ನುವ ಭ್ರಮೆಯಲ್ಲಿದ್ದಾರೆ. ವಚನಗಳ ಬಗ್ಗೆ ಇದುವರೆಗೂ ಬಂದಿರುವ ವಿಮರ್ಶೆಗಳು, ಪುಸ್ತಕಗಳು, ಸಂಕಲನಗಳು ಮತ್ತು ಟೀಕೆಗಳ ಇತಿಹಾಸವನ್ನು ಅವರು ಸ್ವಲ್ಪ ಬಗೆದು ನೋಡಲಿ. ತಮ್ಮ ವಾದದ ಮಿತಿಗಳು ಅವರಿಗೆ ಅರಿವಾಗುವುವು. ಹಳಕಟ್ಟಿಯವರ ಅನೇಕ ತಾತ್ವಿಕ ಮತ್ತು ಆಧ್ಯಾತ್ಮಿಕ ಪರಂಪರೆಗಳನ್ನು ಅಭ್ಯಸಿಸಿ ವಚನಗಳನ್ನು ಹೋಲಿಸಿ, ಸಮಾಂತರ ಅಂಶಗಳು ಮತ್ತು ವಿರೋಧಾತ್ಮಕ ಅಂಶಗಳನ್ನು ಹೆಕ್ಕಿ ತೆಗೆದಿದ್ದಾರೆ. ಅವರು ತಮ್ಮ ಮೊದಲ ವಚನಸಂಕಲನದಲ್ಲಿ ವಚನ ಚಳವಳಿಯನ್ನು "ಭಕ್ತಿ" ಚಳವಳಿ ಅಂತಾಗಲಿ ಅಥವಾ "ಪ್ರೊಟೆಸ್ಟಂಟ್" ಚಳವಳಿ ಎಂತಾಗಲಿ ಭಾವಿಸಲೇ ಇಲ್ಲ, ವೇದ, ಉಪನಿಷತ್ತು, ಆಗಮ ವಿಚಾರಗಳನ್ನು ಸರಳ ಕನ್ನಡದ ವಚನಗಳಲ್ಲಿ ಕಾಣುವುದನ್ನು ಅವರು ಶ್ಲಾಘಿಸುತ್ತಾರೆ. ಮತ್ತು ವಚನಗಳು ಆಗಮಗಳ ತದ್ರೂಪಗಳು ಎಂದು ಅವರು ಒಪ್ಪಿಕೊಳ್ಳುವುದಿಲ್ಲ. ಜೊತೆಗೆ ಶಂಕರಾಚಾರ್ಯ ಮತ್ತು ಅವನ "ಯುಕ್ತಿ-ಕುಯುಕ್ತಿ"ಗಳಿಂದ ಹಿಂದೂ ಧರ್ಮಕ್ಕೆ ಆದ ಹಾನಿಯನ್ನು ಸಹ ಅವರು ಬಯಲಿಗೆಳೆದಿದ್ದಾರೆ. ಇಂತಹ "ಯುಕ್ತಿ-ಕುಯುಕ್ತಿ"ಗಳಿಗೆ ಪ್ರತಿಉತ್ತರವನ್ನು ವಚನಗಳಲ್ಲಿ ಕಾಣಬಹುದೆಂದು ಅವರು ತೋರಿಸಿಕೊಟ್ಟಿದ್ದಾರೆ. ಹಳಕಟ್ಟಿಯವರ ಕಾಲದಲ್ಲಿ ಅವರಂತೆ ಇನ್ನು ಅನೇಕರು "ವಚನಗಳು ಅದ್ವೈತದ ವಿಚಾರಗಳನ್ನು ಹೊಂದಿವೆ" ಎಂದು ಒಪ್ಪಿಕೊಳ್ಳಲು ತಯಾರಿರಲಿಲ್ಲ, ಆಗಿನ ಕಾಲದ ಮತ್ತು ನಂತರ ಪ್ರಕಟಿಸಲ್ಪಟ್ಟ ಅನೇಕ ವಚನಸಂಕಲನಗಳನ್ನು ಅಭ್ಯಸಿಸಿದರೆ, ವಚನಗಳನ್ನು ಯಾವ, ಯಾವ ಉದ್ದೇಶಗಳಿಗೆ, ಯಾತಕ್ಕಾಗಿ ಮತ್ತು ಯಾವ ಅರ್ಥಗಳನ್ನು ಮೂಡಿಸುವುದಕ್ಕಾಗಿ ಬಳಸಿಕೊಳ್ಳಲಾಯಿತು ಎಂದು ತಿಳಿಯುತ್ತದೆ. ಇವುಗಳೆಲ್ಲವನ್ನು ಈ ಮೂವರು ಅಥವಾ ಇನ್ನಿತರರು ಅಧ್ಯಯನ ಮಾಡಲು ತಯಾರಿದ್ದಾರೆಯೆ? ಪ್ರಾಯಶಃ ಇನ್ನೊಂದಷ್ಟು ವರ್ಷಗಳಷ್ಟು ಸಾಹಿತ್ಯ/ವಚನ ಕೃಷಿಯನ್ನು ಅವರು ಮಾಡಬೇಕಾಗುತ್ತದೆ.

ಉ) ವಚನಗಳನ್ನು ಜಾತ್ಯತೀತ, ಧಾರ್ಮಿಕ, ಆಧ್ಯಾತ್ಮಿಕ, ತಾತ್ವಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆಗಳಿಂದ ನೋಡಲಾಗಿದೆ. ಇವೆಲ್ಲಕ್ಕೂ ಮೂಲ ಪಾಶ್ಚಾತ್ಯರ ವಿಚಾರಧಾರೆಗಳು ಎಂದು ಹೇಳಿದರೆ ಆಧುನಿಕ ವಚನ ಅಧ್ಯಯನಕ್ಕೆ ನಾವು ಬೆನ್ನು ಮಾಡಿದ ಹಾಗಾಗುತ್ತದೆ. ಪಾಶ್ಚಾತ್ಯರ ಆಡಳಿತ ಮತ್ತು ವಿಚಾರಧಾರೆಗಳು ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಸಂಪೂರ್ಣವಾಗಿ ಬದಲಾಯಿಸಲಿಲ್ಲ, ಆದರೆ ಬದಲಾಯಿಸಲು ಸನ್ನಿವೇಶಗಳನ್ನು ಸೃಷ್ಟಿ ಮಾಡಿದ್ದು ನಿಜ. ಹಾಗಂತ ಸ್ಥಳೀಯ ವಿದ್ವಾಂಸರು ಪಾಶ್ಚಾತ್ಯರು ಹೇಳಿದ್ದನ್ನು ಚಾಚುತಪ್ಪದೆ ಪಾಲಿಸಿದರೆ? ತಮ್ಮದೇ ಆದ ಪರಿಭಾಷೆಯಲ್ಲಿ ಕರ್ನಾಟಕ ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ಕಟ್ಟಿಕೊಂಡಂತ ಉದಾಹರಣೆಗಳು ಹಲವು. ಅವು ಕೇವಲ **derivative** ಆಗಿರದೆ ಸ್ಥಳೀಯ ಸನ್ನಿವೇಶ, ಸಂದರ್ಭ, ತತ್ವ ಮತ್ತು ಸಾಹಿತ್ಯ ಪರಂಪರೆಗಳ ಜೊತೆಗೆ ನಡೆದ ಸಂಧಾನಕ್ರಿಯೆಗಳಾಗಿವೆ. ಅವುಗಳ ಬಗ್ಗೆ ಈ ಮೂವರು ಎಷ್ಟು ಕೆಲಸ ಮಾಡಿದ್ದಾರೆ? ಎಲ್ಲವನ್ನು ಪಾಶ್ಚಾತ್ಯರ ಕೊರಳಿಗೆ ಕಟ್ಟಿ, ಭಾರತೀಯ ವಿದ್ವಾಂಸರು ಅಥವಾ ಕರ್ನಾಟಕದಲ್ಲಿ ಆಗಿಹೋದ ಅನೇಕ ವಿದ್ವಾಂಸರು ಬೌದ್ಧಿಕ ಕ್ಷೇತ್ರಕ್ಕೆ ಯಾವುದೇ ಕೊಡುಗೆಗಳನ್ನು ನೀಡದ, ತಮ್ಮ ಸಂಸ್ಕೃತಿ, ಪರಂಪರೆಗಳನ್ನು ರೂಪಿಕೊಳ್ಳದ ಮತ್ತು ಮೂಕವಿಸ್ಮಿತರಾಗಿ ಸುಮ್ಮನೆ ಕುಳಿತುಕೊಂಡ ಜನರನ್ನಾಗಿ ಗ್ರಹಿಸುವ ಇವರ ಧೋರಣೆ ಅನೇಕ ಸಮಸ್ಯೆಗಳನ್ನು ತಂದೊಡ್ಡುವ ಅಪಾಯವಿರುತ್ತದೆ.

ಊ) ವಚನ ಚಳವಳಿಯನ್ನು ಸಾಮಾಜಿಕ ಚಳವಳಿ ಅಂತ ಕರೆಯಬಹುದೋ, ಇಲ್ಲವೋ ಎಂಬ ವಾದ ಇಲ್ಲಿ ಮುಖ್ಯ ಅಲ್ಲ, ವಚನಗಳನ್ನು ಉಪಯೋಗಿಸಿಕೊಂಡು ಅನೇಕ ಕೆಳ ಜಾತಿಯ ಮತ್ತು ಕೆಳ ವರ್ಗದ ಜನ ಮೇಲ್ವರ್ಗದ/ಮೇಲ್ಜಾತಿಯಲ್ಲಿ (ವಿಶೇಷವಾಗಿ ಬ್ರಾಹ್ಮಣರು ಮತ್ತು ಕೆಲವು ಲಿಂಗಾಯತ ಪಂಗಡಗಳು) ಕಾಣುವ ಪೌರೋಹಿತ್ಯಶಾಹಿ ಧೋರಣೆಯನ್ನು ಖಂಡಿಸಲು ಬಳಸಿದ್ದಾರೆ. ಇದಕ್ಕೆ ಕರ್ನಾಟಕದಲ್ಲಿ ಅನೇಕ ಉದಾಹರಣೆಗಳಾಗಿವೆ. ಈ ಮೂವರು ಹೇಳುವ ಆಧ್ಯಾತ್ಮಿಕ ಅಖಂಡತೆಯಲ್ಲಿ ಮಾತ್ರ ವಚನಗಳನ್ನು ಅಧ್ಯಯನ ಮಾಡುವುದಾದರೆ ಆಧುನಿಕ ಕಾಲದ ಸಾಮಾಜಿಕ ಚಳವಳಿ ಮತ್ತು ಅವು ಪ್ರತಿಪಾದಿಸುವ ಆದರ್ಶ ಸಮಾಜದ ಅಡಿಪಾಯವನ್ನೆ ಬುಡಮೇಲಾಗಿಸುವ ಅಪಾಯವಿರುತ್ತದೆ.

ಊ) "ಈ ಮೂವರು ಯಾವುದೋ ಹೊಸ ವಿಚಾರವನ್ನು ಹೇಳುತ್ತಿದ್ದಾರೆ; ನಾವು ಅವರನ್ನು ಕಿವಿಗೊಟ್ಟು ಕೇಳಬೇಕು; ಭಾವೋದ್ವೇಗದಿಂದ ವರ್ತಿಸಬಾರದು" ಎಂದು ಅಭಿಪ್ರಾಯಪಟ್ಟಿರುವ ಎಚ್.ಎಸ್.ಶಿವಪ್ರಕಾಶರಿಗೂ (ಪ್ರಾಯಶಃ ಇವರು ಡಂಕಿನ್ನರ ವಿಚಾರಗಳ ಬಗ್ಗೆ ಪ್ರಜಾವಾಣಿಯಲ್ಲಿ ಬರೆಯದೇ ಇದ್ದಿದ್ದರೆ, ಇಷ್ಟೆಲ್ಲಾ ರಗಳೆಗಳು ಆಗುತ್ತಿರಲಿಲ್ಲವೇನೊ!) ಸಹ ವಸಾಹತುಶಾಹಿ ಕಾಲದಲ್ಲಿ ಲಿಂಗಾಯತ ಸಾಹಿತ್ಯ ಸಂಸ್ಕೃತಿ ಮತ್ತು ವಚನಗಳ ಬಗ್ಗೆ ಆದ ಸಮುದ್ರ ಮಂಥನದ ಇತಿಹಾಸದ ಅರಿವು ಇದ್ದ ಹಾಗೆ ಇಲ್ಲ. ಹಾಗಾಗಿ ಈ ಮೂವರನ್ನು ಬೌದ್ಧಿಕವಾಗಿ ಅಪ್ಪಿಕೊಳ್ಳುವ ಉತ್ಸಾಹದಲ್ಲಿ ಶಿವಪ್ರಕಾಶರು ಎಡವುತ್ತಿದ್ದಾರೆಂದು ನನ್ನ ಅಭಿಪ್ರಾಯ.

ಒಟ್ಟಾರೆಯಾಗಿ ಹೇಳುವುದಾದರೆ ಈ ಮೂವರು ಮತ್ತು ಇವರ ಜೊತೆ ನಾವು ಬೌದ್ಧಿಕವಾಗಿ ತೊಡಗಿಸಿಕೊಳ್ಳಬೇಕು ಎಂದು ಹೇಳುವ ಶಿವಪ್ರಕಾಶರು ಇತಿಹಾಸಕ್ಕೆ ಬೆನ್ನು ಮಾಡಿ ನಿಂತಿದ್ದಾರೆ. ಇತಿಹಾಸದಲ್ಲಿ ಆದ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅದರ ಮೂಲಕ ಸಂಶೋಧನಾ ಕ್ಷೇತ್ರಕ್ಕೆ ಫಲಪ್ರದದಾಯಕವಾದ ಕೊಡುಗೆಯನ್ನು ನೀಡುವ ಧ್ಯೇಯ, ಉದ್ದೇಶಗಳು ಇವರಲ್ಲಿ ಇಲ್ಲ ಅಂತ ಹೇಳಬಹುದು. ಕರ್ನಾಟಕ ಇತಿಹಾಸ, ಸಂಸ್ಕೃತಿ ಮತ್ತು ವಚನ ಸಾಹಿತ್ಯದ ಬಗ್ಗೆ ಸಾರಾಸಗಟ ಮತ್ತು ಉಡಾಫೆಗಳಿಂದ ಕೂಡಿದ ಈ ಮೂವರ ಅಭಿಪ್ರಾಯಗಳು ಇತಿಹಾಸವನ್ನು ಸಂಪೂರ್ಣವಾಗಿ (ಉದ್ದೇಶಪೂರ್ವಕವಾಗಿಯೋ, ಏನೋ) ಮರೆಯುವ ಅಥವಾ ತಿರುಚುವ ಪ್ರಯತ್ನಗಳಾಗಿವೆ ಎಂದು ಹೇಳಬಹುದು. ತಾವು ಹೊಸತನ್ನು ಹೇಳುತ್ತಿದ್ದೇವೆಯೆಂದು ತಿಳಿಯುತ್ತಾ ಬೇರೆಯವರ ಸಂಶೋಧನೆಗಳನ್ನು ಅಥವಾ ವಿಚಾರಗಳನ್ನು ಇವರು ನಿರ್ಲಕ್ಷಿಸುತ್ತಿದ್ದಾರೆ. ಭಾರತದ ರಿಲಿಜಿಯನ್ ಮತ್ತು ಜಾತಿಗಳು ಪಾಶ್ಚಾತ್ಯರ/ವಸಾಹತುಶಾಹಿಯ ಬಳುವಳಿಗಳೆಂದು, ಅವುಗಳ ಪರಿಧಿಯೊಳಗೆ ನೋಡುವ ಅಥವಾ ಪರಿಭಾವಿಸುವ ವಚನಗಳು ತಪ್ಪು ಅರ್ಥಕ್ಕೆ ಒಳಗಾಗಿವೆಯೆಂದು ಘೋಷಿಸುವ ಈ ಮೂವರ "ಅಂತಿಮ" ಉದ್ದೇಶದ ಬಗ್ಗೆ ದಟ್ಟವಾದ ಅನುಮಾನ ಓದುಗರ ಮನಸ್ಸಿನಲ್ಲಿ ಸುಳಿದರೆ ಅಚ್ಚರಿಯೇನಲ್ಲ. ವಚನಕಾರರು ಈಗ ಬದುಕಿದ್ದರೆ ಈ ಮೂವರ "ಶೇಕಡವಾರು ಸಾಂಸ್ಕೃತಿಕ ರಾಜಕಾರಣ"ಕ್ಕೆ ತಲೆಬಾಗುತ್ತಿದ್ದರೊ ಅಥವಾ ತಲೆ ಚಚ್ಚಿಕೊಳ್ಳುತ್ತಿದ್ದರೋ ಗೊತ್ತಿಲ್ಲ!

● ಡಾ.ವಿಜಯಕುಮಾರ್ ಎಂ.ಬೋರಟ್ಟಿ

ರೂಢ ಪೂಜೆ ಮತ್ತು ಮೆದುಳಿಗಂಟಿದ ರಕ

ಮತ್ತೊಮ್ಮೆ ಅಂಬೇಡ್ಕರ್ ಜಯಂತಿ ಬಂದಿದೆ. ಸರ್ಕಾರಿ ಕಾರ್ಯಕ್ರಮದ ರೂಪಹೊತ್ತು ಉತ್ಸವವಾಗಿ ಸಾಗುವ ಆ ದಿನ ಅಂಬೇಡ್ಕರ್ ಅವರು ಪೂಜೆಗೊಳಗಾಗುತ್ತಾರೆ. ಈ ದೇಶದ ಯಾವ ಉದ್ಧಾರಕ ಶಕ್ತಿಗಳಿಗೂ ಇಂತಹ ಪೂಜೆಗೊಳ್ಳದೆ ಪ್ರಜ್ಞೆಯಾಗುವ ದಾರಿಗಳೇ ಇಲ್ಲ, ಇದು ಬುದ್ಧನನ್ನು ಒಳಗೊಂಡು ಬಸವಣ್ಣ ಗಾಂಧಿ, ಅಂಬೇಡ್ಕರ್‌ವರೆಗೂ ಸಾಗಿದೆ. ಈ ನಡುವೆ ಸರ್ಕಾರಿ ಸಂತರಾದ ಕನಕದಾಸ, ವಾಲ್ಮೀಕಿ, ಮಡಿವಾಳಮಾಚಿದೇವ, ಬೆಂಗಳೂರು ಕಟ್ಟಿದ ಕೆಂಪೇಗೌಡ... ಹೀಗೆ ಎಲ್ಲರನ್ನೂ ಆಧುನಿಕ ರಾಜಕಾರಣವು ಜಾತಿವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸಲು ಅಸ್ತ್ರಗಳನ್ನಾಗಿ ಮಾರ್ಪಡಿಸಿಕೊಂಡಿವೆ.

ತಳ ಹಂತದಿಂದ ಎದ್ದುಬಂದ ಇಂತಹ ವಿಶ್ವಪ್ರಜ್ಞೆಯ ವಿವೇಕವು ಇಂದು ಜಾತಿಗಳ ಅಸ್ಮಿತೆಗೆ ಹಾಗೂ ತನ್ನೊಳಗಿನ ಸಾಂಸ್ಕೃತಿಕ ವೀರತನಕ್ಕೆ ದುಡಿಸಿಕೊಳ್ಳುವಂತಾಗಿರುವುದೇ ವ್ಯವಸ್ಥೆಯ ದುರಂತ. ಆದರೂ ರೂಢ ಆಚರಣೆಗಳ ಮೂಲಕ ತಮ್ಮ ಮೆದುಳಿಗೆ ಪುರೋಹಿತರಾಗಿ ಮತ್ತು ಪ್ರಭುತ್ವ ಶಕ್ತಿಗಳಿಂದ ರಕ್ತದ ಕಲೆ ಅಂಟಿಸಿಕೊಂಡರೂ ಅದ್ಯಾವುದನ್ನೂ ತಮ್ಮ ಸಮುದಾಯದ ವಿವೇಕದೊಳಗೆ ತೆಗೆದುಕೊಂಡು ತಮ್ಮತನದ ಹುಡುಗಾಟಕ್ಕೆ ಪ್ರಯತ್ನಿಸದ ಈ ತಳ ಸಮುದಾಯಗಳು ವ್ಯವಸ್ಥೆಯ ಬಿಗಿ ಹಿಡಿತಕ್ಕೆ ಸಿಕ್ಕಿ ಉತ್ಸವದ ಹಾದಿಯಲ್ಲಿ ಹೆಜ್ಜೆ ಹಾಕುತ್ತಿರುವುದು ಸಾಮಾಜಿಕ ವಾಸ್ತವವಾದರೂ ಅದು ಸಮಾಜೋ-ರಾಜಕೀಯ ಅಧಃಪತನದ ದಾರಿಯೂ ಹೌದಾಗಿದೆ. ಇಂತಹ ಎಂದೆಂದೂ ಎದ್ದು ಬರಲಾರದ ಕಂದಕದ ಪಾತಾಳಕ್ಕೆ ಬಿದ್ದರೂ ಅದರ ಎಚ್ಚರವೂ ಗಾಯದನೋವು ಇಲ್ಲದ ದುಡಿವ ಸಮುದಾಯವು ತಮ್ಮ ಜಾನಪದೀಯ ಸಾಂಸ್ಕೃತಿಕ ಪರಿಕರಗಳ ಮೂಲಕ ಉತ್ಸವವನ್ನು ಮೆರಗುಗೊಳಿಸುತ್ತಿರುವುದು ಶವಯಾತ್ರೆಯಂತೆ ಗೋಚರವಾಗುತ್ತಿರುತ್ತದೆ. ಸಮಾಜವಿಜ್ಞಾನಿಗಳು ತಮ್ಮ ಪ್ರಕಾಂಡ ಪಂಡಿತಚಿಂತನೆಗಳ ನಡುವೆ ಕಳೆದುಹೋಗಿದ್ದರೆ, ರಾಜಕಾರಣವು ಅದೇ ಗೊಡ್ಡು ಮಾತುಗಳಲ್ಲಿ ಭಾರತೀಯ ವಿವೇಕವನ್ನು ಎತ್ತಿ ಹಿಡಿದ ಈ ಮಹನೀಯರನ್ನು ಏನೇನೂ ಓದದೇ ರಂಜಕ ದಂತಕತೆಗಳಲ್ಲಿ ಅಮಾಯಕ ಓಟರ್‌ಗಳಿಗೆ ರವಾನಿಸುತ್ತಿದ್ದಾರೆ.

ಸ್ವಾಮಿ, ಸಂತ, ಮುಲ್ಲ, ಪಾದ್ರಿಗಳು ತಮ್ಮ ತಮ್ಮ ಧರ್ಮದ ಏಜಂಟ್‌ಗಿರಿಗಾಗಿ ದಲ್ಲಾಳಿಗಳಾಗಿ ಮಾರ್ಪಾಟಾಗಿ ತಮ್ಮೊಳಗೇ ಜೀವಂತವಾಗಿರಬೇಕಾದ 'ಸಾಂಸ್ಕೃತಿಕ ವಿವೇಕ'ದ ದಾರಿಯನ್ನು ಕೊಂದು ಕೊಳ್ಳುತ್ತಿದ್ದಾರೆ. ಇಷ್ಟಾಗಿ ದಲಿತರ ಅಸ್ಪೃಶ್ಯರ ನೆಲೆಯಂತೂ ಇನ್ನೂ ಘೋರ, ಕ್ರೂರ, ಹಿಂಸಾತ್ಮಕವಾಗಿದೆ. ಸಾಂಕೇತಿಕ ರಾಜಕಾರಣ ಮತ್ತು ಧಾರ್ಮಿಕ ರಾಜಕಾರಣವನ್ನು ಒಪ್ಪಿಕೊಂಡವರು ಭಾರತದ ಇಂತಹ ಸಾಮಾಜಿಕ ಹಿನ್ನಡೆಗೆ ಕಾರಣಕರ್ತರಾಗಿದ್ದಾರೆ. ಅವರ್‍ಯಾರಿಗೂ ಅಂಬೇಡ್ಕರ್ ಕಟ್ಟಿಕೊಡುವ ಸಾಂಸ್ಕೃತಿಕ ಸಂವಿಧಾನದ ಜರೂರು ಇಲ್ಲದಾಗಿದೆ. ಕೇವಲ ರಾಜಕೀಯ ಸಂವಿಧಾನದಿಂದ ಭಾರತದ ಸರ್ವತೋಮುಖ ಅಭಿವೃದ್ಧಿಯನ್ನು ಬಯಸುವ ಆಧುನಿಕ ಅಭಿವೃದ್ಧಿಯ ನೆಲೆಯಲ್ಲಿ ನಿಂತಿರುವ ಇಂತಹ ಮೂಲಭೂತವಾದಿಗಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳನ್ನೆತ್ತುವ ಅಂಬೇಡ್ಕರ್ ಬೇಡವಾಗಿದ್ದಾರೆ. ಏಕೆಂದರೆ ಧಾರ್ಮಿಕ ಮತ್ತು ವೈದಿಕ ನೆಲೆಯಲ್ಲಿ ಅಸ್ಪೃಶ್ಯತೆ ಹಾಗೂ ಭಾರತದ ಏಳ್ಗೆಯನ್ನು ಬಯಸಿದ ಗಾಂಧೀಜಿಯು ಜೊತೆಯಲ್ಲಿಟ್ಟು ಅಂಬೇಡ್ಕರ್‌ರವರನ್ನು ಅರ್ಥೈಸುವ ಸಮಾಜವಿಜ್ಞಾನಿಗಳಿಂದ ತಯಾರಾದ ಈ ತಲೆಮಾರಿನ ಪಟ್ಟಭದ್ರ ಭಾರತೀಯರಿಗೆ ಸಮಾಜವು ರಚನಾತ್ಮಕವಾಗಿ ಬದಲಾಗುವುದು ಬೇಕಿಲ್ಲ ಹಾಗೂ ದಲಿತ ವ್ಯಕ್ತಿತ್ವವನ್ನು ಗೌರವದಿಂದ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ, ಆದ್ದರಿಂದಲೇ ಭಾರತವು ಸಾಂಸ್ಕೃತಿಕವಾಗಿ ಜಡಸ್ಥಿತಿಯ ಕಡೆ ಸಾಗುತ್ತಿದೆ. ಇಂತಹ ಜಡಸ್ಥಿತಿಯು ತಂದಿರುವ ಹೋರಾಟ ಮತ್ತು ಚಳವಳಿಗಳು ಕೂಡ ತನ್ನ ಹಕ್ಕುದಾರಿಕೆಗಾಗಿ ಶುರುವಾದರೂ ಸಾಂಕೇತಿಕ ರಾಜಕಾರಣದ ಕೈಗೊಂಬೆಯಾಗಿ ತನ್ನ ಚಹರೆಯನ್ನು ಕಳೆದುಕೊಂಡು ನಿರ್ನಾಮವಾಗಿಬಿಡುತ್ತದೆ ಇದನ್ನು ಒಂದು ರೂಪಕದಲ್ಲಿ ವಿಸ್ತರಿಸಬಹುದು.

ಈ ಹೊತ್ತಿನ ಭಾರತೀಯ ಸಮಾಜಶಾಸ್ತ್ರ ಮತ್ತು ಇತಿಹಾಸ ಹಾಗೂ ರಾಜಕೀಯ ಮೀಮಾಂಸೆಯನ್ನು ಪುನರ್ ಮೌಲೀಕರಣಕ್ಕೆ ಒಳಗು ಮಾಡುವುದಾದರೆ ಅದು ಗಾಯಗೊಂಡ ದಲಿತರ ಎದೆಯ ಮಾತಾಗಿ ರೂಪುಗೊಳ್ಳುತ್ತದೆ. ಈ ಸಮಾಜದ ಕಟ್ಟಕಡೆಯ ಹಂತದಲ್ಲಿರುವ ಅಸ್ಪೃಶ್ಯ ಸಮುದಾಯವು ತಮಗರಿವಿಲ್ಲದೆ ಜೋಡಿನಳಿಗೆಯ ಬಂದೂಕಿನ ಗುಂಡಿಗೆ ಬಲಿಯಾಗುತ್ತಿದ್ದಾರೆ. ಒಂದು ನಳಿಗೆ ಪುರೋಹಿತಶಾಹಿಯದ್ದಾದ ಮತೀಯ ನೆಲೆಯದ್ದು, ಮತ್ತೊಂದು ನಳಿಗೆ ಇದೇ ಪುರೋಹಿತಶಾಹಿ ರೂಪಿಸುವ ಪ್ರಭುತ್ವದ್ದಾಗಿರುತ್ತದೆ. ದುರಂತವೆಂದರೆ ಈ ಭಾರವಾದ ಜೋಡಿನಳಿಗೆಯನ್ನು ದಲಿತ ಕೇರಿಯ ನವಬ್ರಾಹ್ಮಣರ ಹೆಗಲ ಮೇಲಿಟ್ಟು ಅಮಾಯಕರ ಎದೆಗೆ ಗುರಿ ಇಟ್ಟು ಉಡಾಯಿಸುವ ತಂತ್ರವು ಅಕ್ಷರ, ಅಧಿಕಾರ, ಮೀಸಲಾತಿ, ರಾಜಕಾರಣ, ಜಾತಿಕಾರಣ, ಹಿಂದುತ್ವ, ದೇವಾಲಯ, ಭಾರತಮಾತೆ, ಕುಂಕುಮ, ತ್ರಿಶೂಲ ಮುಂತಾದ ಭಾವನಾತ್ಮಕ ಸಂಗತಿಗಳಿಗೆ ಸಂಹಿಸುತ್ತಿರುತ್ತದೆ. ಇದ್ಯಾವುದರ ಅರಿವಿಲ್ಲದ ಅಮಾಯಕ ದಲಿತ ವರ್ಗ ತನ್ನ ಮೈಮೇಲಾದ ಶತಮಾನದ ಗಾಯವನ್ನು ನೆಕ್ಕಿಕೊಳ್ಳುತ್ತಲೇ ಇರುತ್ತದೆ. ಇದೇ ಕಾಲದಲ್ಲಿ ಆ ಗಾಯದ ರೂವಾರಿಗಳ ನೆನಪನ್ನು ಅಮಾಯಕವಾಗಿ ಮರೆಯುತ್ತಿರುತ್ತದೆ ಅಥವಾ ಮರೆಯುವಂತಹ ಇತಿಹಾಸವನ್ನು ಪ್ರಭುತ್ವ ರೂಪಿಸುತ್ತಲೇ ವರ್ತಮಾನದ ಸಂಗತಿಗಳಿಂದ ದಲಿತರನ್ನು ಆಚೆಗೊಯ್ದು ಪಲ್ಲಕ್ಕಿ ಹೊರುವ ಕರ್ತವ್ಯಕ್ಕೆ ಹಚ್ಚಿರುತ್ತದೆ.

ಇದೊಂದು ಕೇವಲ ಪ್ರಮೇಯವಲ್ಲ, ಧರ್ಮ, ಜಾತಿ, ದೇವರ, ಚರ್ಚೆಯಿಂದ ಶುರುವಾಗಿ ವಾಸ್ತವ ಬದುಕಿನ ನೇರಕ್ಕೂ ಅದು ಏಕಕಾಲಕ್ಕೆ ದಾಳಿ ಇಡುತ್ತಿರುತ್ತದೆ. ಅಂಬೇಡ್ಕರ್ ಅಂದು ರೂಪಿಸಿದ ಸ್ವಾಭಿಮಾನದ ಚಳವಳಿಗಳಲ್ಲಿ, ನೀರಿನ ಹಕ್ಕು ಸ್ಥಾಪಿಸುವ, ಮನುಷ್ಯ ನೆಲೆಯ ಹೋರಾಟ ಹಾಗೂ ಸಮಾನತೆಗಾಗಿ ನಡೆಸಿದ ಅನೇಕ ಹೋರಾಟಗಳಿಂದ ಆರಂಭಗೊಂಡ ಇಂದಿಗೂ ದಲಿತರು ನಡೆಸುತ್ತಿರುವ ಎಲ್ಲಾ ಹೋರಾಟವು ಇಲ್ಲಿ ಸಮಾನತೆಯನ್ನು ತರಲಾಗುತ್ತಿಲ್ಲ, ಕಾರಣ ಈ ಬಂದೂಕಿನ 'ಜೋಡಿನಳಿಗೆ'ಗಳಿಗೆ ಭಾರತದ ಸಾರ್ವಭೌಮತೆ ಹಾಗೂ ಗಣತಂತ್ರವನ್ನು ಸಾರುವ ಜಾತ್ಯತೀತ ಸಂವಿಧಾನವೂ ಅರ್ಥವಾಗಿಲ್ಲ, ಓದಿಕೊಂಡ ಅವರದು ಅರ್ಥವಾಗದ ಜಾಣತನವಾದರೆ, ಓದದ ಅಸಂಘಟಿತ ದಲಿತರ ದಡ್ಡತನವೂ ಇದಕ್ಕೆ ಕಾರಣವಾಗಿದೆ.

ಎಪ್ಪತ್ತು ಎಂಭತ್ತರ ದಶಕದಲ್ಲಿ ಕರ್ನಾಟಕದ ಸಂದರ್ಭ ಅನೇಕ ಹೋರಾಟಗಳನ್ನು ರೂಪಿಸಿದ ದಶಕವಾಗಿದೆ. ನಿಜವಾಗಿಯೂ ಕರ್ನಾಟಕ ಚರಿತ್ರೆಯನ್ನು ನಾವು ಈಗಿನಿಂದ ಹಿಂದಕ್ಕೆ ಓದಿಕೊಳ್ಳಬೇಕಾಗಿದೆ. ಏಕೆಂದರೆ ಕಾಲೇಜುಗಳಲ್ಲಿ ಕಲಿಸುತ್ತಿರುವ ಪಠ್ಯಗಳು ಎಂಭತ್ತರ ಹೊತ್ತಿಗೆ ನಿಂತು ಬಿಡುತ್ತವೆ. ದಲಿತ, ರೈತ, ಸ್ತ್ರೀ, ಕಾಗೋಡು, ಸಮಾಜವಾದಿ – ಈ ಯಾವೆಲ್ಲ ಹೋರಾಟಗಳಿಗೂ ಅಲ್ಲಿ ಸ್ಥಾನವಿಲ್ಲ, ಹಿಂದುಳಿದವರು ನಾಲ್ಕು ಶತಮಾನಗಳಿಂದಲೂ ಹೀಗೇಕೆ ಜೀವಿಸುತ್ತಿದ್ದಾರೆ; 5000 ವರ್ಷಗಳಿಂದ ದಲಿತರ ಬದುಕು ಯಾಕೆ ಹೀಗಿದೆ ಎಂದು ದಾಖಲಿಸಿಲ್ಲ.

ಸರ್ಕಾರವೇ ಅಂಕಿಗಳನ್ನು ನೀಡುವಂತೆ ಪ್ರತಿ ಮೂರು ನಿಮಿಷಕ್ಕೆ ಒಬ್ಬ ದಲಿತ ಮಹಿಳೆಯ ಮೇಲೆ ದೌರ್ಜನ್ಯ ಅತ್ಯಾಚಾರ, ಸಾಮಾಜಿಕ ಬಹಿಷ್ಕಾರ ನಡೆಯುತ್ತಿದೆ. ಆದರೆ ಯಾಕೆ ಹೀಗೆಲ್ಲ ನಡೆಯುತ್ತದೆ ಎಂಬ ಚಾರಿತ್ರಿಕ ಪ್ರಶ್ನೆಗಳನ್ನು ಚರಿತ್ರೆಯ ಪುಸ್ತಕಗಳು ಎತ್ತುತ್ತಿಲ್ಲ, ಏಕೆಂದರೆ ವರ್ತಮಾನಕ್ಕೆ ಜೀವವಿಲ್ಲ. ಜೀವವಿರುವ ವರ್ತಮಾನವನ್ನು ರೂಪಿಸಬೇಕಾಗಿದ್ದ 'ವ್ಯವಸ್ಥೆ' ಮತ್ತು 'ಸುಧಾರಕ' ಚಿಂತನೆಗಳು ಮತ್ತೆ ಅದೇ ಹಳೇ ಒಡೆದಾಳುವ ತಂತ್ರವನ್ನು ಹೊಸ ರೂಪದಲ್ಲಿ ರೂಪಿಸುತ್ತಿರುತ್ತದೆ.

ಈ ಬಗೆಯ ಧ್ಯಾನದ ಚಿಂತನೆಯನ್ನು ಕೊಲ್ಲುವ ಶಿಕ್ಷಣ ಪದ್ಧತಿಯಿಂದ ದಲಿತರಿಗೆ ಮೋಕ್ಷವಿಲ್ಲ. ಸಾಂಪ್ರದಾಯಿಕ ಶಿಕ್ಷಣದಾಚೆಗೆ ಅವರ ಹೆಜ್ಜೆಗಳು, ಹಟ್ಟಿಯ, ಕೇರಿಯ, ಊರಿನ, ಅವಮಾನದ, ಅಸ್ಪೃಶ್ಯತೆಯ ನೆಲೆಯಿಂದ ರೂಪುಗೊಳ್ಳಬೇಕು. ಅಲ್ಲಿಂದ ಹೆದ್ದಾರಿಗೆ ಬಂದ 'ದಲಿತ ಪ್ರಜ್ಞೆ' ಮತ್ತೆ ತನ್ನೂರು, ಕೇರಿಯ, ಹಟ್ಟಿಯ, ಅಸ್ಪೃಶ್ಯತೆಯ ಅವಮಾನಕ್ಕೆ ಮರಳಬೇಕಾಗಿದೆ. ಇಲ್ಲದಿದ್ದರೆ ಈ ಜೋಡಿ ನಳಿಗೆಯ ಈಡುಗಳು ರೂಪಿಸುವ ಸಮಾಜವಾದಿ ಸುಧಾರಣಾನೆಲೆಯ ಚಿಂತನೆಗಳು ಅಥವಾ ಗಾಂಧಿ, ಲೋಹಿಯಾ ಪ್ರಣೀತ ಲಿಬರಲ್ ಚಿಂತನೆಗಳು ದಲಿತರನ್ನು ಮುಖ್ಯವಾಹಿನಿಯಿಂದ ದೂರವಿಡುವ ಹುನ್ನಾರುಗಳಾಗಿ ರೂಪುಗೊಂಡು ಶ್ರೀಮಂತ ಶೂದ್ರ, ವೈದಿಕ, ಅಧಿಕಾರಸ್ಥ ಸಮುದಾಯದ ಅಸ್ತ್ರವಾಗುತ್ತವೆ.

ಈ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿಯನ್ನು, ಬದುಕುವ ಮಾರ್ಗವನ್ನು, ಸಮಾನತಾಭಾವನೆಯನ್ನು, ಆರ್ಥಿಕ ನೀತಿಯನ್ನು, ನ್ಯಾಯಿಕ ವಿಧಾನವನ್ನು, ಅಂಬೇಡ್ಕರ್ ಅವರ ಚಿಂತನೆಗಳಿಂದ ರೂಪಿಸಿಕೊಳ್ಳಬೇಕಾಗಿದೆ. ದುರಂತವೆಂದರೆ, ಜಗತ್ತಿಗೆ 'ಜ್ಞಾನದ ಬೆಳಕಾದ' ಅಂಬೇಡ್ಕರ್ ಇಂಡಿಯಾದಲ್ಲಿ ಏಕಕಾಲಕ್ಕೆ ದಲಿತರಿಗೆ 'ದೇವರಾಗಿ', ಮೇಲ್ವರ್ಗದವರಿಗೆ ಓಟಿನ ಟ್ರಂಪ್‌ಕಾರ್ಡ್ ಆಗಿ ಪರಿವರ್ತಿಸಲಾಗುತ್ತಿದೆ. ಇಂತಹ ಸ್ಥಿತಿಯಲ್ಲಿ ಪುರೋಹಿತಶಾಹಿ ಮತ್ತು ಪ್ರಭುತ್ವವು ಅಂಬೇಡ್ಕರ್ ಅವರ ಹೆಗಲಮೇಲೆ ಕೋವಿಯನ್ನಿಟ್ಟು ದಲಿತಕೇರಿಗಳನ್ನು ಉಡಾಯಿಸುತ್ತಿದೆ. ಪ್ರಜ್ಞಾವಂತ ಸಮಾಜವೇ ತಲೆತಗ್ಗಿಸುವಂತಹ ಅನೇಕ ಘಟನೆಗಳು ಈ ದೇಶದಾದ್ಯಂತ ನಿತ್ಯವೂ ನಡೆಯುತ್ತಿದ್ದರೆ ಅದೇ ಸಂವಿಧಾನದ ಹೆಸರಿನಲ್ಲಿರುವ ಪಾರ್ಲಿಮೆಂಟ್, ವಿಧಾನಸೌಧಗಳು, ಕೋರ್ಟ್, ಪೋಲೀಸ್ ಠಾಣೆಗಳು ದಲಿತರ ಕೇರಿಗಳಿಂದ ಗಾವುದ ದೂರ ಉಳಿದಿರುವುದು ಏನನ್ನು ಸೂಚಿಸುತ್ತದೆ? ಆದ್ದರಿಂದ ದಲಿತರು ಈಗಿರುವ ರಾಜಕೀಯ-ಸಾಮಾಜಿಕ-ಆರ್ಥಿಕ ವಾಂಛೆಗಳಿಗಿಂತ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಶಾಶ್ವತ ಸ್ಥಿತಿಯನ್ನು ಧ್ಯಾನಿಸಬೇಕು. ಆದಾಗಲು ಅಂಬೇಡ್ಕರ್ 'ಹೆಗಲ ಮೇಲಿರುವ', ಆ ಮೂಲಕ ದಲಿತ ಕೇರಿಯ



ಕಡೆ ಗುರಿಮಾಡಿಕೊಂಡ 'ಜೋಡಿಗಳಿಗೆಗಳನ್ನು' ಅರ್ಥಮಾಡಿಕೊಳ್ಳಬೇಕಾಗಿದೆ. ಆದರೆ ದಲಿತರಿಗೆ ಅಂಬೇಡ್ಕರ್ ಅವರನ್ನು ಅರ್ಥಮಾಡಿಸುತ್ತಿರುವ ವ್ಯವಸ್ಥೆ ಯಾವ ಬಗೆಯದು?

ನಾವಿಂದು ಓದುತ್ತಿರುವ ಅಂಬೇಡ್ಕರ್, ಗಾಂಧಿಯ ಚಿಂತನೆಗಳಿಗಾಗಿ, ಲೋಹಿಯವಾದದ ಸಮರ್ಥನೆಗಾಗಿ ಮತ್ತು ಸ್ವಾತಂತ್ರ್ಯ ಚಳವಳಿಯ ಘಟನಾವಳಿಯ ಪುನರ್ ರೂಪಕವಾಗಿದ್ದಾರೆ. ಸ್ವತಂತ್ರವಾಗಿ ಅಂಬೇಡ್ಕರ್‌ರವರ ಪ್ರಖರ ಚಿಂತನಾಕ್ರಮವನ್ನು ಅರ್ಥೈಸಲಾರದೆ ಸಂವಿಧಾನವನ್ನು ನಿರ್ವಹಿಸಲು ಸಾಧ್ಯವಿಲ್ಲ. ಆದರೆ ಇಂದು ನಮ್ಮ ಕಣ್ಣಮುಂದಿರುವ ಚುನಾವಣಾ ವ್ಯವಸ್ಥೆ ಮತ್ತು ಅದು ರೂಪಿಸಿ ಕಳುಹಿಸಿಕೊಡುವ ಜ್ಞಾನದಮಟ್ಟ ಹಾಗೂ ಪರಿಸ್ಥಿತಿಯ ಕೈಗೊಂಬೆಯಾದ ಅಥವಾ ಜಾತಿಪ್ರತಿನಿಧೀಕರಣದ ಅವರ ದನಿಯಿಂದ 'ನಿಜದ ಅಂಬೇಡ್ಕರ್' ರೂಪುಗೊಳ್ಳಲು ಸಾಧ್ಯವೆ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಹೀಗಾದಾಗ ನಮ್ಮ ಕಣ್ಣ ಮುಂದಿನ ಅನೇಕ ಘಟನಾವಳಿಗಳಿಗೆ ಮೂಕಸಾಕ್ಷಿಗಳಾಗಿ ನಾವು ನಿಲ್ಲಬೇಕಾಗಿದೆ. ಇಡೀ ಇಂಡಿಯಾದ ದಲಿತ ಚರಿತ್ರೆಯೇ ರಕ್ತಸಿಕ್ತವಾದುದು. ಒಂದು ದಿನವೂ ದಲಿತರ ಮೇಲಾಗುವ ದೌರ್ಜನ್ಯಕ್ಕೆ ವಿರಾಮವಿಲ್ಲ, ಬೆಲ್ಚಿ ಬದನವಾಳ್, ತತ್ತೂರು, ಬೆಂಡಿಗೇರಿ, ಕ್ಯಾಸನಕೆರೆ, ಕಂಬಾಲಪಲ್ಲಿ-ಸೂಗೂರು, ಭದ್ರಕ್‌ನಗರ, ಖೈರ್ಲಾಂಜಿಯಲ್ಲಿ ನಡೆದ ಅಮಾನುಷ, ಬರ್ಬರ ಕೊಲೆ, ಅತ್ಯಾಚಾರ, ಸಾಮಾಜಿಕ ಬಹಿಷ್ಕಾರಗಳು ಭಾರತದ ಚರಿತ್ರೆಯಲ್ಲಿ ಯಾವ ರೂಪದಲ್ಲಿ ದಾಖಲಾಗಿವೆ ಮತ್ತು ಅವುಗಳನ್ನು ಕುರಿತು ಬರೆಯುತ್ತಿರುವ ಉದಾರಾವಾದಿ ವೈದಿಕ ಮತ್ತು ದಲಿತ ನವಬ್ರಾಹ್ಮಣರ ಬರಹಗಳು ಕೂಡ 'ಭಾರತದ ಚರಿತ್ರೆಯಲ್ಲಿ ದಲಿತರ ವಿರುದ್ಧ ನೇರವಾಗಿ ವೈದಿಕರು ಭಾಗವಹಿಸಿಲ್ಲ. ಅದೇನಿದ್ದರೂ ಶೂದ್ರ ಸಮುದಾಯದಿಂದ ನಡೆದಿದ್ದು' ಎಂಬ ಧ್ವನಿಯಲ್ಲಿ ಮಾತನಾಡುತ್ತಿದ್ದಾರೆ. ಮುಂದೊಂದು ದಿನ ಇದೇ ನಿಜವಾದ ಚರಿತ್ರೆಯಾಗಿ ರೂಪುಗೊಂಡಾಗ ಶೂದ್ರರು-ದಲಿತರ ನೇರ ಶತ್ರುಗಳಾಗಿ ನಿಂತಿರುತ್ತಾರೆ. ಮತ್ತೊಮ್ಮೆ ವೈದಿಕ ವರ್ಗವು ತನ್ನೊಳಗೆ ಮುಚ್ಚಿಟ್ಟುಕೊಂಡ ಅಜೆಂಡಾವನ್ನು ಹೊಸ ರೂಪದಲ್ಲಿ, ಹೊಸ ಅರ್ಥದಲ್ಲಿ, ಹೊಸ ಜಾಗ ತೆರೆಯುತ್ತಾರೆ. ಅಲ್ಲಿ ದಲಿತರು ಸಂಪೂರ್ಣ ಬ್ರಾಹ್ಮಣರಾಗಿ ಪರಿವರ್ತನೆಗೊಂಡು ತಮ್ಮ ಹೆಗಲ ಮೆ 'ಅವರಿಟ್ಟ' 'ಜೋಡಿ ನಳಿಗೆ' ಬಂದೂಕನ್ನು ಹೇರಿಕೊ ಮತ್ತೊಂದು ಅಮಾಯಕ ದಲಿತಕೇರಿ ಕಡೆ ಗುರಿಯಿ ಉಡಾಯಿಸುತ್ತಾರೆ. ಅದಕ್ಕಾಗಿಯೆ ಇಲ್ಲಿ 'ಅಂಬೇಡ ಚಿಂತನೆಗಳೆಲ್ಲಾ ಸವಕಲಾಗುತ್ತಾ ಸಾಗುತ್ತಿವೆ. ಪ್ರಜ್ಞೆಯ ರೂಪಿಸಬೇಕಾದ ಅಂಬೇಡ್ಕರ್ ಶಕ್ತಿಯು ಪೂಜೆಯ ಸರಿಯುತ್ತಿದೆ. ಮನುಷ್ಯನ ಬಿಡುಗಡೆಯ ಸಂಕೇತವಾ ಬುದ್ಧ ಅವತಾರವಾಗಿ ರಪ್ತಾಗುತ್ತಿದ ಸಮಗ್ರ ಶೋಷಿತರ ದನಿಯಾ ಅಂಬೇಡ್ಕರ್ ಕೇವಲ ದಲಿತರ ಕೇರಿ ದೇವರಾಗಿ ಮಾರ್ಪಾಡಾಗುತ್ತಿದ್ದಾರೆ. ಆಧುನಿಕ ಚರಿತ್ರೆಯಾಗಿ ರೂಪುಗೊಳ ಸಾಗಿದಾಗ ಅಲ್ಲಿ ಚಿಂತನೆಗಳ ಜಾಗ ಪ್ರತಿಮೆಗಳಿರುತ್ತವೆ (ಮೂರ್ತಿ ಸಂವಿಧಾನಾತ್ಮಕ ಹಕ್ಕೊತ್ತಾಯಗ ಸರ್ಕಾರ ನೀಡುವ ಋಣಭಾರವಾಗು ಜಾತಿಗೊಂದೊಂದು ಪ್ರಾಧಿಕ ರಚಿಸುತ್ತಾ ಸಾಂಘಿಕಶಕ್ತಿಯನ್ನು ಒಡೆ ದಲಿತರನ್ನು ಅಸಂಘಟಿತರನ್ನಾಗಿಸ ಹುನ್ನಾರು ಸಾಗುತ್ತಲೇ ಇರುತ್ತದೆ. ಆಗ ದಲಿತರ ಹೆಗಲ ಮೆ ಸಂವಿಧಾನವಿರುವುದಿಲ್ಲ. ಬದ ಪ್ರಭುತ್ವ-ಪುರೋಹಿತಶಾಹಿ ಹೇ 'ಜೋಡಿ ನಳಿಗೆಯ ಕೋವಿ' ಇರುತ್ತ ಮತ್ತದು ದಲಿತರ ಎದೆಗೆ ಗುರಿ ಕಾದಿರುತ್ತದೆ.

ಇದು ವರ್ತಮಾನ ತಳಮಳವಾದರೂ ಇದಕ್ಕೆ ದ ದೂರದಿಂದಲೇ ಸಾಗಿಬಂದಿದೆ. ಭೂ ಹುಟ್ಟಿದಾಗಿನಿಂದ ಭೂಮಿಯೊಂದಿ ದಲಿತರು ಇಂದು ಅದರಿ ವಂಚಿತರಾಗಿ. ಬೇರೆಯವರು ಕನ ಪಡುವ ದೈನೇಸಿ ಸ್ಥಿತಿ ತಲುಪಿದ ದೇವರು-ಮೂಢನಂಬಿಕೆ, ಜಾ ಅಂಧಶ್ರದ್ಧೆ ಹೆಸರಿನಲ್ಲಿ ಕಾಳ ಮೆಸುವಂತೆ ನಾಟಕವಾಡಿದ 'ಉಳ ಸಮಾಜ, ಸುಧಾರಣೆಯ ಹೆಸರಿನಲ್ಲಿ ಇ ಸಮುದಾಯವನ್ನು ನಿರ್ಗತಿಕರನ್ನಾಗಿಸುತ್ತ ಬುದ್ಧನೊಂದಿಗಿದ್ದ ನೊಂದವರನ್ನು ಹಾ ಇಟ್ಟುಕೊಂಡು ಬುದ್ಧನನ್ನು ದೇವರನ್ನಾಗಿಸಿದ ಈ ವ್ಯ ಕಳೆದ ಆರು ದಶಕಗಳಲ್ಲಿ ಅನೇಕ ದೀರ್ಘಯೋಜನೆಗಳ ಹೆಸೆಯುತ್ತಲೇ ದೈನೇಸಿ ಸ್ಥಿತಿಯನ್ನಷ್ಟೇ ದೀರ್ಘವಾಗಿಸಿ ಹೊರತು ಅಂಬೇಡ್ಕರ್ ಕಂಡ ಕನಸು ಹಾಗ ಪ್ರಯೋಗಗಳನ್ನು ನನಸು ಮಾಡಲು ಅಶಕ್ತವಾಗಿದೆ. ದೃಷ್ಟಿಯಿಂದ ಮೀಸಲಾತಿಗೆ ಸಂಚಕಾರವು ಅ ನಡೆಯುತ್ತಿದೆ.

ಆರು ದಶಕಗಳಿಂದ ಕೆಲವೇ ಅಸ್ಪೃಶ್ಯ ಜಾತಿಗ ಮೀಸಲಾಗಿದ್ದ ಶೇ.15ರಷ್ಟು ಅವಕಾಶಗಳಿಗೆ, ಕಾಲಕಾ ರಾಜಕೀಯ ಲಾಭಕ್ಕೆ, ಹೊಸ-ಹೊಸ ಜಾ ಸಮುದಾಯಗಳನ್ನು ತಂದು ಸೇರಿಸುವ 'ಅಪರಾಧವ ನಡೆಯುತ್ತಿದೆ. ಆದರೆ ಶೇಕಡವಾರು ಮಾ ಬದಲಾಗುವುದಿಲ್ಲ, ಕಳೆದ ಸಂಸತ್ತಿನಲ್ಲಿದ್ದ 'ಸಾಮಾಜಿಕನ್ಯಾ ಖಾತೆಯ ಶ್ರೀಮತಿ ಮೀರಾ ಕುಮಾರ್ ಅವರು ಶೇಕಡವಾರು ಮೀಸಲಾತಿಯನ್ನು ಹೆಚ್ಚಿಸುವ ಪ್ರಸ್ ಮಾಡಿದ್ದಾರಾದರೂ ಅದು ಕಾರ್ಯರೂಪಕ್ಕೆ ಬಂದಿ ಬರಲ್ಲ!! ಈಗ ಮತ್ತೊಮ್ಮೆ ಅವರೇ ಗೆದ್ದು ಬಂ ಚರಿತ್ರೆಯಲ್ಲೇ ಮೊದಲ ಮಹಿಳಾ ಸ್ಪೀಕರ್ ಆಗಿದ್ದಾ ಅಂಬೇಡ್ಕರ್ ಅಂದು ಎತ್ತಿದ್ದ 'ಮಹಿಳಾ ಮೀಸಲ ಮಸೂದೆಗೆ ಹೇಗೆ ಜೀವ ಬಂದೀತು?!

ಈ ಎಲ್ಲವನ್ನು ದಲಿತರು ಯಾವ ಪರಿಭಾಷೆಯ ಅರ್ಥೈಸಬಹುದೆನ್ನುವದೇ ಜಿಜ್ಞಾಸೆಯಾಗಿದೆ. ಚಳವಳಿಗ ಸತ್ತಿವೆ. ಹೋರಾಟಗಾರರೆಂಬುವವರೆಲ್ಲ ಸಕ್ರಿಯ ರಾಜಕೀ ಪಕ್ಷಗಳಲ್ಲಿ ಜಮೆಯಾಗುತ್ತಿದ್ದಾರೆ. ಈ ದೃಷ್ಟಿಯಿಂ ಅಂಬೇಡ್ಕರ್ ಕಂಡುಕೊಂಡಿದ್ದ ಸಮಗ್ರ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಲ್ಪಿಸದೇ ಹೋದ ದಲಿತರ ಹೆಗಲ ಮೇಲಿರುವ ವ್ಯವಸ್ಥೆಯ ಜೋಡಿ-ನಳಿಗೆಯ ಈಡನ್ನು ಹೊಡೆಯುತ್ತಲೇ ಇರುತ್ತದೆ. ಆಧುನಿ ಪ್ರಜಾತಂತ್ರದ ಜೀವಂತ ಸಮಾಧಿಗಳು ತತ್ತೂರ ಬದನವಾಳು, ಬೆಲ್ಚಿ ಕಂಬಾಲಪಲ್ಲಿ, ಖೈರ್ಲಾಂಜಿಯ ರೂಪುಗೊಳ್ಳುತ್ತಿರುತ್ತದೆ.

● ಡಾ.ಕುಂಸಿ ಉಮೇಶ್, ಶಿವಮೊ

ಬೌಂಡರಿಯ ಆಚೆ




ಗುಮಾಸ್ತನ ಬ್ಲಾಗ್-17 ಕೆ.ಫಣಿರಾಜ್

ಈ ಸಾರಿ, ಕ್ರಿಕೆಟ್ ಬಗ್ಗೆ ಒಂದು ಪುಟ್ಟ ಟಿಪ್ಪಣಿ ...ದ್ದೀನಿ. ಯಾಕೆಂದ್ರೆ ಈ ವರ್ಷದ ಈ ತಿಂಗಳು ...ಎಲ್.ಆರ್.ಜೇಮ್ಸ್ ಬರೆದ ಅಪ್ರತಿಮ ಕೃತಿ 'ಬಿಯಾಂಡ್ ಬೌಂಡರಿ' ಪ್ರಕಟವಾಗಿ 50 ವರ್ಷ ಕಳೆತದೆ. ...ಎಲ್.ಆರ್.ಜೇಮ್ಸ್ (1901-1989) ಸಮಾಜವಾದಿ ...ತನೆ-ಚಳವಳಿಗಳ ತುಂಬುಜೀವನಕ್ಕೆ ತನ್ನ ಬದುಕನ್ನು ...ಟ್ಟುಕೊಂಡ ದಿಗ್ಗಜ ಹೋರಾಟಗಾರ; ಕ್ಯಾರಬಿಯನ್ ...ಪಸಮೂಹಗಳ ವಸಾಹತುಶಾಹಿ ಹೋರಾಟಗಳ ...ಹತ್ವವನ್ನು ನಿರೂಪಿಸಿದ ಇತಿಹಾಸಕಾರ. ಹೈಟಿ ಕ್ರಾಂತಿಯ ...ರಿತು 1938ರಲ್ಲಿ ಜೇಮ್ಸ್ ಬರೆದ ಪುಸ್ತಕ 'ಬ್ಲಾಕ್ ...ಕೋಬಿಯನ್ಸ್' ಇಂದಿಗೂ ಒಂದು ಆಕರ ಗ್ರಂಥ. ಜೇಮ್ಸ್ ...ಲೋಕದಾದ್ಯಂತ ಒಂದು ತಲೆಮಾರಿನ ಎಡಪಂಥೀಯ ...ಚಾರಿಕತೆಯನ್ನು ಕಟ್ಟಿ, ತಿದ್ದಿ, ಅಚ್ಚಳಿಯದ ಪ್ರಭಾವ ...ೀರಿದ ದೊಡ್ಡ ಸ್ಟಾರ್. ಜೇಮ್ಸ್ ಪ್ರತಿಭಾವಂತ ...ದಂಬರಿಕಾರ, ನಾಟಕಕಾರ ಹೇಗೋ, ಹಾಗೆ ಕ್ರಿಕೆಟ್ ...ಟಗಾರ-ಬರಹಗಾರ ಕೂಡ. ಕ್ರಿಕೆಟ್, ವೆಸ್ಟ್‌ಇಂಡಿಸ್ ...ಪ ಸಮೂಹಗಳ ಕಪ್ಪುಜನ ಬಿಳಿತೊಗಲಿನ ...ಸಾಹತುಶಾಹಿ ಯಜಮಾನರಿಗೆ ಸೆಡ್ಡು ಹೊಡೆಯುವ ...ದು ಮಾರ್ಗವಾಗಿ ರೂಪು ಪಡೆದ ಬಗೆಯನ್ನು ...ರೂಪಿಸುವ 'ಬಿಯಾಂಡ್ ಎ ಬೌಂಡರಿ' ಬೆರಗಿನ ಪುಸ್ತಕ. ...ದು ವಸಾಹತುಶಾಹಿ ಆಳ್ವಿಕೆಯಡಿ ಬದುಕಿದ ಕಪ್ಪುಜನರ ...ಸಾಮಾಜಿಕ ಬದುಕಿನ ಕಥನವೂ ಹೌದು; ...ಯಜಮಾನರಿಂದಲೇ ಕಲಿತ ಕಲೆಯೊಂದು ಯಜಮಾನಿಕೆಯ ...ವಿರುದ್ಧ ಹೋರಾಟಕ್ಕೆ ಅಸ್ತ್ರ ಮಾಡಿಕೊಳ್ಳುವ ಸಂಕಲ್ಪದ ...ೕಚಕ ಕತೆಯೂ ಹೌದು; ಕ್ರಿಕೆಟ್ ಆಟವನ್ನು ಅದರ ...ಲ್ಲಾ ಕಲಾತ್ಮಕ ಸೂಕ್ಷ್ಮಗಳಲ್ಲಿ ವಿವರಿಸುವ ಸೊಗಸಾದ ...ಸ್ತಕವೂ ಹೌದು. 25 ವರ್ಷಗಳ ಹಿಂದೆ, ಅಮೂಲ್ಯವಾದ ...ಪುಸ್ತಕವನ್ನು ಹೊಂದಿದ್ದ ಕಣ್ಣೆದುರಿಂದ ಆಚೆ ಹೋಗದಂತೆ ...ಚ್ಚರ ವಹಿಸುವ ಗೆಳೆಯರ ಎದುರಲ್ಲೇ ಪಟ್ಟು ಹಿಡಿದು ...ತು ಮುಕ್ಕಾಲುವಾಸಿ ಓದಿದ್ದೆ. ಇಂದಿಗೂ ನಾನು ...ಮುಕುವ ಊರಿನ ಸುತ್ತಮುತ್ತಲಲ್ಲಿ ಆ ಪುಸ್ತಕ ಸಿಗದು. ...ನ್ನೆ, ಏಪ್ರಿಲ್ 5ರ "ದಿ ಹಿಂದು' ಪತ್ರಿಕೆಯಲ್ಲಿ, ಜೇಮ್ಸ್ ...ಡತಿ ಸೆಲ್ಮ ಆ ಪುಸ್ತಕ, ಅದರ ಪ್ರಕಟಣೆಗೆ ಪಟ್ಟ ಕಷ್ಟ ...ತ್ತು ಅದರ ಮಹತ್ವ ಕುರಿತು ಬರೆದ ಬರಹ ಓದಿ ...ಷಿಯಾಯಿತು; ಹಾಗೆಯೇ, ಆ ಪುಸ್ತಕ ಲಭ್ಯವಿದ್ದರೆ ...ಣ-ಜಾಣೆಯರಿಗೆ ಒಂದು ಪರಿಚಯ ...ಡಿಸಬಹುದಿತ್ತಲ್ಲ, ಎಂಬ ಹಳಹಳಿಕೆ ಮಾತ್ರ ದುಂಡೆಯಾಗಿ ...ಳಿಯಿತು. ಆ ಹೊಟ್ಟೆಯುರಿಯಲ್ಲೇ ಏಶಿಯಾದಲ್ಲಿ ಕ್ರಿಕೆಟ್ ಕುರಿತ ಒಂದು ಟಿಪ್ಪಣಿ ಕೊಡ್ತಾ ಇದ್ದೇನೆ.


****

ಕ್ರಿಕೆಟ್ ಹುಚ್ಚರು ಆ ಮ್ಯಾಚನ್ನು ಮರೆಯೋದಿಲ್ಲ. 1987, ಅಕ್ಟೋಬರ್. ಶಾರ್ಜಾದಲ್ಲಿ ಆಫ್ರೋ-ಏಶಿಯಾ ಕಪ್‌ನ ಅಂತಿಮ ಪಂದ್ಯ. ಭಾರತದ ತಂಡ ಮೊದಲು ಬ್ಯಾಟ್ ಮಾಡಿ 50 ಓವರುಗಳಲ್ಲಿ 245 ರನ್ ಮಾಡಿದೆ. ಪಾಕಿಸ್ತಾನ ತಂಡ ಒದ್ದಾಡಿಕೊಂಡು, 47ನೇ ಓವರ್ ಮುಗಿಯುವಾಗ 7 ವಿಕೆಟ್ ಕಳ್ಕೊಂಡು 215 ರನ್ ಮಾಡಿದೆ. ಮೂರು ಓವರಲ್ಲಿ 31 ರನ್ ಮಾಡಿ ಪಾಕಿಸ್ತಾನ ಗೆಲ್ಲೋದು ಕಷ್ಟ ಅನಿಸ್ತಾ ಇದೆ. ಆದರೆ ಜಾವೇದ್ ಮಿಯಾಂದಾದ್ ಆಡ್ತಾ ಇದ್ದಾನೆ. 49ನೇ ಓವರ್‌ನಲ್ಲಿ ಮದನ್ ಲಾಲನ ಬೌಲಿಂಗನ್ನು 11 ರನ್ನಿಗೆ ಚಚ್ಚಿ ಸೆಂಚುರಿ ಹೊಡೆದಿದ್ದಾನೆ. ಕೊನೆಯ ಓವರಿನ ಕೊನೆ ಬಾಲಿನಲ್ಲಿ ಪಾಕಿಸ್ತಾನಕ್ಕೆ 4 ರನ್ ಬೇಕಿದೆ. ಮಿಯಾಂದಾದ್ ಬಾಲ್ ಎದುರಿಸಲು ನಿಂತವ್ನೆ. ಭಾರತದ ನಾಯಕ ಕಪಿಲ್ ದೇವ್, ಸಂದಿಗಳನ್ನೆಲ್ಲಾ ತುಂಬಿ, ಫೀಲ್ಡಿಂಗ್ ಟೈಟ್ ಮಾಡವ್ನೆ.



ಚೇತನ್ ಶರ್ಮ ಓಡ್ಕಂಡ್ ಬಂದು ಕೊನೆ ಬಾಲ್ ಹಾಕ್ತಾನೆ. ಹಾಕಿದ್ದಾದ್ರು ಎಂಥ ಬಾಲು! ಫುಲ್ ಟಾಸ್ಸು-ಅದೂ ಮಿಯಾಂದಾದನಿಗೆ. ಸಿಕ್ಸರ್ ಇಕ್ಕಿ ಪಾಕಿಸ್ತಾನಕ್ಕೆ ಮ್ಯಾಚ್ ಗೆದ್ದ್ಕೊಟ್ಟ ನೋಡಿ ಮಿಯಾಂದಾದ್! ಹಿಂಗೇ 'ಮಿಯಾಂದಾದ್ ಭಾರತದ ತಂಡದಿಂದ ಎಷ್ಟೋ ಮ್ಯಾಚುಗಳನ್ನು ಏಕಾಂಗಿಯಾಗಿ ಹೋರಾಡಿ ಕಿತ್ಕೊಂಡವ್ನೆ. ಅವನ್ನೆಲ್ಲ ಬರಿ ಕ್ರಿಕೆಟ್ಟನ್ನು ಮಾತ್ರ ಮೆಚ್ಚೋ ಮಂದಿ ಭಾರತ-ಮಿಯಾಂದಾದ್ ಮ್ಯಾಚುಗಳು ಅಂತ ನೆನಿಸ್ಕೋತಾರೆ.

ಕರಾಚಿಯ ಬಡ ಕುಟುಂಬದಿಂದ ಬಂದ, ವಿದ್ಯಾವಂತನಲ್ಲದ, ಮಿಯಾಂದಾದನಿಗೆ ಕ್ರಿಕೆಟ್ ಮತ್ತು ಕ್ರಿಕೆಟ್ ಮಾತ್ರವೇ ತನ್ನತನದ ಗುರುತು. 19ನೇ ವಯಸ್ಸಿನಲ್ಲಿ ಅಂಗಣಕ್ಕೆ ಇಳಿದವನು, 20 ವರ್ಷ ಆಡಿ, ತನ್ನ ಜಗಳಗಂಟತನ, ಜಿಗುಟುತನ, ಅದ್ಭುತ ಬ್ಯಾಟಿಂಗ್ ಕೌಶಲದಿಂದ ಕ್ರಿಕೆಟ್ ಇತಿಹಾಸದಲ್ಲಿ ತನ್ನ ಹೆಸರನ್ನು ಅಳಿಸದ ಹಾಗೇ ಬರೆದವನು. ಇಮ್ರಾನ ಖಾನನ ತರಹ, ಇಂಗ್ಲೆಂಡ್ ವಿದ್ಯಾಭ್ಯಾಸ, ಶ್ರೀಮಂತಿಕೆ ಯಾವುದೂ ಅವನಿಗಿಲ್ಲ. ಕ್ರಿಕೆಟೊಂದು ಇಲ್ಲದೇ ಇದ್ದಿದ್ದರೇ ಕರಾಚಿಯ ಬೀದಿಬದಿಯ ವ್ಯಾಪಾರ ಮಾಡಿಕೊಂಡು ಹೊಟ್ಟೆಪಾಡು ನಡೆಸಬೇಕಾಗಿದ್ದವನು. ಆಟದ ಅಂಗಳದ ಒಳಗಿನ ಅವನ ಜಗಳಗಂಟತನ ಜಗದ್ವಿಖ್ಯಾತ; ಅದು ಕೂಡ ಅವನ ಬ್ಯಾಟಿಂಗ್ ಕಲೆಯ ರಕ್ತ-ಮಾಂಸ; 'ಬಡವನ ಕೋಪ (ಅವನ) ದವಡೆಗೇ ಮೂಲ' ಅನ್ನೋದು ಗಾದೆ. ಮಿಯಾಂದಾದ್ ಅದನ್ನು ತನ್ನ ಎದುರಾಳಿಗಳ ದವಡೆಗೆ ತಿರುಗಿಸಿದವನು. ಆಟದ ಅಂಗಳದ ಹೊರಗೆ ಮಹಾಸ್ನೇಹಮಯಿ ಎಂದು ಹೆಸರು ಪಡೆದಾತನಿಗೆ, ಆಟದ ಅಂಗಳದಲ್ಲಿ ಜಗಳ ತನ್ನ ಕಲೆಯ ಕವಚ. ಈಗ ಹಿಂತಿರುಗಿ ನೋಡಿದರೆ, ಅಂಕಿ-ಸಂಖ್ಯೆಗಳ ಲೆಕ್ಕಾಚಾರದಲ್ಲಿ ಖ್ಯಾತನಾಮರ ಸಾಲಲ್ಲಿ ಅವನ ಹೆಸರು ತಕ್ಷಣ ಕಣ್ಣಿಗೆ ಕಾಣದು. ಆದರೆ ಅಂಕಿಸಂಖ್ಯೆ ಮಾತ್ರವೇ ಕ್ರಿಕೆಟ್ ಅಲ್ಲ ಎಂದು ತೋರಿದವನು ಮಿಯಾಂದಾದ್. ಈ ಅಂಕಿ-ಸಂಖ್ಯೆಯ ಲೆಕ್ಕಾಚಾರದಲ್ಲಿ ಗಾವಸ್ಕರನ ಮುಂದೆ ಮಿಯಾಂದಾದ್ ಮಂಕು, ಸರಿ. ಆದ್ರೆ, ಒಂದು ಕತೆ ಪ್ರಕಾರ, ಗಾವಸ್ಕರನ ಹೆಂಡತಿ ಕವಿತಾರನ್ನು 'ನಿಮ್ಮ ನೆಚ್ಚಿನ ಬ್ಯಾಟ್ಸ್‌ಮನ್ ಯಾರು?' ಅಂತ ಕೇಳಿದ್ದಕ್ಕೆ, ಅವರು 'ಬರಿ ರನ್ನುಗಳ ಚೆಂದದಲ್ಲಿ ಹೇಳೋದಾದ್ರೆ ಗಾವಸ್ಕರ್. ಆದ್ರೆ, ನನ್ನ ಜೀವ ಉಳಿಸೋಕೆ ಯಾರಾದ್ರೂ ಬ್ಯಾಟಿಂಗ್ ಮಾಡ್ಬೇಕು ಅನ್ನೋ ಸ್ಥಿತಿ ಬಂದ್ರೆ ನನ್ನ ಆಯ್ಕೆ ಮಿಯಾಂದಾದ್' ಅಂದ್ರತೆ! ಇಂಥ ಅಪ್ರತಿಮ ಆಟಗಾರ ಕೋಮುವಾದಿಗಳಿಗೆ ಬರಿ 'ಮುಸಲ್ಮಾನ ಪಾಕಿ ಶತ್ರು'ವಾಗಿ ಕಾಣುತ್ತಾನೆ. ಮೊನ್ನೆ ಅವನು ದೆಹಲಿಗೆ ಬರಲಿಕ್ಕೆ ವಿಸಾ ಕೊಡಕೂಡದು ಅಂತ ತಕರಾರು ಮಾಡಿದ್ರು. ಅವನು ನೊಂದು ಬರಲಿಲ್ಲ. ಮಿಯಾಂದಾದನ ಕುರಿತ ಈ ಬಗೆಯ ಕೋಮುವಾದಿ ಲೋಕಭಾವದ ಕುರೂಪ ಪ್ರದರ್ಶನವಾದದ್ದು ಬೆಂಗಳೂರಲ್ಲಿ, 1996ರಲ್ಲಿ ಬೆಂಗಳೂರಲ್ಲಿ ನಡೆದ, ಭಾರತ-ಪಾಕಿಸ್ತಾನಗಳ ನಡುವಿನ ವಿಶ್ವಕಪ್ ಮ್ಯಾಚ್ ಮಿಯಾಂದಾದನ ಕ್ರಿಕೆಟ್ ಜೀವನದ ಕೊನೆಯ ಒನ್ ಡೇ ಮ್ಯಾಚ್. ಅದೂ ನಾಟಕೀಯ ಪಂದ್ಯ. ಅವತ್ತೂ ಮಿಯಾಂದಾದ್ ಕರ್ಣನ ಹಾಗೆ ಹೋರಾಡಿ ಔಟ್ ಆಗಿ ಪೆವಿಲಿಯನ್ ಕಡೆ ಹೊರಟಾಗ, ಕಿಕ್ಕಿರಿದು ತುಂಬಿದ ಕ್ರೀಡಾಂಗಣದಲ್ಲಿ ಯಾರೂ ಆ ಕಲಾಗಾರನಿಗೆ ಗೌರವ ಸೂಚಿಸಲು ಎದ್ದು ನಿಂತು ಚಪ್ಪಾಳೆ ತಟ್ಟಲಿಲ್ಲ! ಬದಲಿಗೆ ಶತ್ರುವೊಬ್ಬ ಸೋತು ಸುಣ್ಣವಾಗಿ ಹೊರಟಾಗ ಹಾಕುವ ಕುಹಕದ ಕೇಕೆ ಮಾತ್ರ ಕಿವಿಗಡಚಿಕ್ಕುತಿತ್ತು ಎಂದು ಪ್ರಖ್ಯಾತ ಲೇಖಕ ರಾಮಚಂದ್ರ ಗುಹಾ ಬರೆದಿದ್ದಾರೆ. ಆದರೆ, ಮರುದಿನ ಕಪಿಲ್ ದೇವ್, ಮಿಯಾಂದಾದ್ ಬಗ್ಗೆ ಅತ್ಯಂತ ಪ್ರೀತಿಯ ಗೌರವಪೂರ್ಣ ಸೇರಿಯನ್ನು ಬರೆದ. ಆ ಬರಹದಲ್ಲಿ, ಕಪಿಲ್ ಮಿಯಾಂದಾದನ ಅಂಗಣದೊಳಗಿನ ಜಗಳಗಂಟತನ ಮತ್ತು ಅದರಾಚೆಯ ಜಾತಿ-ಮತ-ರಾಷ್ಟ್ರಗಳ ಸಂಕುಚಿತತೆಯನ್ನು ಮೀರಿದ ಪ್ರೀತಿಯನ್ನು ನೆನಪಿಸಿಕೊಳ್ಳುತ್ತಾನೆ. ಇದಕ್ಕೆ ಉದಾಹರಣೆಯಾಗಿ ಕಪಿಲ್ ನೆನಪಿಸಿಕೊಳ್ಳುವ ಘಟನೆ ಸ್ವಾರಸ್ಯಕರವಾಗಿದೆ. 1984ರಲ್ಲಿ, ಕಪಿಲ್ ದೇವನ ನಾಯಕತ್ವದಲ್ಲಿ, ಭಾರತದ ತಂಡ ಪಾಕಿಸ್ತಾನಕ್ಕೆ ತೆರಳಿತ್ತು. ಅದು ಜನರಲ್ ಜಿಯಾ-ಉಲ್-ಹಕ್‌ನ ಮೂಲಭೂತವಾದಿ




ಮಿಲಿಟರಿ ಸರ್ವಾಧಿಕಾರಿ ಆಳ್ವಿಕೆಯ ಕಾಲ. ಪಾಕಿಸ್ತಾನದಲ್ಲಿ ಆಗ ಹೆಂಡ-ಸರಾಯಿ ನಿಷೇಧ. ಕಪಿಲ್ ದೇವನಿಗೆ ದಿನದಾಟದ ದಣಿವನ್ನು ಮಣಿಸಲು ರಾತ್ರಿ ಎಣ್ಣೆ ಬೇಕು. ಇಲ್ಲಿ ಸಿಗದಿಲ್ಲ ಎಂದು ಹ್ಯಾಪು ಮೋರೆ ಹಾಕಿಕೊಂಡಿದ್ದನಂತೆ. ಆಗ, ಎಂದಿನಂತೆ, ಮಿಯಾಂದಾದ್ ಭಾರತ ತಂಡದ ಮಿತ್ರರ ಜೊತೆ ಹರಟೆಗೆ ಹೋಟೆಲಿಗೆ ಬಂದನಂತೆ. ಕಪಿಲ್ ಅವನೆದುರು ತನ್ನ ಅಳಲು ತೋಡಿಕೊಂಡದ್ದೇ, 'ಇರಯ್ಯ ಈಗ ಬಂದೆ' ಎಂದು ಹೋದ ಮಿಯಾಂದಾದ್, ಅರ್ಧ ತಾಸೊಳಗೆ ಒಂದು ಡಜನ್ ಬಾಟ್ಲ ತಂದ್ಕೊಟ್ಟನಂತೆ. 'ಇಂಥದೆಲ್ಲ ಸಾಧ್ಯವಾಗೋದು ಮಿಯಾಂದಾದನಿಗೆ ಮಾತ್ರ. ಅಂಥ ಪ್ರೀತಿಯ ಘಟಿಂಗ ಸಿಗೋದು ಕಮ್ಮಿ' ಅಂತಾನೆ ಕಪಿಲ್. ಆದರೆ, ಮಿಯಾಂದಾದ್ ಬಗ್ಗೆ ಹೀಗೆ ದಿಲ್ ಕೋಲ್ ಕೇ ಪ್ರೀತಿ ತೋರಿಸಿದವನು, ಭಾರತದ ಕ್ರಿಕೆಟಿಗರಲ್ಲಿ ಕಪಿಲ್ ಮಾತ್ರ. ಯಾಕೆ? ಅನ್ನೋ ಪ್ರಶ್ನೆಯ ಎಳೆಯನ್ನು ಹಿಡಿದು ಹೊರಟರೆ ನಮಗೆ ಕಪಿಲ್‌ನ ಜಿಗುಟು ಜೀವನದ ಕಥೆ ಬಿಚ್ಚಿಕೊಳ್ಳದೆ.

******

ಕ್ರಿಕೆಟ್ ಮಾತ್ರವಲ್ಲ, ನಾನು ಹುಚ್ಚುಹಿಡಿಸಿಕೊಂಡ ಯಾವುದೇ ಜನಪ್ರಿಯ ಪ್ರಕಾರವನ್ನು ಕೊಂಚ ಗಂಭೀರವಾಗಿ ಓದಿಕೊಳ್ಳುವಂತೆ, ಅದರ ಒಳಗಿಂದ ಕಾಣುವ ಸಾಮಾಜಿಕ ಅಸಮಾನತೆ, ಲೋಕಾಗ್ರಹಗಳಿಂದ ಅರಿವು ಬೆಳೆಸಿಕೊಳ್ಳುವಂತೆ ಮಾಡಿದ್ದು ಜೇಮ್ಸನ ಈ ಮೇರುಕೃತಿ. 'ಬಿಯಾಂಡ್ ಎ ಬೌಂಡರಿ' ನಂತರ ಲೋಕಾದ್ಯಂತ ಆಟವನ್ನು ಸಮಾಜ ಅಧ್ಯಯನದ ಒಳಗಣ್ಣು ಮಾಡಿಕೊಂಡು ಬರೆಯುವ ಒಂದು ಬರಹ ಪರಂಪರೆಯೇ ಶುರುವಾಯಿತು. ಅಂಕಲ್ ಜೇಮ್ಸನಿಗೆ ಒಂದು ಬಡಾ ಸಲಾಂ.

ಸಂಸ್ಕೃತಿಯ ಅಳಿವು, ಉಳಿವು

'ಪತ್ರಿಕೆ' ಮುತ್ಸದ್ದಿಯಾಗಿ ಎಲ್ಲರತ್ತ ಮುಗುಳ್ನಗುತ್ತಾ ...ಳ್ಳುಗಳನ್ನು ಬೊಗಳುವುದು ಸುಲಭವಾಗಿತ್ತು, ಹಾಗೆ ...ಮಾಡುವುದಿಲ್ಲ. ಸಾಹಿತ್ಯದ ಬಗ್ಗೆ 'ಪತ್ರಿಕೆ'ಯ ನಿಲುವನ್ನೇ ...ಗೆದುಕೊಳ್ಳಿ. ಇಂಗ್ಲೆಂಡ್, ಅಮೆರಿಕದಲ್ಲಿ ಈಗ ...ಕಟವಾದ ಎಲ್ಲ ಪುಸ್ತಕಗಳ ಬಗ್ಗೆಯೂ ಒಳ್ಳೆ ...ಮಾತಾಡುವುದು ಅಭ್ಯಾಸವಾಗಿಬಿಟ್ಟಿದೆ; ಇಂಗ್ಲೆಂಡಿ ...ನಂತೂ ಲೀವಿಸ್, ಎಂಪ್ಸನ್, ಆರ್ನಾಲ್ಡ್ ತರಹದವರು ...ಲ್ಲವೇ ಇಲ್ಲ. ಅಲ್ಲಿಯ ದಿನಪತ್ರಿಕೆಗಳ ಸಂಪಾದಕರು ...ವಿಮರ್ಶಕರಿಗೆ, 'ಲೇಖಕರು ಮತ್ತು ಜನ ...ಇಷ್ಟಪಡುವಂಥದನ್ನು ಬರೆಯಿರಿ' ಎಂದು ಹೇಳುತ್ತಾರೆ. ...ಹೀಗಾಗಿ ಎಲ್ಲವೂ ಸ್ನೇಹಮಯವಾಗಿದೆ. ಅಂದರೆ ...ನ್ನೊಂದು ಅರ್ಥದಲ್ಲಿ ಯಾರೂ ಸಾಹಿತ್ಯವನ್ನು ...ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಲೀವಿಸ್‌ನ 'ಸ್ಕ್ರೂಟಿನಿ', ...ಲಿಯಟ್‌ನ 'ಕ್ರೈಟೀರಿಯನ್' ಇಲ್ಲ. ಉತ್ತಮ ಸಾಹಿತ್ಯ ...ನ್ನುವುದು ಸಂಸ್ಕೃತಿಯ, ಶಿಕ್ಷಣದ ಮುಖ್ಯ ಭಾಗ ಎನ್ನುವುದು ಎಲ್ಲರಿಗೂ ...ಮರೆತುಹೋಗಿದೆ.




...ನಾನು ವೈಯಕ್ತಿಕವಾಗಿ ಸಾಹಿತ್ಯವನ್ನು ತುಂಬ ಇಷ್ಟಪಡುತ್ತೇನೆ; ಉತ್ತಮ ...ಸಾಹಿತ್ಯ ಎಲ್ಲರ ಗಮನಕ್ಕೆ ಬರಬೇಕೆಂದು ಪ್ರಯತ್ನಿಸುತ್ತೇನೆ. ಒಂದು ಕೆಟ್ಟ ...ಪುಸ್ತಕವನ್ನು, ಗೊಂದಲಮಯ ಶೈಲಿಯನ್ನು, ಅಸೂಕ್ಷ್ಮ ಗ್ರಹಿಕೆಯನ್ನು ...ಹೊಗಳುವುದು ಸಂಸ್ಕೃತಿಗೆ ಮಾಡುವ ವಂಚನೆ ಎಂದು ತಿಳಿಯುತ್ತೇನೆ; ...ಹಾಗೆಯೇ ನಮ್ಮಲ್ಲಿ ಇಲ್ಲಿಯವರೆಗೆ ಸಾಗಿಬಂದಿರುವ ಉತ್ತಮ ವಿಮರ್ಶೆ ...ಅಥವಾ ಸುಳ್ಳು, ಸಾಮಾಜಿಕ ಬೆನ್ನುಚಪ್ಪರಿಕೆ ಅಥವಾ ಅಸಮರ್ಥನೀಯ ...ಂಡನೆ- ಎಲ್ಲವೂ ಸಂಸ್ಕೃತಿಗೆ ಬಗೆಯುವ ಮೋಸ ಎಂದು ತಿಳಿಯುತ್ತೇನೆ. ...ನೇನೂ ಮಹಾ ವಿಮರ್ಶಕನಲ್ಲದಿರಬಹುದು; ನಮ್ಮ ನಟರಾಜ, ...ಹೋಗಪ್ಪನವರ್, ಮಂಜುನಾಥ್, ವಾತ್ಸಾಯನ ಮುಂತಾದವರು ತಪ್ಪು ಮಾಡಬಹುದು. ಆದರೆ ಬೇಕೆಂತಲೇ ಮುತ್ಸದ್ದಿಯಾಗುವುದು, ಯಾವುದೋ ಲಾಭಕ್ಕಾಗಿ, ಯಾವನೋ ಒಬ್ಬ ಪ್ರೊಫೆಸರ್‌ನನ್ನು ಮೆಚ್ಚಿಸುವುದಕ್ಕಾಗಿ ಸುಳ್ಳು ಹೇಳುವುದು ನಿಜಕ್ಕೂ ದ್ರೋಹ. ನಮಗನ್ನಿಸಿದ್ದನ್ನು ಆಳವಾಗಿ ಧ್ಯಾನಿಸಿ, ಜೀವಂತಿಕೆ ಅಥವಾ ನಿರ್ಜೀವತೆಯನ್ನು ಕಂಡುಕೊಂಡು, ತಾಂತ್ರಿಕ ವೈಶಿಷ್ಟ್ಯವನ್ನು ಗಮನಿಸಿ ವಿಮರ್ಶೆಯಾಗಿ ಮಂಡಿಸುವುದು ಒಳ್ಳೆಯದು ಎಂದು ನಾವೆಲ್ಲ ನಂಬುತ್ತೇವೆ. ಇದು ನಮ್ಮ ಸಾಹಿತ್ಯ ರಸಿಕರಿಗೆ ಮತ್ತು ಈಗ ವ್ಯಕ್ತಿತ್ವ ಬೆಳೆಸಿಕೊಳ್ಳುತ್ತಿರುವವರಿಗೆ ನೆರವಾಗಬಲ್ಲದಾಗುತ್ತದೆ.

ವಿಮರ್ಶೆ ಎನ್ನುವುದು ಅಭಿಪ್ರಾಯವಲ್ಲ; ಅದು ಒಂದು ಕೃತಿಯ ಸಂಕೀರ್ಣ, ಧ್ಯಾನಸ್ಥ ಗ್ರಹಿಕೆ. ಈ ಧ್ಯಾನದ ಸಾರವಾಗಿ ಹೇಳಿಕೆ ಇರಬಹುದು. ಆದರೆ ಇದು ವಿಮರ್ಶಕನ ಸ್ಪಂದನದ ಭಾಗವಾಗಿದ್ದಾಗ ಮಾತ್ರ ಉಪಯುಕ್ತ.

'ಐಲು'ಗಳನ್ನು ಕುರಿತು

ಮೇಲಿನ ಪುಟ್ಟ ನೋಟ್ ಬರೆಯುತ್ತಿರುವಾಗಲೇ ಇನ್ನೊಂದು ಮಾತು ಹೇಳಬೇಕು. ಕರ್ನಾಟಕದ ನಾಲ್ಕಾರು ಪಟ್ಟಣಗಳಿಂದ ಕೆಲವರು ಉದ್ಧಟರ ಪತ್ರಗಳು ಬರುತ್ತವೆ; ಅವುಗಳಿಗೆಲ್ಲ ಪ್ರತ್ಯೇಕವಾಗಿ ಉತ್ತರ ಹೇಳಲಾಗುವುದಿಲ್ಲವಾದ್ದರಿಂದ ಇಲ್ಲಿ ಚಿಕ್ಕದಾಗಿ ಬರೆಯುತ್ತಿದ್ದೇನೆ. ಈ ಉದ್ಧಟರು 'ಪತ್ರಿಕೆ'ಯ ನಿಷ್ಠುರತೆ ಮತ್ತು ವಸ್ತುನಿಷ್ಠೆಯನ್ನು ಹೇಗೆ ತಪ್ಪಾಗಿ ತಿಳಿದು ಮೂರ್ಖರಾಗಿದ್ದಾರೆ ಎನ್ನುವುದು ನನಗೆ ನಗೆ ತರಿಸುತ್ತದೆ. ಚಾಮರಾಜನಗರದ ಒಬ್ಬನಿಗೆ ಕಾಗುಣಿತ ಕೂಡ ಬರುವುದಿಲ್ಲ; great ಅನ್ನುವುದನ್ನು grate ಎಂದು ಬರೆಯುವ ಈತನಿಗೆ ತನ್ನ ಕನ್ನಡವನ್ನು ಕೂಡ ಸರಿಪಡಿಸಿಕೊಳ್ಳುವ ವ್ಯವಧಾನವಿಲ್ಲ. ಆದರೆ 'ಪತ್ರಿಕೆ' ಮಹಿಳಾ ಮೀಸಲಾತಿಗೆ ತೆಗೆದುಕೊಂಡ ನಿಲುವನ್ನೊಳಗೊಂಡು ಯಾರೋ ನನ್ನ ಬಗ್ಗೆ ಬರೆದದ್ದಕ್ಕೆ ನಾನೇ ಕಾರಣ ಎನ್ನುವಂತೆ ಪತ್ರದಲ್ಲಿ ಕಾರಿಕೊಂಡಿರುತ್ತಾನೆ. ಒಬ್ಬಳು, 'ಮಹಿಳೆ' ಗುಲ್ಬರ್ಗಾದಿಂದ ಕಾಗದ ಬರೆದು ಪ್ರತಿಭಾವಂತರು ಹೇಗಿರಬೇಕು ಎಂದು ಪೆದ್ದುಪೆದ್ದಾಗಿ ಕೊರೆಯುತ್ತಾಳೆ; ಗೌರಿಬಿದನೂರಿನ ಇನ್ನೊಬ್ಬಳು ನಿಮ್ಮಿಗೆ ನಾನು ಪ್ರೇಮಿಯಂತೆ ಪತ್ರ ಬರೆಯುತ್ತೇನೆಂದು ಆಕ್ಷೇಪಿಸಿ ಹಾಸ್ಯಾಸ್ಪದಳಾಗುತ್ತಾಳೆ. ದೊಡ್ಡಬಳ್ಳಾಪುರದ ಒಬ್ಬ ಗೊಂದಲಿಗ ಬೇಕೆಂತಲೇ ಬೆಂಗಳೂರಿನ ಬ್ಲಾಕ್‌ಮೇಲ್ ಪತ್ರಕರ್ತನ ಸುಳ್ಳುಗಳನ್ನು ನಂಬಿ 'ಆತ ಎಂಥ ರಿಸ್ಕ್' ತೆಗೆದುಕೊಳ್ಳುತ್ತಾನೆ ಎಂದು ಘೋಷಿಸಿ 'ಪತ್ರಿಕೆ'ಯನ್ನು ಹೀಯಾಳಿಸುತ್ತಾನೆ.



ಧೈರ್ಯ ಮತ್ತು ಸೂಕ್ಷ್ಮಜ್ಞತೆ ಇಲ್ಲದೆ ಕನಿಷ್ಠ ವಾಸ್ತವವನ್ನು ಕೂಡ ನೋಡುವುದು ಕಷ್ಟ ಎಂದು ನಂಬುವ 'ಪತ್ರಿಕೆ' ಅದು ಹೇಗೆ ಈ ಮೂರ್ಖರಿಗೆ ಧಿಮಾಕು, ಅಸಮರ್ಥನೀಯ ಅಭಿಪ್ರಾಯ ಮಂಡನೆ, ಕೊಳಕುತನ ಕಲಿಸಿತೋ ಗೊತ್ತಿಲ್ಲ; ಯಾಕೆಂದರೆ ಮೇಲೆ ಹೇಳಿದ ತರಹದ ಜನರೆಲ್ಲ 'ಪತ್ರಿಕೆ'ಯ ಬಗ್ಗೆ ಹುಚ್ಚರು. ಹೀಗಿದ್ದಾಗಲೇ ಅವರಲ್ಲಿ ಕೆಲವರು ಆರೆಸ್ಸೆಸ್‌ಗಳಾಗಿರಬಹುದು; ಇನ್ನು ಕೆಲವರು ಎಡಪಂಥೀಯರಾಗಿರಬಹುದು. ಆದರೆ ಇದು ಯಾವುದೂ ಈ ಐಲುಗಳ ವರ್ತನೆಯನ್ನು, ಕನಿಷ್ಠ ಸಿದ್ಧತೆ ಇಲ್ಲದಿರುವುದನ್ನು, ಒಂದು ಸಂಕೀರ್ಣ ನಿಲುವನ್ನು ಅರ್ಥಮಾಡಿಕೊಳ್ಳಲಾಗದ ದೌರ್ಬಲ್ಯವನ್ನು ಮನ್ನಿಸುವುದಿಲ್ಲ. 'ಪತ್ರಿಕೆ' ಎಲ್ಲ ನಂಬಿದ ಫಾರ್ಮುಲಾಗಳನ್ನು, ನಿರೀಕ್ಷಿತ ಸುರಕ್ಷಿತ 'ಜಾರ್ಗನ್'ಗಳನ್ನು ತಿರಸ್ಕರಿಸುತ್ತದೆ. ಹಾಗೆಯೇ ಯಾವನನ್ನೂ ಪೂರ್ತಿ ಕೆಟ್ಟವನು ಅಥವಾ ಪೂರ್ತಿ ಒಳ್ಳೆಯವನು ಎಂದು ತಿಳಿಯುವುದಿಲ್ಲ. ಮನುಷ್ಯನ ಬದುಕಿನಲ್ಲಿ ಆತ ಸೃಷ್ಟಿಸಿದ ಸಂಸ್ಥೆಗಳು ಮತ್ತು ಆತ ನಿರೂಪಿಸಿದ ವಿಚಾರಗಳು ಕೂಡ ಅವನಂತೆಯೇ ಜಟಿಲವಾಗಿರುತ್ತವೆ. ಮಹಿಳೆಯರ ಮೀಸಲಾತಿ, ನಿರುದ್ಯೋಗಿಗಳ 'ಭತ್ಯೆ', ಅಲ್ಪಸಂಖ್ಯಾತರ ಅಥವಾ ದಲಿತರ ಘೋಷಣೆ, ಗಾಂಧೀಜಿಯ ಮಹಾತ್ಮಗಿರಿ- ಯಾವುದನ್ನು ತೆಗೆದುಕೊಂಡರೂ ಅದಕ್ಕೆ ಜೀವಂತ ಪ್ರತಿಕ್ರಿಯೆ ನೀಡುವುದು ಮುಖ್ಯವಾಗಿರುತ್ತದೆ. ಅದು ಮಾತ್ರ ಇಲ್ಲಿ ಹೊಸ ಚಿಂತನೆಗೆ ಅವಕಾಶ ಮಾಡಿಕೊಡುತ್ತದೆ.

● 04-03-1998

ನಿಮ್ಗೆ ಬುದ್ಧಿ ಐತಾ ಸಾ

ಭ್ರಷ್ಟಾಚಾರರಹಿತ ಚುನಾವಣೆ ನಡೆಸಬೇಕು ಅಂತ ಚುನಾವಣಾ ಆಯುಕ್ತರು ಶಾನೆ ತಿಣುಕುತ್ತಿರುವಂತಿದೆ. ಅವರಿಗೆ ಯಾಕೋ ಕೆಎಎಸ್ ಅಧಿಕಾರಿಗಳ ಮೇಲೆ ಅನುಮಾನ. ಈ ಅಧಿಕಾರಿಗಳು ಅಂದರೆ ಖದೀಮರು, ನುಂಗಣ್ಣರು, ಸ್ಥಳೀಯ ಮುಖಂಡರ ಜೊತೆ ಹೊಂದಾಣಿಕೆ ಮಾಡಿಕೊಂಡಿರುವವರು. ಹೆಂಗೋ ಬಡ್ತಿಪಡೆದು ಜಿಲ್ಲಾಧಿಕಾರಿ ಕುರ್ಚೀಲಿ ಕುಂತಿರೋರು. ಇಂತೋರ ಇಟ್ಕೊಂಡು ಚುನಾವಣೆ ನಡೆಸಿದ್ರೆ ಅವರೆಲ್ಲ ಭ್ರಷ್ಟಾಚಾರಿಗಳಿಗೆ ಕುಮ್ಮಕ್ಕು ಕೊಡುವುದು ಖಾತರಿ. ಅದೇ ಐಎಎಸ್ ಮಾಡಿದವರಾದರೆ ಇನ್ನು ಚಿಕ್ಕ ವಯಸ್ಸಿನೋರು. ದುಡ್ಡು ಕಾಸು ಕೊಡದೆ ಅಧಿಕಾರಕ್ಕೆ ಬಂದಿರೋರು. ನಿಯತ್ತು ಅನ್ನೋದು ಇನ್ನೂ ಇರುತ್ತೆ. ಭ್ರಷ್ಟಾಚಾರಿಗಳನ್ನ ಬಲಿಹಾಕ್ತಾರೆ ಅಂತೆಲ್ಲಾ ಯೋಚಿಸಿರಬಹುದು. ಉತ್ತರ ಪ್ರದೇಶದಲ್ಲಿ ಐಎಎಸ್ ಮಾಡಿದ ಇಂತ ಅಧಿಕಾರಿಗಳೇ ಸಾರ್ವಜನಿಕವಾಗಿ ಮುಖ್ಯಮಂತ್ರಿ ಚಪ್ಪಲಿ ಒರೆಸಿದ್ದು, ಅಧಿಕಾರದಲ್ಲಿರೋ ರಾಜಕಾರಣಿಗಳಿಗೆ ದೀರ್ಘ ದಂಡ ನಮಸ್ಕಾರ ಮಾಡಿದ್ದೂ ನೆನಪೇ ಆಗಲಿಲ್ಲವೇನೋ ಅಥವಾ ಎಳಸು ಮುಂದೇವು ಒಂದಿಷ್ಟು ಎಡವಟ್ಟು ಮಾಡಿಕೊಳ್ಳಬಹುದೇನೋ? ಆದರೆ ಲಂಚ ರುಜುವತ್ತಿಗೆ ಕೈಹಾಕೋರಲ್ಲ ಅಂದುಕೊಂಡ್ರೋ ಏನೋ. ಅಂತೂಇಂತೂ ಕೆಎಎಸ್‌ಗಳನ್ನೆಲ್ಲಾ ಕಿತ್ತೊಗೆದು ಅವರ ಜಾಗದಲ್ಲಿ ಐಎಎಸ್‌ಗಳನ್ನ ಜಿಲ್ಲಾಧಿಕಾರಿಗಳಾಗಿ ಪ್ರತಿಷ್ಠಾಪಿಸಿದರು. .

ಒಪ್ಪಬೇಕಾದ ಕೆಲಸಾನೇಯ, ಆದರೆ ಹಿಂದೆಲ್ಲಾ ಚುನಾವಣಾ ಅಕ್ರಮಗಳು ನಡೀತಾನೆ ಇದ್ವೊ. ಅಲ್ಲಿ ಇಷ್ಟು ರೂಪಾಯಿ ಹಿಡಿದು ಹಾಕಿದೊ! ಇಲ್ಲಿ ಇಷ್ಟು ವಸ್ತು ಜಪ್ತಿಮಾಡಿದೊ ಅಂತ ಆಗೆಲ್ಲಾ ಸಂಬಂಧಿಸಿದವರು ಮಾಧ್ಯಮಗಳ ಮುಂದೆ ಕೊಚ್ಚಿಕೊಳ್ಳುತ್ತಿದ್ದರು. ಹಾಗೆ ಅಕ್ರಮವಾಗಿ ಸಾಗಿಸುತ್ತಿದ್ದ ಹಣ, ವಸ್ತು ಹಿಡಿದ್ರಲ್ಲಾ ಅದೇನಾಯ್ತು ಅಂತ ಯಾರಿಗೂ ತಿಳಿದಂಗಿಲ್ಲ. ಅದು ಹಾಳಾಗಲಿ ಯಾವುದೋ ಪಕ್ಷವ್ವೋ, ರಾಜಕಾರಣಿಯೋ ಇದನ್ನೆಲ್ಲ ಸಾಗಿಸೋಕೆ ಕುಮ್ಮಕ್ಕು ಕೊಟ್ಟಿರಬೇಕಲ್ಲವಾ.

ಇಂತಹ ಯಾರಿಗಾದರೂ ಶಿಕ್ಷೆ ಆಯಿತಾ ಅನ್ನೊದೇ ತಿಳಿತಿಲ್ಲ. ಶಿಕ್ಷೆ ಖಚಿತ ಅಂತ ಹುಲಿಯಂಗೆ ಅಬ್ಬರಿಸಿ ಆಮೇಲೆ ಇಲಿ ಆಯಿತಾ ಆಯೋಗ? ಇದು ಚುನಾವಣಾ ನಂತರದ ನೀತಿಸಂಹಿತೆ ಇರಬೇಕು ಅಂತ ಜನ ಅನುಮಾನ ಪಡ್ತಾ ಅವ್ರೆ. ಈ ಬಾರಿ ಹಂಗೆ ಆಗಲ್ಲವಂತೆ ಕಣ್ರೀ, ತಪ್ಪಿತಸ್ಥರಿಗೆ ಶಿಕ್ಷೆ ಖಚಿತ ಆಗುತ್ತಂತೆ! ಅವರ ಮಾತಿನ ಮೇಲೆ ಭರವಸೆಯಿಟ್ಟು ಭ್ರಷ್ಟಾಚಾರರಹಿತ ಚುನಾವಣೆ ನಡೆಸಲು ಆಯೋಗದೊಂದಿಗೆ ಕೆಲವು ಸಂಘಟನೆಗಳೂ ಕೈಜೋಡಿಸಿವೆ.

ಇದನ್ನೆಲ್ಲಾ ಯೋಚಿಸುತ್ತಾ ಬರ್‍ತಿದ್ದೆ. ಕ್ಯಾತ ಎದುರಿಗೆ ಬಂದ.

'ನಂಸ್ಕಾರ ಸಾ' ಅಂದ.

'ನಂಸ್ಕಾರ ಪಾ' ಅಂದೆ.

ಇಲ್ಲಿ ಕ್ಯಾತನ ಪರಿಚಯ ಆಗಲೇಬೇಕು.

ಅವನು ನಾಯಕ ಅಲ್ಲ, ನಾಯಕನ ಚೇಲಾ. ಲೋಕಲ್ ಪುಡಾರಿ. ತನ್ನ ಗುರುವಿನ ಸೇವೆಯೇ ಅವನ ಧ್ಯೇಯ. ಗುರುವಿನ ವಿರೋಧಿಗಳು ಇವನ ಶತ್ರುಗಳು. ತಾನು ಮತ್ತು ತನ್ನ ಗುರು ಮಾಡುವುದೆಲ್ಲಾ ಸರಿ ಎಂಬ ಜಾಯಮಾನ. ತಪ್ಪು ಎಂದವರಿಗೆ ಆಗುವನು ಬಾಹುಬಲಿ!

ಇಂತ ಪ್ರಭೃತಿ ಒಳ್ಳೆಯ ಸಮಯದಲ್ಲೇ ಸಿಕ್ಕಿದ್ದ.

'ಈಗ ನಿನಗೆ ಶಾನೆ ಕಷ್ಟ ಆಗಿರಬೇಕಲ್ವಾ' ಅಂದೆ.

'ಯಾಕ ಸಾ?'

ಚುನಾವಣಾ ಆಯುಕ್ತರ ಕ್ರಮ ವಿವರಿಸಿದೆ.

ಕೇಳಿಸಿಕೊಂಡು ಬಿದ್ದು ಬಿದ್ದು ನಕ್ಕ. ಹೊಟ್ಟೆ ಹಿಡಿದುಕೊಂಡು ನಕ್ಕ.

ಸುಧಾರಿಸಿಕೊಂಡು 'ನಿಮ್ಗೆ ಬುದ್ಧಿ ಐತಾ' ಅಂದ.

ಪ್ರಶ್ನೆ ತೀಕ್ಷ್ಣವಾಗಿತ್ತು. ದುರುಗುಟ್ಟಿ ನೋಡಿದೆ.

'ಬೇಜಾರು ಮಾಡ್ಕೋಬ್ಯಾಡಿ ಸಾ, ನೀವೇ ಹೇಳಿ, ನಾವೇನ್ ಎಳೆ ಮಗನಾ.'

ಗಡವನ ಹಾಗೆ ಬೆಳೆದಿದ್ದ. 'ಅಲ್ಲ' ಅನ್ನಲೇಬೇಕಾಯ್ತು.

'ಹಂಚೋದ ವಂಚೋದ ಕಾಯ್ತಾರಂತೆ, ಕಾಯಲಿ ಬಿಡಿ. ಯಾವಾಗ ಸಾ ಕಾಯೋದು?'

'ಯಾವಾಗ ಅಂದ್ರೆ ಏನೋ ಅರ್ಥ?'

'ನೀತಿಸಂಹಿತೆ ಬಂದ ಮೇಲಲ್ವಾ ಸಾ?'

'ಹೂಂ.'

'ಅವೆಲ್ಲ ಆಗ್ಲೆ ತಲ್ಪಬೇಕಾದ ಜಾಗ ತಲ್ಪವೆ ಸಾ' ಅಂತ ಹಾಡಿದ!

ಅರ್ಥ ಆಗಲಿಲ್ಲ, ಬಿಡಿಸಿ ಹೇಳಲು ಕೇಳಿದೆ.

ಪ್ರತೀ ಹಳ್ಳಿಯಲ್ಲಿಯೂ ಅಭ್ಯರ್ಥಿಯ ಕಟ್ಟಾ ಬೆಂಬಲಿಗರು ಇರುತ್ತಾರಂತೆ. ಅವರು ಮನೆಗಳಿಗೆ ತಲುಪಿಸಬೇಕಾದ್ದನ್ನು ತಲುಪಿಸಿಯಾಗಿದೆಯಂತೆ!

ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಅಂತಾರಲ್ಲಾ ಅದು ನೆನಪಾಯಿತು.

ಇದೇ ಗುಂಗಿನಲ್ಲಿ ಹೋಗುತ್ತಿದ್ದೆ. ಆಗ ಬಡ್ಡಿ ದೊಳ್ಳ ಕಣ್ಣಿಗೆ ಬಿದ್ದ. ಅವಸರ ಅವಸರವಾಗಿ ಹೋಗುತ್ತಿದ್ದ.. 'ಏಯ್ ದೊಳ್ಳ' ಅಂತ ಕೂಗಿದೆ.

'ಅರ್ಜೆಂಟು ಸಾ' ಎನ್ನುತ್ತಾ ಹೋಗಲು ಪ್ರಯತ್ನಿಸಿದ.

'ಅಂತಾದ್ದೇನಪ್ಪ ಅರ್ಜೆಂಟು' ಅಂದೆ.

'ಎಲೆಕ್ಷನ್ನೋರು ದುಡ್ಡು ಹಂಚ್ತಾ ಅವ್ರಂತೆ' ಬಡಬಡಿಸಿದ.

'ನಿನಗೆ ಬಂದ ಭಾಗ್ಯವೇನೋ.'

'ಆಕೇರೀಲಿ ಒಂದು ಭಂಡಕುಳ ಅದೆ. ಈಗ್ಲೇ ವಸೂಲು ಮಾಡ್ಬೇಕು ಸಾ.'

'ಎಷ್ಟು ಬರಬೇಕು?'

'ಹತ್ರತ್ರ ಲಕ್ಷ ಮೀರ್‍ತಾದೇ ಸಾ.'

'ಎಷ್ಟೋಟು ಇದ್ದಾವ್ಲಾ ಹಂಗಾರೆ ಅತನ ಮನೇಲಿ?'


'ಐದವೆ ಸಾ! ಐದು!'

'ಅಮ್ಮಮ್ಮ ಅಂದ್ರು ಒಂದೋಟಿಗೆ ಒಂದು ಸಾವಿರ ಅಂತಾನೆ ಇಟ್ಕಳಾನ, ಹಂಗಾದ್ರು ಎಷ್ಟಾಯಿತು? ಐದು ಸಾವಿರ ಆಯ್ತು, ಲಕ್ಷದ ಮೇಲೆ ಭರಬೇಕು ಅಂತಿ. ಇಲ್ನೋಡಿದ್ರೆ ಐದು ಸಾವಿರ ಬುಟ್ಟು ಮ್ಯಾಕೇರೊಲ್ತು.'

'ನೀವು ಯಾವ ಕಾಲ್ದಲಿ ಇದೀರಿ ಸಾ. ಈಗ ಓಟಿನರೇಟು ಎಷ್ಟಿದೆ ಗೊತ್ತಾ ಸಾ? ಐದು ಐದು ಸಾವಿರ ಅದೆ.'

'ಹಂಗೆ ಇಟ್ಟುಕೊಳ್ಳೆ, ಹಂಗಾದ್ರೂ ಐದೋಟಿಗೆ ಎಷ್ಟಾಯಿತು. ಇಪ್ಪತ್ತೈದು ಆಯಿತಪ್ಪ ಇನ್ನು ಉಳಿದಿದ್ದಕ್ಕೇನು ಮಾಡಿಯೆ?'

'ಒಬ್ಬನೆಯ ಸಾ ನಿಂತಿರೋದು? ನಾಲ್ಕು ಜನ ನಿಂತವ್ರೆ. ಅಂದ್ರೆ ಒಂದು ಲಕ್ಷ ಆಗಲಿಲ್ವಾ ಸಾ' ಎನ್ನುತ್ತಾ ಬರಬರನೇ ಹೊರಟೇಹೋದ.




ಅಣಕ

• ಎಚ್.ಎಲ್.ಕೇಶವಮೂರ್ತಿ

ಇಲ್ಲಿ ಹಗಲೇ ರಾತ್ರಿ; ಅಲ್ಲಿ ರಾತ್ರಿಯೇ ಹಗಲು

ಕನ್ನಂಬಾಡಿ ಕಟ್ಟೆ ಬರಿದಾಗಿತ್ತು,
ನಾಲೆಯ ನೀರು ಬಂದ್ ಆಗಿತ್ತು,
ನಳನಳಿಸುತ್ತಿದ್ದ ಬೆಳೆದು ನಿಂತ
ಪೈರು ಬಿಸಿಲಬೇಗೆಗೆ ಬಾಡುತ್ತಿತ್ತು.



ರೈತನ ಒಡಲಿಗೆ ಬೆಂಕಿ ಬಿದ್ದಿತ್ತು,
ಬೆವರು ಸುರಿಸಿ ಬೆಳೆದ ಬೆಳೆ ನಾಶವಾಗಲುಬಿಡಬಾರದು.

ಹೇಗಾದರೂ ಉಳಿಸಿಕೊಳ್ಳಬೇಕು. ಇದು ಅವನ ಛಲ
ಕಂಡದ್ದು ಒಂದೇ ದಾರಿ.

ಸಾಲಮಾಡಿದ, ಬೋರು ಕೊರೆಸಿದ. ಅಂತರ್ಜ
ಪಾತಾಳ ಸೇರಿತ್ತು, ನೀರು ಸಿಗುವವರೆಗೂ ಕೊರೆಸಿ
ಕೊಯಮತ್ತೂರಿಗೆ ಹೋಗಿ ಮೋಟಾರು ತಂದು ಕೂರಿಸಿ

ಒಲಿದಳೇ ಗಂಗೇ? ತಂಪಾಯಿತೇ ನೆಲ?

ಭೂಮಿಯೊಳಗೆ ನೀರಿತ್ತು, ಮೇಲೆತ್ತಲು ಪಂಪು ಇತ
ಆದರೆ ಚಾಲು ಮಾಡಲು ಕರೆಂಟ್ ಇರಲಿಲ್ಲ!

ಬೆಳೆದುನಿಂತ ಪೈರು ತರಗಾಯಿತು. ಸಾಲ ಮೈಮೇ
ಬಂತು.

ವಿದ್ಯುತ್ ಇಲಾಖೆ ಜಾಹಿರಾತು ನೀಡಿತು: ವಿದ್ಯು
ಅಭಾವ, ನಮ್ಮೊಡನೆ ಸಹಕರಿಸಿ.

ಸಹಕರಿಸಿದರು ಗ್ರಾಹಕರು.

ಏನು ಮಾಡಿತು ಇಲಾಖೆ?

ಅದು ಸಹಕರಿಸಿತು-ಐಪಿಎಲ್ ಪಂದ್ಯಾವಳಿಗಳಿಗೆ
ರಾತ್ರಿ ಪಂದ್ಯ ವಿದ್ಯುತ್ತಿನಿಂದ ಹಗಲಾಯಿತು ರಾತ್ರಿ

ಸಂಬಂಧಿಸಿದ ಎಲ್ಲರ ಮೆಚ್ಚುಗೆ
ಪಾತ್ರವಾಯಿತು ಇಲಾಖೆ.

ಪಂದ್ಯಾವಳಿ ರಾತ್ರಿಯೇ ಏಕೆ
ಹಗಲು ಮಾಡಬಾರದೇ?


ಕೂಡದು! ಕೂಡದು! ಇದು ಗಣ್ಯರ ನಿರ್ಧಾರ

ಕೆಲ 'ಗೋ' ಕಥೆಗಳು




"ಗೋವು ನಮ್ಮ ದೇವರು"
"ಗೋಮಾಂಸ ಭಕ್ಷಕರೆಲ್ಲಾ ರಾಕ್ಷಸರು"
ಘೋಷಣೆಗಳನ್ನು ಮುದ್ರಿಸಿದ ಪೋಸ್ಟರುಗಳನ್ನು
ಗೋರಕ್ಷಕ ಪಡೆಯೊಂದು
ಜಿಲ್ಲಾಧಿಕಾರಿ ಕಚೇರಿಯ ಗೋಡೆಗೆ ಅಂಟಿಸುತ್ತಿತ್ತು.
ಆಗಲೇ, ಹಸಿದ ಬೀದಿ ದನವೊಂದು
ಹಸಿಹಸಿಯಾಗಿಯೇ ಆ ಪೋಸ್ಟರುಗಳನ್ನು ತಿಂದುಬಿಟ್ಟಿತು.
ರೊಚ್ಚಿಗೆದ್ದ ಗೋರಕ್ಷಕರು
ಕಲ್ಲು, ಕೋಲುಗಳಿಂದ ದನಕ್ಕೆ ಥಳಿಸಿ, ಒದ್ದೋಡಿಸಿ
ಸುತ್ತಲೂ ಕಣ್ಣು ಹಾಯಿಸಿ
ಯಾರೂ ಇದನ್ನು ಗಮನಿಸಲಿಲ್ಲವೆಂದು ಖಾತ್ರಿಪಡಿಸಿಕೊಂಡರು
****
ಗೋರಕ್ಷಕರ ಘೋಷಣೆಗಳ ಆರ್ಭಟಕ್ಕೆ ಬೆಚ್ಚಿಬಿದ್ದು
ರೊಚ್ಚಿಗೆದ್ದ ದನವೊಂದು
ಅವರನ್ನೇ ಅಟ್ಟಿಸಿಕೊಂಡು ಬಂತು
ಎದ್ದೆನೋ ಬಿದ್ದೆನೋ ಎಂದೋಡಿದ ಗೋರಕ್ಷಕರು
ಕಸಾಯಿಖಾನೆಯ ಕಾಂಪೌಂಡು ಹಾರಿ
ತಮ್ಮನ್ನು ತಾವು ಗೋವಿನಿಂದ ರಕ್ಷಿಸಿಕೊಂಡರು!
****
ಪಾಠ ಮಾಡುತ್ತಾ ಕನ್ನಡ ವ್ಯಾಕರಣ ಮೇಷ್ಟ್ರು ಕೇಳಿದರು-
"ಹಸುವೆಂಬ ಅರ್ಥದ 'ದನ'ಕ್ಕೆ ಬಾಲ ಇದೆಯೋ ಇಲ್ಲವೋ?"
ಎಲ್ಲರೂ ಇಲ್ಲವೆಂದರೂ ತರಗತಿಯಲ್ಲಿ
ಗೋರಕ್ಷಕನ ಮಗ ಮಾತ್ರ ಇದೆಯೆಂದು ವಾದಿಸಿದ!
****
ಗೋವಿನ ಬಗ್ಗೆ ಜಾಗೃತಿ ಮೂಡಿಸಲು
ಗೋರಕ್ಷಕ ಪಡೆ
ಹಳ್ಳಿಯಲ್ಲಿ ಪಾದಯಾತ್ರೆ ಕೈಗೊಂಡಿತು.
ಗುಂಪಿನ ನಾಯಕನನ್ನು ಗುರುತಿಸಿದ
ಒಂದು ನಾಯಿ ಕೂಡಾ ಅವರನ್ನು ಹಿಂಬಾಲಿಸಿತು.
ಕೆಲದಿನಗಳ ಹಿಂದೆ ಅವನು
ಎಲ್ಲಿಂದಲೋ ಪಾರ್ಸೆಲ್ ತಂದ ಬೀಫನ್ನು
ಕದ್ದುಮುಚ್ಚಿ ತಿಂದು
ಮೂಳೆಗಳನ್ನು ಇದೇ ನಾಯಿಗೆ ಎಸೆದಿದ್ದ!
****
ಅವನು ಉಗ್ರವಾದ ಗೋರಕ್ಷಕ
"ಗೋಮಾಂಸ ತಿನ್ನುವವರ ಕತ್ತು ಸೀಳಬೇಕು"

ಹಳಸುತ್ತಿರುವ 'ನೀರು ದೋಸೆ'



ವಿಜಯಪ್ರಸಾದ್ ನಿರ್ದೇಶನದ 'ನೀರುದೋಸೆ' ಚಿತ್ರಕ್ಕೆ ಅಡ್ಡಿ ಆತಂಕಗಳ ಸರಮಾಲೆ ಇನ್ನು ಮುಂದುವರೆಯುತ್ತಲೇ ಇದೆ. ಆರಂಭದಲ್ಲಿ ನಾಯಕಿ ರಮ್ಯಾ ಈ ಚಿತ್ರದಲ್ಲಿ ನಟಿಸಲ್ಲ ಎಂದು ಕೇಳಿಬಂದಿತ್ತು, ಆನಂತರ ವಿಜಯಪ್ರಸಾದ್ ಹಾಗೂಹೀಗೂ ಆಕೆಯನ್ನು ಒಪ್ಪಿಸಿದ್ದರು. ಅದಾದನಂತರ ರಮ್ಯಾ ವಿದೇಶಕ್ಕೆ ಹಾರಿಹೋಗಿದ್ದರಿಂದ ಚಿತ್ರದ ಮುಹೂರ್ತ ಮುಂದೂಡಲ್ಪಟ್ಟಿತ್ತು, ಕೊನೆಗೂ ಚಿತ್ರ ಆರಂಭವಾಯಿತಾದರೂ ಒಂದು ದಿನ ಜೇನುನೊಣಗಳು ...ೀರುದೋಸೆ' ತಂಡದ ಮೇಲೆ ದಾಳಿ ಮಾಡಿ ಸಮಸ್ಯೆ ಆಗಿತ್ತು. ಅದರ ...ನ್ನಲ್ಲೇ ರಮ್ಯಾ ಮತ್ತು ಛಾಯಾಗ್ರಾಹಕರ ನಡುವಿನ ಕೋಳಿಜಗಳ ನಡೆದು ...ರಡು ಮೂರು ದಿನ ಶೂಟಿಂಗ್ ರದ್ದಾಗಿತ್ತು.






ಇವೆಲ್ಲ ಆತಂಕಗಳನ್ನು ದಾಟಿ 'ನೀರುದೋಸೆ' ತಂಡ ನಿಟ್ಟುಸಿರು ...ಡುತ್ತಿರುವಾಗಲೇ ಇದೀಗ ಚುನಾವಣೆ ಘೋಷಣೆಯಾಗಿದೆ. ಚಿತ್ರದ ನಾಯಕ ...ಗ್ಗೇಶ್ ಬಿಜೆಪಿ ಪರ ಪ್ರಚಾರ ಮಾಡಬೇಕಾದರೆ, ಚಿತ್ರದ ನಾಯಕಿ ರಮ್ಯಾ ...ಂಗ್ರೆ ಪರ ರಾಜ್ಯಾದ್ಯಂತ ಪ್ರವಾಸ ಮಾಡಲಿದ್ದಾರೆ.

ಹೀಗಾಗಿ 'ನೀರುದೋಸೆ'ಗೆ ಮತ್ತೆ ಹದಿನೈದು ದಿನಗಳ ಬ್ರೇಕ್ ತೀರ ...ನಿವಾರ್ಯವಾಗಿದೆ. ಅಂತೂ ಈ ಎಲ್ಲ ರಗಳೆಗಳ ನಡುವೆಯೂ 'ನೀರುದೋಸೆ' ...ಗಮವಾಗಿ ಸಾಗುತ್ತಿದೆ ಎಂದು ವಿಜಯಪ್ರಸಾದ್ ಹೇಳುತ್ತಿದ್ದಾರೆ.

ಚುನಾವಣೆ ಮುಗಿದನಂತರ ಜಗ್ಗೇಶ್ ಮತ್ತು ರಮ್ಯಾ ನಡುವಿನ ವೇವ್‌ಲೆಂತ್ ...ಟ್ಟುಕಡಿಮೆ ಆಗದಿದ್ದರೆ ಸಾಕು. ಯಾಕೆಂದರೆ ಇವರಿಬ್ಬರೂ ಬೇರೆ ಬೇರೆ ...ಜಕೀಯ ಪಕ್ಷದವರಾಗಿರುವುದರಿಂದ ಯಾವ ಪಕ್ಷ ಗೆದ್ದರೂ ಇವರ ನಡುವಿನ ...ಬಂಧವೂ ಕೆಟ್ಟು ಹೋಗಬಹುದು ಎಂಬ ಭಯದಲ್ಲಿ ಚಿತ್ರ ತಂಡವಿದೆ.

ಅದೇನೇ ಆದರೂ 'ನೀರುದೋಸೆ' ಬಿಸಿಬಿಸಿಯಾಗಿ ಪ್ರೇಕ್ಷಕರಿಗೆ ಸಿಗುವ ...ಕ್ಷಣಗಳು ಕಾಣಿಸುತ್ತಿಲ್ಲ. ○

ಯಾರ ನಿರೀಕ್ಷೆ ಹುಸಿಯಾಗುತ್ತದೋ?



ನಾಗೇಂದ್ರ ಅರಸ್ ಕನ್ನಡದ ಹೆಸರಾಂತ ಸಂಕಲನಕಾರ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸಂಕಲನದ ಜೊತೆಜೊತೆಗೆ ನಟನೆ ಮತ್ತು ನಿರ್ದೇಶನದ ಕೆಲಸವನ್ನು ಆರಂಭಿಸಿರುವ ನಾಗೇಂದ್ರ ಅರಸ್ ಈ ಬಾರಿ ವಿನೂತನ ರೀತಿಯ ಚಿತ್ರವೊಂದನ್ನು ನಿರ್ದೇಶಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಆ ಚಿತ್ರದ ಹೆಸರು 'ರೇಸ್.'

ಈ ಚಿತ್ರದಲ್ಲಿ ಸಾಧುಕೋಕಿಲ, ರವಿಶಂಕರ್ ಗೌಡ, ಲಯೇಂದ್ರ, ಶಫಿ ಮೊದಲಾದ ನಟರು ಇದ್ದಾರಂತೆ. ಈ ತಾರಾಗಣ ನೋಡಿದಾಕ್ಷಣ ಇದು ಖಂಡಿತವಾಗಿಯೂ ಹಾಸ್ಯಭರಿತ ಚಿತ್ರವೆಂದು ನೀವು ಲೆಕ್ಕ ಹಾಕಬಹುದು. ಆದರೆ ಪ್ರೇಕ್ಷಕರ ಇಂತಹ ನಿರೀಕ್ಷೆಯನ್ನು ಹುಸಿ ಮಾಡುವುದೇ ನಾಗೇಂದ್ರ ಅರಸ್‌ರವರ ಧ್ಯೇಯವಂತೆ.






ಯಾಕೆಂದರೆ ಸಾಧು ಕೋಕಿಲ ಎಂದಾಕ್ಷಣ ಪ್ರೇಕ್ಷಕ ಕಾಮಿಡಿಯನ್ನು ನಿರೀಕ್ಷಿಸುತ್ತಾನೆ. ಆದರೆ ನಾಗೇಂದ್ರ ಅರಸ್ ಕಾಮಿಡಿ ಬದಲಿಗೆ ಸಾಧುಕೋಕಿಲ ಅವರಿಗೆ ಅದಕ್ಕೆ ತದ್ವಿರುದ್ಧವಾದ ಗಂಭೀರ ಪಾತ್ರವನ್ನು ನೀಡುತ್ತಿದ್ದಾರಂತೆ. ಹಾಗೆಯೇ ಚಿತ್ರದ ಬಹುತೇಕ ಎಲ್ಲ ಕಲಾವಿದರಿಗೂ ಅವರ ಇಮೇಜಿಗೆ ವಿರುದ್ಧವಾದ ಪಾತ್ರವನ್ನು ನೀಡಿ ಪ್ರೇಕ್ಷಕರನ್ನು ಅಚ್ಚರಿಗೊಳಿಸುವುದು ಅವರ ಉದ್ದೇಶವಂತೆ.

ನಾಗೇಂದ್ರ ಅರಸ್ ಅವರ ಈ ಒಂದು ಹೊಸ ಪ್ರಯೋಗ ಎಷ್ಟರಮಟ್ಟಿಗೆ ಯಶಸ್ಸು ಕಾಣುತ್ತದೋ ಗೊತ್ತಿಲ್ಲ. ಆದರೆ ಇಂತಹ ಪ್ರಯೋಗಶೀಲತೆಗೆ ಕೈ ಹಾಕುವ ಇವರ ಸಾಹಸವನ್ನು ಮೆಚ್ಚಲೇಬೇಕು. ○



ಎಲ್ಲ ಹಳೆಬಾಕಿ ವಸೂಲಿಗಾಗಿ



ನಿರ್ದೇಶಕರಾಗಿ ತಾರಾವರ್ಚಸ್ಸು ಪಡೆದಿರುವ ಯೋಗರಾಜ್ ಭಟ್ ಮತ್ತು ನಟನಾಗಿ ಭಾರತದ ಮಟ್ಟದಲ್ಲೇ ಹೆಸರು ಮಾಡಿರುವ ಸುದೀಪ್ ಜೋಡಿಯ ಚಿತ್ರ ಸೆಟ್ಟೇರುವ ದಿನಗಳು ಸನ್ನಿಹಿತವಾಗಿವೆ. ಹಾಗೆ ನೋಡಿದರೆ ಯೋಗರಾಜ್ ಭಟ್ಟರ ನಿರ್ದೇಶನದ ಎರಡನೇ ಚಿತ್ರವಾದ 'ರಂಗ ಎಸ್.ಎಸ್.ಎಲ್.ಸಿ'ಯಲ್ಲಿ ಸುದೀಪ್ ನಾಯಕರಾಗಿ ದ್ದರು. ಆ ದಿನಗಳಲ್ಲಿ ಯೋಗರಾಜ್ ಭಟ್ಟರಿಗೆ ತಾರಾಮೌಲ್ಯವೇ ಇರಲಿಲ್ಲ, ಸುದೀಪ್ ಆಗಷ್ಟೆ ಪ್ರವರ್ಧಮಾನಕ್ಕೆ ಬರುತ್ತಿದ್ದ ನಟನಾಗಿದ್ದ.

ಆದರೆ ಈಗ ಇಬ್ಬರು ಬಹಳ ದೊಡ್ಡ ಸ್ಟಾರ್‌ಗಳಾಗಿದ್ದಾರೆ. ಹೀಗಾಗಿ ಇವರಿಬ್ಬರ ಜೋಡಿಯ ಚಿತ್ರ ಅಂದಾಕ್ಷಣ ಗಾಂಧಿನಗರದಲ್ಲಿ ಕುತೂಹಲ ಗಗನಕ್ಕೇರಿದೆ. ಈ ಕನಸಿನ ಜೋಡಿಯನ್ನು ಒಟ್ಟು ಮಾಡಿದ ಕೀರ್ತಿ ನಿರ್ಮಾಪಕರಾದ ಕೆ.ಸಿ.ಎನ್.ಕುಮಾರ್ ಮತ್ತು ಕರಿಸುಬ್ಬುರವರಿಗೆ ಸೇರುತ್ತದೆ.

ವಾಸ್ತವವಾಗಿ ಕೆ.ಸಿ.ಎನ್. ಕುಮಾರ್ ಮತ್ತು ಕರಿಸುಬ್ಬು ಇಬ್ಬರಿಗೂ ಸ್ವತಂತ್ರವಾಗಿ ಸುದೀಪ್ ಚಿತ್ರವನ್ನು ನಿರ್ಮಿಸುವ ಆಸೆ ಇದೆ. ಆದರೆ ಮನಸ್ಸಿಲ್ಲದೆ, ಬೇರೆ ಉಪಾಯವಿಲ್ಲದೆ ಈಗ ಇವರಿಬ್ಬರೂ ಒಂದಾಗಿದ್ದಾರೆ. ಇಲ್ಲಿ ಒಂದು ವಿಶೇಷ ಎಂದರೆ ಯೋಗರಾಜ್ ಭಟ್ ಅವರ ಮೊದಲ ಚಿತ್ರವನ್ನು ನಿರ್ಮಿಸಿದವರು ಇದೇ ಕರಿಸುಬ್ಬು, ಭಟ್‌ರ ಎರಡನೆ ಚಿತ್ರವನ್ನು ನಿರ್ಮಿಸಿದವರು ಕೆ.ಸಿ.ಎನ್. ಕುಮಾರ್. ಈ ಎರಡೂ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ್ದರಿಂದ ಇಬ್ಬರಿಗೂ ನಷ್ಟ ಉಂಟಾಗಿತ್ತು, ಈ ನಷ್ಟವನ್ನು ಸರಿದೂಗಿಸಲು ಈಗ ಭಟ್ಟರು ಅವರಿಗೆ ಕಾಲ್‌ಶೀಟ್ ನೀಡಿದ್ದಾರೆ ಎಂಬ ಸುದ್ದಿ ಗಾಂಧಿನಗರದಲ್ಲಿ ಚಾಲ್ತಿಯಲ್ಲಿದೆ.

ಆ ದಿನಗಳಲ್ಲಿ ಭಟ್ಟರ ನಿರ್ದೇಶನದ ಚಿತ್ರಗಳು ಮುಗ್ಗರಿಸಿದಾಗ ಇದೇ ಭಟ್ಟರ ವಿರುದ್ಧ ಈ ನಿರ್ಮಾಪಕರು ಕಿಡಿಕಾರಿದ್ದರು. ಈಗ ಅವರಿಬ್ಬರು ಅದನ್ನೆಲ್ಲ ಮರೆತು ಮತ್ತೆ ಭಟ್ಟರ ಜೊತೆ ಕೈಜೋಡಿಸಿದ್ದಾರೆ.

ಆದೇನೇ ಇರಲಿ, ಯೋಗರಾಜ್ ಭಟ್ ಮತ್ತು ಸುದೀಪ್ ಜೋಡಿಯ ಚಿತ್ರ ಒಂದು ರೀತಿಯ ಕುತೂಹಲವನ್ನುಂಟುಮಾಡುತ್ತದೆ ಎಂಬುದು ನಿಜ.

● ಶೆಣೈ

ಎಂದಲ್ಲಾ ಆರ್ಭಟಿಸಿ ರಸ್ತೆಯ ನಡುವೆ
ಸಲೀಸಾಗಿ ಚಕ್ರಕ್ಕೆ ಬೆಂಕಿಯಿಟ್ಟ.
ಹಳ್ಳಿಯಲ್ಲಿ ಅವನ ತಾಯಿ
ಟಿ.ಬಿ.ಯಿಂದ ನರಳುತ್ತಿರುವ ತಂಗಿಯ ಸಲುವಾಗಿ
ಊರಿನವರ ಕಣ್ತಪ್ಪಿಸಿ ತಂದ
ಬೊಗಸೆಯಷ್ಟು ಗೋಮಾಂಸವನ್ನು ಬೇಯಿಸುವುದಕ್ಕಾಗಿ
ಒಲೆ ಉರಿಸಲು ಹರಸಾಹಸ ಪಡುತ್ತಿದ್ದಳು!

****

ಹಸುಗಳ ಆರೋಗ್ಯ ವಿಚಾರಿಸಲು ಗೋರಕ್ಷಕ ಪಡೆ
ಊರ ಹಟ್ಟಿಗಳಿಗೆಲ್ಲಾ
ಭೇಟಿ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿತು.
ಊರೆಲ್ಲಾ ತಿರುಗಾಡಿ ಕೊನೆಗೆ ಕಾಯಿಲೆಯಿಂದ ನರಳುತ್ತಿದ್ದ
ಊರಂಚಿನ ಬಡ ರೈತನ ಹಟ್ಟಿಗೂ ತಲುಪಿತು.
ಒಳಹೊಕ್ಕ ಗುಂಪಿನ ನಾಯಕ
ಮೆದುವಾಗಿ ದನದ ಕುತ್ತಿಗೆ ಸವರಿದ.
ಅದರ ಚರ್ಮಕ್ಕಂಟಿಕೊಂಡ ನೆತ್ತರು ಹೀರುವ ಹುಳುಗಳು
ಅವನ ಸ್ಪರ್ಶಕ್ಕೆ ಪುಳಕಗೊಂಡವು!

****

ಅಲ್ಲೊಂದು ಫೋಟೋಶೂಟ್ ನಡೀತಿತ್ತು
ಗೋರಕ್ಷಕರಿಗೆ ಪ್ರಚಾರ ಗಿಟ್ಟಿಸಲೋಸುಗ
ಹೆಸರುವಾಸಿಯಾದ ಕಾವಿಧಾರಿಯೊಬ್ಬ
ಕರುವನ್ನು ತನ್ನ ಎದೆಗೊತ್ತಿ ಹಿಡಿದಿದ್ದ.
ಇನ್ನೇನು ಕ್ಯಾಮೆರಾ ಮಿಂಚಬೇಕು ಎನ್ನುವಷ್ಟರಲ್ಲೇ
ಕರು ಸೆಗಣಿ ಹಾಕಬೇಕೆ...
ಆ ಪವಿತ್ರ ಸ್ವಾಮೀಜಿಗೆ
ಲೀಟರುಗಟ್ಟಲೆ ಹಾಲಿನಲ್ಲಿ ಸ್ನಾನ ಮಾಡಿಸಲಾಯಿತು.
ಪಾಪ ಕರುವಿನ ಬಾಯಾರಿಕೆಗೆ
ತೊಟ್ಟು ನೀರೂ ಸಿಗಲಿಲ್ಲ!

****

ಎಂದಿನಂತೆ ಬೆರಣಿ ತಟ್ಟಲೆಂದು
ಅಜ್ಜಿ ಆ ಕಾಂಪೌಂಡಿನ ಹತ್ತಿರ ಬಂದಳು.
ಇವತ್ತೇನೋ ವಿಶೇಷ ಕಾದಿತ್ತು
ಹಸುವಿನಲ್ಲಿನ ದೈವಾಂಶವನ್ನು ವರ್ಣಿಸುವ ಅನೇಕ ಪೋಸ್ಟರುಗಳನ್ನು
ಗೋರಕ್ಷಕರು ಆ ಕಾಂಪೌಂಡಿಗೆ ಅಂಟಿಸಿದ್ದರು.
ಅನಕ್ಷರಸ್ಥೆಯಾದರೂ ಅಜ್ಜಿಗೆ
ಇವತ್ತು ಬೆರಣಿ ತಟ್ಟುವುದು ಬೇಡವೆನಿಸಿತು.
ಅವಳು ಆ ಪೋಸ್ಟರುಗಳನ್ನೇ ಹರಿದೆಳೆದು
ತನ್ನ ಒಲೆ ಉರಿಸಿಕೊಂಡಳು.

● ವಿಲ್ಸನ್, ಕಟೀಲ್

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 24-04-2013 RNI No. KARKAN

ಬಚ್ಚನ್ ಆಗಮನ




ಸುದೀಪ್ ಮತ್ತು ಶಿವರಾಜ್ ಕುಮಾರ್ ನಡುವಿನ ತೆರೆಮರೆಯ ತಾರಾಸಮರ ಮುಂದುವರೆಯುತ್ತಲಿದೆ.

ಕಳೆದ ವಾರ ಶಿವರಾಜ್‌ಕುಮಾರ್ ಅಭಿನಯಿಸಿರುವ 'ಅಂದರ್ ಬಾಹರ್' ಚಿತ್ರ ಬಿಡುಗಡೆಯಾಯಿತು. ಇದು ಶಿವರಾಜ್‌ಕುಮಾರ್ ಅವರ ಇತ್ತೀಚಿನ ದಿನಗಳಲ್ಲಿ ಸ್ವಲ್ಪ ನಿರೀಕ್ಷೆ ಹುಟ್ಟಿಸಿದ್ದ ಚಿತ್ರ. ಯಾಕೆಂದರೆ ಬಹಳ ದಿನಗಳ ನಂತರ ಅವರು ಹೊಡಿ-ಬಡಿ-ಕಡಿ ಸೂತ್ರದಿಂದ ಹೊರಬಂದು ಇಡೀ ಕುಟುಂಬ ನೋಡುವಂತಹ ಕಥಾವಸ್ತುವಿನ ಚಿತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರದ ಓಪನಿಂಗ್ ಸುಮಾರಾಗಿದ್ದರೂ ಒಂದೆರಡು ವಾರಗಳ ನಂತರ ಇದರ ಬಾಕ್ಸ್ ಆಫೀಸ್ ಕಲೆಕ್ಷನ್ ಸುಧಾರಿಸಬಹುದು ಎಂಬ ನಿರೀಕ್ಷೆ ಇತ್ತು.

ಆದರೆ ಈಗ ದಿಢೀರನೆ ಏಪ್ರಿಲ್ 11, ಅಂದರೆ ಯುಗಾದಿ ಹಬ್ಬದಂದು, ಸುದೀಪ್ ಅಭಿನಯದ 'ಬಚ್ಚನ್' ಚಿತ್ರ ಬಿಡುಗಡೆಯಾಗುತ್ತಿದೆ. ಈ ಚಿತ್ರದ ಅಂತಿಮ ಕೆಲಸಗಳನ್ನು ನಿರ್ದೇಶಕ ಶಶಾಂಕ್ ರಾತ್ರಿ ಹಗಲು ಮಾಡಿ ಮುಗಿಸಿರುವುದು ಎಲ್ಲರಿಗೂ ಅಚ್ಚರಿ ತಂದಿದೆ. ತಿಂಗಳ ಕೊನೆಯಲ್ಲಿ ಬಿಡುಗಡೆಯಾ ಗಬಹುದು ಎಂಬ ನಿರೀಕ್ಷೆಯಲ್ಲಿದ್ದ ಈ ಚಿತ್ರ 'ಅಂದರ್ ಬಾಹರ್' ಬಿಡುಗಡೆಯಾದ ಒಂದೇ ವಾರಕ್ಕೆ ಬಿಡುಗಡೆಯಾಗುತ್ತಿರುವುದು ಗಾಂಧಿನಗರದ ಜನರ ಪಾಲಿಗೆ ಚರ್ಚೆಯ ವಸ್ತುವಾಗಿದೆ.

ಅಂದರೆ 'ಅಂದರ್ ಬಾಹರ್' ಚಿತ್ರದ ವಿರುದ್ಧವಾಗಿ 'ಬಚ್ಚನ್' ಚಿತ್ರವನ್ನು ತರಾತುರಿಯಲ್ಲಿ ಬಿಡುಗಡೆ ಮಾಡುತ್ತಿದ್ದಾರೆ ಎಂದೇ ಅರ್ಥೈಸಲಾಗುತ್ತಿದೆ.





ಉಪ್ಪಿಯ ತ್ಯಾಗ ತಂತ್ರ!

ಉಪ್ಪಿಯ ತಂತ್ರ ಮತ್ತೊಮ್ಮೆ ವರ್ಕ್ ಔಟ್ ಆಗಿದೆ. ಅವರ ಸ್ವಂತ ಬ್ಯಾನರ್ ಅಡಿ ಸಿನಿಮಾ ನಿರ್ಮಾಣವಾಗುವ ಬದಲು ಬೇರೆಯವರ ನಿರ್ಮಾಣದ ಸಿನಿಮಾ ಘೋಷಣೆಯಾಗಿದೆ. ಹೀಗೆ ಆಗುವಂತೆ ನೋಡಿಕೊಳ್ಳುವ ಕಲೆಯನ್ನು ಉಪ್ಪಿ ಕರಗತ ಮಾಡಿಕೊಂಡಿದ್ದಾರೆ.



ನಿಮಗೆ ನೆನಪಿರಬಹುದು, ಉಪ್ಪಿ ನಟಿಸಿದ್ದ 'ಕಲ್ಪನಾ', 'ಗಾಡ್‌ಫಾದರ್' ಮತ್ತು 'ಕಠಾರಿವೀರ ಸುರಸುಂದರಾಂಗಿ' ಸಿನಿಮಾಗಳು ಬಾಕ್ಸ್ ಆಫೀಸಿನಲ್ಲಿ ತೋಪಾದಾಗ ಉಪ್ಪಿ ಸ್ವಂತ ಬ್ಯಾನರ್ ಅಡಿ ನಿರ್ಮಿಸಿ, ನಿರ್ದೇಶಿಸಿ, ನಟಿಸಲಿರುವ 'ಉಪ್ಪಿ- ಭಾಗ 2' ಪ್ರಾರಂಭವಾಗಲಿದೆ ಎಂದು ಪುಕಾರು ಎದ್ದಿತ್ತು.

ಹೇಗೆ ತಾನು ನಟಿಸಿರುವ ಸಿನಿಮಾಗಳು ಸೋತಾಗ ಮುಂದೆ ತಾನೇ ಹೊಸ ಚಿತ್ರವನ್ನು ಮಾಡಲಿದ್ದೇನೆ ಎಂದು ಪುಕಾರು ಹಬ್ಬಿಸುವುದು ಉಪ್ಪಿಯ ತಂತ್ರ. ಯಾಕೆಂದರೆ ಆಗ ಅವರಿಗಿನ್ನೂ ತಾರಾಮೌಲ್ಯವಿದೆ ಎಂದು ಭಾವಿಸಿ ಇತರೆ ನಿರ್ಮಾಪಕರು ಅವರ ಮನೆಗೆ ದೌಡಾಯಿಸುತ್ತಾರೆ. ಆಗ ಉಪ್ಪಿ ಹೊಸಬರ ಸಿನಿಮಾವನ್ನು ಒಪ್ಪಿಕೊಂಡು ತಮ್ಮ ಸ್ವಂತ ಚಿತ್ರವನ್ನು ಮುಂದೂಡುವ ಮೂಲಕ ತಾವು ತ್ಯಾಗ ಮಾಡಿದ್ದೇನೆ ಎಂದು ಬಿಂಬಿಸಿಕೊಳ್ಳುತ್ತಾರೆ.



ಇತ್ತೀಚೆಗೆ 'ಟೋಪಿವಾಲ' ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿದ ನಂತರವೂ ಹಾಗೆಯೇ ಆಗಿದೆ. ಉಪ್ಪಿ ಮತ್ತೊಮ್ಮೆ ತನ್ನ ಹೊಸ ಚಿತ್ರ ಪ್ರಾರಂಭವಾಗಲಿದೆ ಎಂಬ ಗಾಳಿ ಸುದ್ದಿ ಹಬ್ಬಿಸಿದರು. ಅದನ್ನು ಕೇಳಿ ನಿರ್ಮಾಪಕ ಆರ್.ಚಂದ್ರು ಉಪ್ಪಿಯ ಕಾಲ್‌ಶೀಟ್‌ಗಾಗಿ ಉಪ್ಪಿ ಮನೆ ಕಡೆಗೆ ಹೋದರು. ಈಗ ಉಪ್ಪಿ "ನನ್ನ ಸ್ವಂತ ಬ್ಯಾನರ್‌ನ ಚಿತ್ರವನ್ನು ಚಂದ್ರು ಅವರಿಗೆ ಕಾಲ್‌ಶೀಟ್ ನೀಡಿದ್ದೇನೆ" ಎಂದು ಘೋಷಿಸಿದ್ದಾರೆ. ಸದ್ಯದಲ್ಲೇ ಉಪ್ಪಿ ನಾಯಕನಾಗಿ ನಟಿಸಲಿರುವ ಚಂದ್ರು ನಿರ್ದೇಶನದ 'ನಾನೇ ಬ್ರಹ್ಮ' ಎಂಬ ಚಿತ್ರ ಆರಂಭವಾಗಲಿದೆ.

ಅಂದರೆ ಉಪ್ಪಿ ನಿರ್ಮಾಣ ಸಂಸ್ಥೆಯ 'ಉಪೇಂದ್ರ ಭಾಗ-2' ಚಿತ್ರ ಈ ವರ್ಷದ ಕೊನೆಯತನಕವೂ ಆರಂಭವಾಗುವುದಿಲ್ಲ ಎಂಬುದು ಗಾಂಧಿನಗರದ ಬ್ರಹ್ಮರು ನುಡಿಯುತ್ತಿರುವ ಭವಿಷ್ಯ. ಹೇಗಿದೆ ಉಪ್ಪಿಯ ತಂತ್ರ?!

ಶಂಕರೇಗೌಡರ 'ಡರ್ಟಿಪಿಕ್ಚರ್?'

ಪಾಕಿಸ್ತಾನದ ವೀಣಾ ಮಲ್ಲಿಕಾ ಕನ್ನಡ ಚಿತ್ರದಲ್ಲಿ ನಟಿಸುತ್ತಿರುವ ಬೆನ್ನಲ್ಲೇ, ಬ್ರಿಟನ್‌ನಿಂದ ನಾಯಕಿಯೊಬ್ಬಳನ್ನು ಕನ್ನಡ ಚಿತ್ರವೊಂದರಲ್ಲಿ ನಟಿಸಲು ನಿರ್ಮಾಪಕ ಶಂಕರೇಗೌಡ ಕರೆದುಕೊಂಡು ಬಂದಿದ್ದಾರೆ. ಶಂಕರೇಗೌಡರು ಮತ್ತು ಶಂಕರ ರೆಡ್ಡಿ ಸೇರಿ ನಿರ್ಮಿಸುತ್ತಿರುವ 'ಗೋವಾ' ಎಂಬ ಚಿತ್ರದ ಮುಹೂರ್ತ ವಿಜೃಂಭಣೆಯಿಂದ ನಡೆದಿದೆ. ಈ ಚಿತ್ರದಲ್ಲಿ ಶ್ರೀಕಿ, ಕೋಮಲ್ ಮತ್ತು ತರುಣ್‌ಚಂದ್ರ ಎಂಬ ಮೂವರು 20ರ ಆಸುಪಾಸಿನ ಯುವ ನಟರಿದ್ದಾರೆ. ಆದರೆ ಚಿತ್ರದ ನಾಯಕಿ ಯಾರು, ಆಕೆಯ ವಯಸ್ಸು ಎಷ್ಟು ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು.



ಆಕೆಯ ಹೆಸರು ರೇಚಲ್ ವೈಸ್, ವಯಸ್ಸು 43!

ಅಂದರೆ 43ರ ಹರೆಯದ ನಾಯಕಿ ಜೊತೆಗೆ 20ರ ಹರೆಯದ ಯುವಕರು ನಟಿಸುತ್ತಿದ್ದಾರೆ ಎಂದಾಕ್ಷಣ ಈ ಚಿತ್ರದ ಕಥೆ ಹೇಗಿರಬಹುದೆಂದು ಊಹಿಸಬಹುದಲ್ಲದೆ ಶಂಕರೇಗೌಡರು ಕನ್ ಇನ್ನೊಂದು 'ಡರ್ಟಿ ಪಿಕ್ಚರ್' ನೀಡುತ್ತಿದ್ದಾರೆ ಎಂದೂ ಸುಲಭ ಹೇಳಬಹುದು.

ಅಂದಹಾಗೆ ಈ ಚಿತ್ರದ ಶೇ. 90 ಭಾಗ ಗೋವಾ ಚಿತ್ರೀಕರಣಗೊಳ್ಳಲಿದೆಯಂತೆ. ಇದರರ್ಥ ಗೋವಾದ ಬೀಚ್, ಬಿಕಿನಿ ಇತ್ಯಾದಿಗಳೇ ತುಂಬಿರುತ್ತವೆ ಎಂ ಹೇಳಬಹುದು. ಚಿತ್ರದ ಉಳಿದ 10 ಭಾಗ ಬೆಂಗಳೂರಿ ನಡೆಯಲಿದೆ. 'ಅದ್ದೂರಿ' ಎಂಬ ಸದಭಿರುಚಿಯ ಚಿತ್ರ ನಿರ್ಮಿಸಿದ್ದ ಶಂಕರ ರೆಡ್ಡಿ ಮತ್ತು ಇಲ್ಲಿಯತನಕ ಸುದೀಪ್ ಹಾಕಿಕೊಂಡು ಸಿನಿಮಾಗಳನ್ನು ತೆಗೆಯುತ್ತಿದ್ದ ಶಂಕರೇಗೌ ಇವರಿಬ್ಬರು ಗೆಳೆಯರು ಸೇರಿ ಇಂತಹ ಚಿತ್ರವನ್ನು ಮಾಡುತ್ತಿದ್ದಾರೆ ಎಂಬು ಆಶ್ಚರ್ಯದ ವಿಷಯ.

ಅಂದಹಾಗೆ ಈ 'ಗೋವಾ' ಚಿತ್ರವನ್ನು ಸೂರ್ಯಗೌಡ ಎಂಬುವ ನಿರ್ದೇಶಿಸುತ್ತಿದ್ದಾರೆ.

• ಶೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com